
ಏಪ್ರಿಲ್ : ೧೯೭೯ ಸಂಪುಟ : ೪

ಬಸವ ಶಕೆ : ೮೭೨ ಸಂಚಿಕೆ : ೧೨

ಕಲ್ಯಾಣ ಕಿರಣ



ಕಲ್ಯಾಣ ಕಿರಣ
ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ

ಜಗದ್ಗುರು ಮಾತೆ ಮಹಾದೇವಿ

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ

ಬೆಂಗಳೂರು-೫೬೦೦೧೦

ಕಲೆ :

ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್

ಬೆಂಗಳೂರು-೫೬೦೦೫೩

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ, ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಕಲ್ಯಾಣ ಕಿರಣ

ಸಂಪುಟ ೪ ಏಪ್ರಿಲ್ ೧೯೭೪ ಸಂಚಿಕೆ ೧೨

ಬಸವ ಚರಣಕೆ ನುಡಿನೈವೇದ್ಯ

ಜ್ಯೋತಿ ಜಗವ ಬೆಳಗೆ ಬಸವನಾ
ಜ್ಯೋತಿ ಜಗವ ಬೆಳಗೆ ||ಪ||
ಧರ್ಮಾಗಸದಲಿ ನಿಶೆಯು ಕವಿದಿರಲು
ಬಾಲ ರವಿಯೊಲು ಚದುರಿಸ ಬಂದಾ ||ಅ. ಪ||
ಮೂಢರೂಢಿಯ ಬಂಧನ ಬಿಗಿದಿರೆ
ಮುಗ್ಧ ಮಾನವನು ಸಂಕಟ ಪಡುತಿರೆ
ಮರೆವಿನ ತಿಮಿರದಿ ಮುಂದಕೆ ನಡೆಸಲು
ಮಂಗಳ ಮುಂಬೆಳಕಾಗಿ ಬಂದಾ ||೧||
ಹೆಣ್ಣಿಗೆ ಮಾಯೆಯ ಪಟ್ಟವ ಕಟ್ಟಿ
ಹೊತ್ತೊಡಲನ್ನೆ ಪಾಡಿ ತಾನೆನುತ
ಕೀಳ್ತನದೊರೆಯ ಬೆನ್ನಿಗೆ ಹೇರಿದ
ಪುರುಷರ ಭ್ರಾಂತಿಯ ಬಿಡಿಸುತ ಬಂದಾ ||೨||
ಮರೆದೊಡೆ ಮಾನವ ಅರಿದೊಡೆ ಶರಣನು
ಮೇಲುಕೀಳೆಂಬ ಭ್ರಾಂತಿಯದೇತಕೆ ?
ಸರ್ವಸಮತೆಯ ಕ್ರಾಂತಿಯ ಸಾರಲು
ದೈವೀ ಕಹಳೆಯ ಮೊಳಗುತ ಬಂದಾ ||೩||
ಭಾರತ ಜನನಿಯ ಕೀರ್ತಿಯ ಕಂದ
ವಿಶ್ವಾಗಸದ ಚಿನ್ಮಯ ಭಾನು
ಮನುಕುಲ ಸರಸಿಯ ಅಂದದ ಅಂಬುಜೆ
ಸಚ್ಚಿದಾನಂದ ಕಂದ ತಾ ಬಂದಾ ||೪||

ಜಗದ್ಗುರು ಮಾತೆ ಮಹಾದೇವಿ


ಕಲ್ಯಾಣ ಕಿರಣ

ಮಾಸ ಪತ್ರಿಕೆ

ಏಪ್ರಿಲ್ ೧೯೭೯	ವಾರ್ಷಿಕ ಚಂದಾ ೧೨ ರೂ.	ಸಂಪುಟ ೪
ಬಸವಶಕೆ ೮೬೨	ಆಜೀವ ಸದಸ್ಯತ್ವ ೧೫೧ ರೂ.	ಸಂಚಿಕೆ ೧೨

ಒಳಗಿನ ಪುಟದಲ್ಲಿ

ಮುಖಪುಟ : ವಿಶ್ವವಿಭೂತಿ ಬಸವಣ್ಣನವರು



ಪುನರುಜ್ಜೀವನ ದೃಷ್ಟಿ ಮತ್ತು ಸುಧಾರಣಾತ್ಮಕ ದೃಷ್ಟಿ

ಒಂದು ವಿಶೇಷವಾದ ಹಿನ್ನೆಲೆಯಲ್ಲಿ ಭಾಷಣಮಾಡುತ್ತ ನಮ್ಮ ರಾಷ್ಟ್ರದ ವಿದೇಶಾಂಗ ಸಚಿವರಾದ ಶ್ರೀ ಅಟಲಬಿಹಾರಿ ವಾಜಪೇಯಿಯವರು ನುಡಿದರು : "ಇಂದಿನ ನಮ್ಮ ಧಾರ್ಮಿಕ ದೃಷ್ಟಿಕೋನ ಪುನರುಜ್ಜೀವನಗೊಳಿಸುವದಕ್ಕಿಂತ ಸುಧಾರಣಾತ್ಮಕವಾಗಿರಬೇಕು." ಆ ಹಿನ್ನೆಲೆ ಏನೇ ಇರಲಿ, ಈ ವಾಕ್ಯ ನನ್ನ ಮನಸ್ಸಿಗೆ ತಟ್ಟಿತು, ವಿಚಾರ ಪ್ರಜ್ಞೆಯನ್ನು ಉದ್ದೀಪಿಸಿತು. ಏನು ಇದರ ಅಂತರಾರ್ಥ ? ಅನೇಕ ಮೌಲ್ಯಗಳು ಸಮಾಜ ರಾಷ್ಟ್ರಗಳ ಪ್ರಗತಿಗಾಗಿ, ಒಂದು ಕಾಲದಲ್ಲಿ ರೂಪಿಸಲ್ಪಡುತ್ತವೆ. ಒಂದು ನೆಲ, ರಾಷ್ಟ್ರ, ಜನಾಂಗ, ಸಮಾಜ ಮುಂತಾದ ಘಟಕಗಳ ಸುವ್ಯವಸ್ಥೆ ಸುಗಮತೆಗಳಿಗಾಗಿ. ಹಿರಿಯರೋ ಬುದ್ಧಿವಂತರೋ, ನಿಯಮಗಳನ್ನು ಮಾಡುವವರೋ ಕೆಲವು ವಿಚಾರ, ಆಚಾರಗಳನ್ನು ರೂಪಿಸುವರು, ಶಾಸ್ತ್ರಗಳ ರೂಪದಲ್ಲಿ ಶಾಸನವನ್ನು ವಿಧಿಸುವರು. ಪರಿಸರಕ್ಕನುಗುಣವಾದ ನಿಯಮಗಳು ರೂಪುಗೊಳ್ಳುವವು. ಕಾಲಾನುಕಾಲಕ್ಕೆ ಪರಿಸರ ಬದಲಾದಂತೆ ಮೌಲ್ಯಗಳೂ ಬದಲಾವಣೆಗೊಳ್ಳತೊಡಗುವವು. ಆಗ ನೂತನವಾಗಿ ಹರಿದು ಬರುವ ವಿಚಾರವಾಹಿನಿ ಹಳೆಯ ಮೌಲ್ಯಗಳಿಗೆ ಹೊಂದಿಕೊಳ್ಳದೆಯೇ ಇರಬಹುದು. ಆಗ ಒಂದು ಸಂಘರ್ಷ ಪ್ರಾರಂಭವಾಗಿ (Generation Gap). ಜನಾಂಗ ಕಂದರ ಮೂಡುವುದು. ಸಮುದ್ರದ ಬಳಿ ನದಿಗಳು ಬರುವಾಗ ಸಮುದ್ರದ ನೀರಿನ ಸಾಂದ್ರತೆಗೆ ಮತ್ತು ನದಿಯ ನೀರಿನ ಸಾಂದ್ರತೆಯಲ್ಲಿ ವ್ಯತ್ಯಾಸವಿರುವ ಕಾರಣ ಈ ಸಮ್ಮಿಲನ ಜಾಗದಲ್ಲಿ ಸ್ವಲ್ಪ ಏರಿಳಿತ ಮತ್ತು ಹೊಯ್ದಾಟ ಜಾಸ್ತಿಯಾಗುವಂತೆ ನೂತನ ಮತ್ತು ಪುರಾತನ ವಿಚಾರವಾಹಿನಿಗಳ ಸಂಗಮವಾಗುವಾಗಲೂ ಹೀಗೆ ಸಂಘರ್ಷ ಸ್ವಾಭಾವಿಕವಷ್ಟೆ.

ಅಂಥ ಪ್ರಸಂಗದಲ್ಲಿ, ಹಿಂದಿನ ಮೌಲ್ಯಗಳನ್ನು ಸನ್ನದ್ಧವಾಗಿ, ಸ್ಥಿರವಾಗಿ ಉಳಿಸಿಕೊಳ್ಳ

ಬೇಕೆಂಬ ಒಂದು ಆಕಾಂಕ್ಷೆ ಹಿರಿಯ ತಲೆಗಳಲ್ಲಿದ್ದರೆ ಹಿಂದಿನದೆಲ್ಲವನ್ನೂ ಸಂಪೂರ್ಣವಾಗಿ ತಿರಸ್ಕರಿಸಿ ಹೊಸತು ರೂಪಿಸಬೇಕೆಂಬ ಆಕಾಂಕ್ಷೆ ಕಿರಿಯ ತಲೆಗಳದು. ಹಿರಿತನದಿಂದ ಪಕ್ವಗೊಂಡೊ (?) ಅಥವಾ ಸಂಪ್ರದಾಯದಿಂದ ಜಡ್ಡುಗಟ್ಟಿಯೋ ಹಿರಿಯರು ಹೇಳುವ್ರದನ್ನು ಒಮ್ಮತದಿಂದ ತಿರಸ್ಕರಿಸುವ ಮನೋಭಾವ ಕಿರಿಯರಲ್ಲಿಯೂ ಇರಬಹುದು. ಇದಕ್ಕೆ ಕಾರಣ ಹಳೆಯದಾದುದನ್ನು ತಿರಸ್ಕರಿಸಬೇಕೆಂಬ ಪೂರ್ವಾಗ್ರಹ ಪೀಡಿತ ದೃಷ್ಟಿಕೋನವೋ ಅಥವಾ ಒಮ್ಮೆಲೇ ಹೊಸ ಕ್ರಾಂತಿಯಾಗಬೇಕೆಂಬ ಬಿಸಿರಕ್ತದ ಉತ್ಸಾಹವೋ ಇದ್ದಿರಬಹುದು. ಇಂಥ ಪ್ರಸಂಗದಲ್ಲಿ ಹೊಸ ಪೀಳಿಗೆಯನ್ನು ಆಕರ್ಷಿಸುವ, ಹಳೆಯ ಮೌಲ್ಯಗಳನ್ನು ಸ್ಥಿರೀಕರಿಸಲು ಕೆಲವು ನೂತನ ಯೋಜನೆ, ಸುಧಾರಣೆ ಹಾಕಿಕೊಳ್ಳುವುದು ಸ್ವಾಭಾವಿಕ. ಜನಾಂಗ ಕಂದರವನ್ನು ತುಂಬಲು ಈ ಒಂದು ಪ್ರಯತ್ನ ನಡೆಯುವಾಗ ನಮ್ಮ ಮನೋಭಾವ ಏನಿರಬೇಕು ? ಎಂದಾಗ ವಾಜಪೇಯಿಯವರ ಮಾತು ಅರ್ಥಗರ್ಭಿತವೆನ್ನಿಸುತ್ತದೆ. Expire ಆದ ಅಂದರೆ ವಾಯಿದೆ ಮುಗಿದ ನಂತರ ಆ ಔಷಧಿಗಳನ್ನು ಜನರಿಗೆ ಬಳಕೆಗೆ ಕೊಡುವುದು ಎಷ್ಟು ಅಪಾಯಕಾರಿಯೋ ಹಾಗೆ ಮೌಲ್ಯ ಕಳೆದುಕೊಂಡ ಕೆಲವು ಆಚರಣೆಗಳಿಗೆ ಜೀವತುಂಬಲೆತ್ನಿಸಿ ಚಲಾವಣೆಗೆ ತರುವುದೂ ಅಪಾಯಕಾರಿಯೇ. ತೀರಾ ಪಿಸುದುಹೋದ ಹಚ್ಚಡವನ್ನು (ಅಥವಾ ಬಟ್ಟೆಯನ್ನು) ಹೊಲಿದು ರಿಪೇರಿ ಮಾಡುತ್ತೇನೆ ಎನ್ನುವುದಕ್ಕಿಂತ ಅದೇ ಅವಧಿಯಲ್ಲಿ ಹೊಸ ಬಟ್ಟೆಯನ್ನು ನೇಯುವುದು ತುಂಬಾ ಸುಲಭಸಾಧ್ಯ. ಆದ್ದರಿಂದ ನಮ್ಮ ದೃಷ್ಟಿ ಹಿಂದಿನ ಕೆಲವು ತತ್ತ್ವಗಳನ್ನು ಪುನರುಜ್ಜೀವನಗೊಳಿಸುವದಕ್ಕಿಂತ, ಹೊಸ ಹೊಸ ಚಿಂತನಾಶೀಲತೆಯನ್ನು ರೂಪಿಸಿಕೊಳ್ಳುವುದಾಗಿರಬೇಕು.

ಈ ವಾರದ ಸುಧಾ ಪತ್ರಿಕೆ ಓದುವಾಗ ಒಂದೆಡೆ ಶ್ರೀಮತಿ ಅನುಪಮಾ ನಿರಂಜನರವರು ತಮ್ಮ ಧಾರಾವಾಹಿ ಕಥೆಯಲ್ಲಿ ಬರೆದಿದ್ದಾರೆ: ಸಮಾನತೆಯನ್ನು ಸ್ಥಾಪಿಸ ಹೊರಟ ಬುದ್ಧನದು ಒಂದು ಧರ್ಮವಾಗಿ (ಜಾತಿ ಎಂಬರ್ಥದಲ್ಲಿ) ನಿಂತಿತು. ಎಲ್ಲ ಜಾತಿಮತ ಪಂಥಗಳನ್ನು ಅಳಿಸುತ್ತೇನೆಂದು ಹೊರಟ ಬಸವಣ್ಣನವರದು ಒಂದು ಜಾತಿಯಾಗಿ ಪರ್ಯಾವಸಾನ ಹೊಂದಿತು." ಒಂದರ್ಥದಲ್ಲಿ ಇದು ನಿಜ, ಇನ್ನೊಂದರ್ಥದಲ್ಲಿ ಇದು ತಪ್ಪು. ಬುದ್ಧ, ಬಸವ, ನಾನಕ ಮುಂತಾದವರು ಸಮಾಜವನ್ನು ಒಂದುಗೂಡಿಸಹೊರಟು ಒಂದು ನೂತನ ಸ್ವತಂತ್ರ ವಿಚಾರವಾಹಿನಿಯನ್ನು ಕೊಟ್ಟಾಗ ಅವರ ಉದ್ದೇಶ ಧರ್ಮವೊಂದನ್ನು (Religion) ಕೊಡುವುದಾಗಿತ್ತೆ ವಿನಾ ಜಾತಿಯನ್ನು ನಿರ್ಮಾಣ ಮಾಡುವುದಾಗಿರಲಿಲ್ಲ. ಈ ಭೇದಗಳು ಅಳಿದು ಅಖಂಡತೆ ಮೂಡಿಸುವದೇ ವಿನಾ ಮತ್ತೊಂದು ಉಪಪಂಥ ಸೃಷ್ಟಿಸುವದಾಗಿರಲಿಲ್ಲ. ಉದ್ದೇಶ ಉದಾತ್ತವಾಗಿತ್ತು. ಆದರ್ಶ ಉತ್ತುಂಗವಾಗಿತ್ತು. ಮೋಡದಿಂದ ಬಿದ್ದ ನೀರು ನೆಲವನ್ನು ಅಪ್ಪುತ್ತಲೇ ಅದರ ರೂಪ, ರುಚಿ, 'ಬಣ್ಣಗಳು ಬದಲಾಗುವಂತೆ' ಭಾರತೀಯರ ರಕ್ತಗತ ಸಂಸ್ಕಾರದಂತೆ, ಈ ಪ್ರವಾದಿಗಳ

ಮಹಾನ್‌ವಾಣಿ ಜನರನ್ನು ಮುಟ್ಟುತ್ತಲೇ ತನ್ನ ಮೂಲ ಸತ್ವವನ್ನೇ ಕಳೆದುಕೊಳ್ಳತೊಡಗುತ್ತದೆ. ಆಗ ಮೂಲ ಪ್ರವಾದಿಗಳ ಮಹೋನ್ನತ ಧ್ಯೇಯವೇ ಶಿಥಿಲಗೊಳ್ಳತೊಡಗುತ್ತದೆ.


ಒಂದು ಹೊಸ ವಾಹಿನಿಯ ಜನ್ಮವಾಗುತ್ತಿದ್ದಂತೆಯೇ ಆಕರ್ಷಿತಗೊಂಡು ಅನೇಕ ಬುದ್ಧಿಜೀವಿಗಳು, ವಿಚಾರವಂತರೂ, ಪ್ರಗತಿಪರ ವಿಚಾರಧಾರೆಯವರು ಬಂದು ಸಮಾವೇಶವಾಗುವರು. ಯಾವುದೋ ಒತ್ತಡಕ್ಕೆ ಸಿಕ್ಕಿ ಸ್ವಾರ್ಥಿಗಳೂ ಬಂದು ಸೇರಿಕೊಳ್ಳುವರು. ಕೆಲವೊಮ್ಮೆ ವಿಚಾರವಂತರಲ್ಲೇ ಗುಂಪುಗಾರಿಗೆ ಬೆಳೆದು ಅವರೇ ಮತ್ತೊಂದು ಮೇಲ್ವರ್ಗ ಸೃಷ್ಟಿಸಿಕೊಂಡು ಬೇರೊಂದು ಗುಂಪಾಗುವರು. ಅಥವಾ ಯಾವುದಾದರೂ ಸ್ವಾರ್ಥ ಹೊತ್ತು ಬಂದ ಕೆಲವರು ಒಳಗೆ ನಿಂತು ಭೇದಗಳನ್ನು ಸೃಷ್ಟಿಸತೊಡುಗುವಾಗ ಅಲ್ಲಿ ಶಿಥಿಲತೆ ಆರಂಭವಾಗುತ್ತದೆ.

ಸಾಮಾನ್ಯವಾಗಿ ಒಂದು ದೃಶ್ಯ ಕಾಣುತ್ತೇವೆ, ರೇಲ್ವೆ ಪ್ರಯಾಣದಲ್ಲಿ ಜನಸಂಖ್ಯೆ ವಿಪರೀತವಿರುವ ನಮ್ಮ ದೇಶದಲ್ಲಿ ವಿಪರೀತ ಪ್ರಯಾಣಿಕರ ಒತ್ತಡವಷ್ಟೆ. ಆಗ ಒಳಗಿರುವ ಪ್ರಯಾಣಿಕರು ಹೊರಗಿನಿಂದ ಬರುವವರನ್ನು ಒಳಗೆ ಸೇರಿಸಿಕೊಳ್ಳಲು ಇಷ್ಟಪಡರು. ಆಗ ಹೇಗಾದರೂ ಮಾಡಿ ಹೊರಗಿನವರು ಕಿಟಕಿಯಿಂದ ಸಾಮಾನು ತೂರಿಸಿ ಬಾಗಿಲಲ್ಲಿ ಅಡ್ಡ ನಿಂತವರನ್ನು ದೂಡಿ, ಒಳಗೆ ಪ್ರವೇಶಿಸಿ ಇಷ್ಟು ಸ್ಥಾನ ಮಾಡಿಕೊಂಡು ನಿಲ್ಲುವರು. ಆಮೇಲೆ ಕುಳಿತುಕೊಳ್ಳುವರು. ಆದರೆ ಮುಂದಿನ ನಿಲ್ದಾಣ ಬರುತ್ತಿದ್ದಂತೆಯೇ ಮತ್ತೆ ತಾವು ಹಿಂದಿನ ಪ್ರಯಾಣಿಕರೊಡನೆ ಒಂದಾಗಿ ಹೊಸದಾಗಿ ಬರುವವರನ್ನು ನಿರಾಕರಿಸವರು. ಒಳಬರದಂತೆ ತಡೆಯುವರು. ತಾವು ಒಳಬರುವಾಗ ಪಟ್ಟ ಕಷ್ಟನಷ್ಟಗಳನ್ನು ಮರತೇಬಿಡುವರು. ಇದಕ್ಕೊಂದು ಸ್ವಾನುಭಾವದ ಉದಾಹರಣೆ, ಸುಮಾರು ವರ್ಷಗಳ ನನ್ನ ಪ್ರವಚನಾನುಭವದ ನಂತರ ಒಂದು ವಿಷಯ ಅನುಭವಕ್ಕೆ ಬಂದಿತು. 1. ಬಹಳ ಜನ ಲಿಂಗಾಯತರಿಗೆ ಇಷ್ಟಲಿಂಗ ಪೂಜೆಯ ಮರ್ಮ, ಆನಂದ, ಸರಳತೆ, ಉದಾತ್ತತೆ, ವಿಶಾಲತೆ ತಿಳಿದಿಲ್ಲ. ಮತ್ತು 2. ಅಲಿಂಗಿಗಳಿಗೂ ಅದರ ಔನ್ನತ್ಯ ಗೊತ್ತಿಲ್ಲ. ಯಾರು ದೀಕ್ಷಾ ಸಂಸಾರಕ್ಕೆ ಬರುವರೋ ನಾವು ಪೂಜೆ ಮಾಡುವಾಗ ನೋಡಿ ಕಲಿಯುತ್ತಾರೆ. ಉಳಿದ ಅನೇಕರಿಗೆ ದೀಕ್ಷೆ ಎಂದರೇ ತುಂಬಾ ಭಯ. ಹೀಗಿರುವಾಗ ಹತ್ತಿರವೇ ಬರರು, ಪೂಜೆಯ ಅಂತರಾರ್ಥ ತಿಳಿಯುವುದೆಂತು ? ತಮ್ಮ ತಮ್ಮ ಮನೆಯಲ್ಲೇ ಮಾಡಿಕೊಂಡರೂ ಚಿಂತೆಯಿಲ್ಲ ಒಮ್ಮೆ ಪೂಜೆಯಲ್ಲಿ ಭಾಗವಹಿಸಿದರೆ ತಿಳಿಯುವುದು ಎಂದು ನಾನು ಸಾಮೂಹಿಕ ಪೂಜೆ ಮಾಡಿಸತೊಡಗಿದಾಗ ಬಹಳ ಜನಕ್ಕೆ ಆನಂದವಷ್ಟೆ ಅಲ್ಲ, ಪೂಜೆಯ ಮರ್ಮ ತಿಳಿದು ಹೆಚ್ಚಿನ ಸಂಖ್ಯೆಯಲ್ಲಿ ದೀಕ್ಷೆ ಪಡೆಯತೊಡಗಿದರು. ಆಗ ಕೆಲವರು 'ಅಯ್ಯೋ ಸಾಮೂಹಿಕ ಪೂಜೆ ಮಾಡಿ ದೇವರನ್ನೇ (?!) ಮೈಲಿಗೆ ಮಾಡುತ್ತಾರೆ, ಎಂದರೆ 'ಎಲ್ಲ ಜನಾಂಗದವರಿಗೂ ತೋರಿಸುತ್ತಾರೆ.' ಎಂದು ಇನ್ನು ಕೆಲವರು ಅಂದರು. ಸ್ನಾನಮಾಡಿ

ಭಯಭಕ್ತಿ, ಶ್ರದ್ಧೆಗಳಿಂದ ಆನಂದ ತುಂಬಿ ಪೂಜೆ ನೋಡುವ ಓರ್ವ ಯಾವನೇ ವ್ಯಕ್ತಿ ಇರಲಿ ಅವನು ನೋಡಿದರೆ ದೇವರು ಎಂತು ಮೈಲಿಗೆಯಾಗಲು ಸಾಧ್ಯ ? ಸದಾ ಸಂಚಾರಿಗಳಾಗಿ ತಿರುಗುತ್ತಿದ್ದ ಅಕ್ಕಮಹಾದೇವಿ, ಅಲ್ಲಮಪ್ರಭು ದೇವರಂಥ ಚರಜಂಗಮರು ನದಿ ತಟಾಕಗಳಲ್ಲಿ ಕುಳಿತು ಪೂಜಿಸುವಾಗ, ಬೇರಾರೂ ನೋಡದಂತೆ ಪೂಜಿಸಲು, ಧ್ಯಾನಿಸಲು ಸಾಧ್ಯವಾಗುತ್ತಿತ್ತೇ ? ಬಸವಣ್ಣನವರು ಭವಿಭಕ್ತರೆಂಬ ಭೇದ ಇಂದಿನ ಕೆಲವರಂತೆ ಕಟ್ಟುನಿಟ್ಟಾಗಿ ಮಾಡಿದ್ದರೆ. ಅಷ್ಟೊಂದು ಜನ ಎಲ್ಲಾ ಜಾತಿಮತ ಪಂಥ ಪಂಗಡಗಳಿಂದ ಬಂದು ಸಮಾವೇಶವಾಗುತ್ತಿದ್ದರೆ? ಇಂದಿನಂತೆ ಅಂದೂ ವಿಚಾರವಾದಿಗಳು ಇದ್ದಿರಲೂ ಸಾಕು. ಅಂಥವರು ಆಕರ್ಷಿಸಲ್ಪಡಬೇಕಾದರೆ ಪ್ರಗತಿಪರ ಧೋರಣೆ ಬಸವಣ್ಣನವರಲ್ಲಿ ಇಲ್ಲದಿದ್ದರೆ ಆಗುತ್ತಿತ್ತೆ ? ಅವರದ್ದು ಹೆಚ್ಚಾಗಿ ಸಮುದಾಯ ಜೀವನ, ಸಮಾನ ಭಾವ, ವಿಶಾಲ ಧೋರಣೆ. ಆ ಥಾಟಿಗೆ ತದ್ವಿರುದ್ಧವಾಗಿ ಇಂದಿನ ಸಮಾಜ ಸಾಗುತ್ತಲಿಲ್ಲವೇ? ಒಂದು ವೇಳೆ ಅಂದಿನಕ್ಕಿಂತಲೂ ಬದಲಾಗಿರುವ ಇಂದಿನ ಪರಿಸರದಲ್ಲಿ ಕಲಂಕಿತವಾಗದಂತೆ ಅವರ ತತ್ತ್ವವನ್ನು ವಿಶಾಲಗೊಳಿಸಿದರೆ ತಪ್ಪೇನು ?

ಹೀಗೆ ನೂತನ ಧರ್ಮಗಳಲ್ಲಿ ಸೇರಿಕೊಂಡವರು ಪಟ್ಟಭದ್ರ ಹಿತಾಸಕ್ತರೊಡನೆ ಒಂದಾಗಿ ಮತ್ತೆ ಪ್ರಗತಿಗೆ, ಸುಧಾರಣೆಗೆ ಅಡ್ಡ ಬರುವರು. ಇದು ಈ ನೆಲದ ಹುಟ್ಟುಗುಣ. ಹಾಗೆಂದು ಈ ಹೊತ್ತು ಜಾತ್ಯಾತೀತ ಸಮಾಜ ರಚನೆ ಮಾಡಬಯಸುವ ಅನೇಕರು ಧರ್ಮವನ್ನೇ ಬದಿಗಿಟ್ಟು ಕ್ರಾಂತಿ ಮಾಡಬೇಕೆನ್ನುವರು. ಈ ಧೋರಣೆ ಎಷ್ಟರಮಟ್ಟಿಗೆ ಯಶಸ್ಸು ಕಂಡೀತು ? ಎಂಬುದು ಆಲೋಚಿಸಬೇಕಾದ ಪ್ರಶ್ನೆ. ಧರ್ಮವು ರೂಢಿಗೊಂಡರೆ ಜಾತೀಯತೆ ಅದರ ನೆರಳಾಗಿ ಬರುವುದು ಎಂಬ ಸೂತ್ರ ಭಾರತಕ್ಕೆ ಅನ್ವಯ ಮಾತ್ರ. ಅನ್ಯ ದೇಶಗಳು ಅನೇಕವುಗಳಲ್ಲಿ ಜಾತಿಗಳಿಲ್ಲದ, ಮೂಢನಂಬಿಕೆಗಳಿಲ್ಲದ ಧರ್ಮವಂತಿಕೆ ಸಾಧ್ಯವಾಗಿದೆಯಷ್ಟೆ. ನಾವೂ ಮನಸ್ಸು ಮಾಡಿದರೆ ಏಕೆ ಮಾಡಬಾರದು ? ಎರಡನೆಯದಾಗಿ ಯಾವುದಾದರೊಂದು ನೆಪದಲ್ಲಿ ಅಂದರೆ ವರ್ಣವೋ, ವರ್ಗವೋ ಜಾತಿಯೋ, ಅಂತಸ್ತೋ ಭೇದ ಕಲ್ಪಿಸಿಕೊಂಡು ಒಬ್ಬರನ್ನೊಬ್ಬರು, ಮುಖ್ಯವಾಗಿ ಸಬಲರು ದುರ್ಬಲರನ್ನು, ವಿದ್ಯಾವಂತರು ಅವಿದ್ಯಾವಂತರನ್ನು ಸುಜ್ಞಾನಿಗಳು ಅಜ್ಞಾನಿಗಳನ್ನು ಹತ್ತಿಕ್ಕುವ ಶೋಷಣೆ ಸ್ವಭಾವಜನ್ಯ. ಆದ್ದರಿಂದ ಜನರಲ್ಲಿ ವಿಚಾರ ಜಾಗೃತಿ, ವಿಶಾಲಭಾವ ಜಾಗೃತಿ ಮಾಡಬೇಕಾದುದು ಅತ್ಯಾವಶ್ಯಕ ಕಾರ್ಯವೇ ವಿನಾ ಒಬ್ಬರನ್ನೊಬ್ಬರು ಹೀಗಳೆಯುತ್ತ ಕೊಡ್ಡುವುದಲ್ಲ. ಈ ಜಾಗೃತಿಯ ಕಾರ್ಯದಲ್ಲಿ ಸ್ವಪ್ರತಿಷ್ಠೆ, ಕೀರ್ತಿ ವಾರ್ತೆಗಳಿಗಿಂತ ಕಳಕಳಿ ನಿಸ್ಪೃಹ ಮನೋಭಾವ ಅವಶ್ಯಕ. ಆ ದೃಷ್ಟಿಯಲ್ಲಿ ಹಿರಿಯರಲ್ಲಿ ಪುನರುಜ್ಜೀವನ ಸೂತ್ರಕ್ಕಿಂತ ಸುಧಾರಣಾತ್ಮಕ ದೃಷ್ಟಿ ; ಕಿರಿಯರಲ್ಲಿ ಧರ್ಮದ ಬಗ್ಗೆ ತಿರಸ್ಕಾರ, ಅನಾದರಕ್ಕಿಂತ ಒಳ್ಳಿತನ್ನು ಆರಿಸಿಕೊಳ್ಳುವ ಗುಣೈಕದೃಷ್ಟಿ ಅತ್ಯವಶ್ಯಕ.

—ಜಗದ್ಗುರು ಮಾತೆ ಮಹಾದೇವಿ



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಆಸೆ ಆಮಿಷ ತಾಮಸ ಹುಸಿ ವಿಷಯ
ಕುಟಿಲ ಕುಹಕ ಕ್ರೋಧ ಕ್ಷುದ್ರ ಮಿಥ್ಯೆ
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ.
ಅದೇಕೆಂದಡೆ :
ಇವು ನಿಮ್ಮತ್ತಲೆನ್ನ ಬರಲೀಯವು
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು, ಕೂಡಲ ಸಂಗಮದೇವಾ !

(ಬ.ಷ.ವ ೪೬.)

ಬಸವಣ್ಣನವರು ತಾವು ಪರಮಾತ್ಮನಿಗೆ ಮೊರೆಯಿಡುವ ನೆಪದಲ್ಲಿ ನಿಸ್ಪೃಹ ಸಾಧಕ ಜೀವಿಯೋರ್ವನ ಹೃದಯದ ಹಂಬಲವನ್ನು ಚಿತ್ರಿಸಿದ್ದಾರೆ. ಈ ಕಡೆಗೆ ಗುಡ್ಡದ ಮೇಲೆ ಜೀವಾತ್ಮ ; ಆ ಕಡೆಯ ಬೆಟ್ಟದ ಮೇಲೆ ಪರಮಾತ್ಮ. ಮಧ್ಯದಲ್ಲಾದರೋ ವಿಸ್ತಾರವಾಗಿ ಆಳವಾಗಿ ಭಯಂಕರ ಸೆಳವಿನಿಂದ ಹರಿಯುವ ನದಿ. ಹಸಿದ ಕರುವು 'ಅಂಬಾ' ಎಂದು ದೂರದಲ್ಲಿರುವ ತಾಯಿಯತ್ತ ದಿಟ್ಟಿಸುವಂತೆ, ಈ ಜೀವಾತ್ಮ ಭವ ನದಿಯನ್ನು ದಾಟಲಾರದೆ ಪರಮಾತ್ಮನತ್ತ ನೋಡುತ್ತ ನಿಂತು, ಈ ಮೊರೆ ಸಲ್ಲಿಸುವನು. ಆಳವಾದ ಕಂಕದ ಸೆಳವಿನಿಂದ ಕೂಡಿದ ನದಿಗಳು ಇಲ್ಲದಿದ್ದರೆ ನಿಶ್ಚಿಂತನಾಗಿ ಅವನು ಪರಮಾತ್ಮನೊಡನೆ ಮಿಲನ ಹೊಂದುತ್ತಿದ್ದ. ಬರ್ಲಿನ್ ನಗರವನ್ನು ಇಬ್ಭಾಗಮಾಡಿ ಸೀಳಿ, ಮಧ್ಯೆ ಒಂದು ಬೃಹದಾಕಾರದ ಗೋಡೆಯನ್ನೂ, ಮುಳ್ಳು ತಂತಿಯನ್ನೂ ಕಟ್ಟಿದಾಗ ಆಚೀಚೆ ನಿಂತು ನಿಂತು ಅಳುತ್ತಿದ್ದ ಪತಿ ಪತ್ನಿ, ತಾಯಿ ಮಕ್ಕಳು ಮುಂತಾದವರ ಸ್ಥಿತಿಯಂತಾಗಿದೆ ಈ ಜೀವಾತ್ಮನದು.

ಜೀವಾತ್ಮ-ಪರಮಾತ್ಮರೆಂಬ ತಾಯಿ-ಮಕ್ಕಳ ನಡುವೆ ಅಡ್ಡವಾಗಿ ನಿಂತಿರುವ ಕಂದಕ ಯಾವುದು? ಆಸೆ, ಆಮಿಷ, ತಾಮಸ ಇತ್ಯಾದಿಗಳ ಸಂಚಯ. ಆಸೆ, ಮೊದಲ ಆತಂಕ. ತೃಪ್ತಿಯಾದಷ್ಟೂ ದಾಹ ಅಧಿಕಗೊಳ್ಳುವ, ಅದರ ಕ್ಷೇತ್ರ ವಿಸ್ತರಿಸುತ್ತಲೇ ಹೋಗುವ ವಸ್ತು ಆಸೆ.

> ಬಡತನಕ್ಕೆ ಉಂಬುವ ಚಿಂತೆ ಉಣಲಾಡರೆ ಉಡುವ
> ಚಿಂತೆ ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ
> ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ
> ಬದುಕಿದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ
> ಇಂತೀ ಹಲವು ಚಿಂತೆಯಲ್ಲಿದ್ದವರ ನಾಕಂಡೆ
> ನಿನ್ನ ಚಿಂತೆಯಲ್ಲಿದ್ದರನಾರನೂ ಕಾಣೆನೆ ಅಂಬಿಗರ ಚೌಡಯ್ಯ

ಸೂರ್ಯ ಉದಿಸುವಾಗ ತನ್ನ ಕಿರಣಗಳನ್ನು ಸ್ವಲ್ಪ ಸ್ವಲ್ಪವಾಗಿ ವಿಸ್ತರಿಸುತ್ತ ಹೋಗುವಂತೆ, ಹೊಸಹೊಸ ಪ್ರದೇಶಗಳನ್ನು ಬಳಸಿಕೊಳ್ಳುವಂತೆ ಆಸೆಯೂ ಕೂಡ ಒಂದಾದ ಮೇಲೆ ಒಂದರಂತೆ ಪ್ರದೇಶಗಳನ್ನು ಬಳಸಿಕೊಳ್ಳುತ್ತ ತನ್ನ ಕಬಂಧ ಬಾಹುಗಳನ್ನು ಚಾಚುತ್ತಲೆ, ಹೋಗುವದು, ಹೀಗಾಗಿ ಈ ಆಸೆ ಪರಮಾತ್ಮನತ್ತ ಹೋಗಲೀಯದೆ ಅಡ್ಡ ತೆರೆಯನ್ನು ಹಾಕುವದು.

ಎರಡನೆಯದೇ ಆಮಿಷ. ಆಸೆ ಮತ್ತು ಆಮಿಷಗಳಲ್ಲಿ ಸ್ವಲ್ಪ ವ್ಯತಾಸವಿದೆ. ಹುಳುವನ್ನು ತಿನ್ನಬೇಕೆಂಬ ಆಸೆ ಮೀನಿಗಿದ್ದರೂ, ಅದು ಗಾಳದ ತುದಿಯಲ್ಲಿರುವ ಹುಳುವೆಂಬ ಆಮಿಷಕ್ಕೊಳಗಾಗದಿದ್ದರೆ ಅಪಾಯವನ್ನೇನೂ ಎದುರಿಸಬೇಕಾಗಿಲ್ಲ. ಮನೆ ಕಟ್ಟಬೇಕು. ಮಕ್ಕಳಿಗೆ ಆಸ್ತಿ ಮಾಡಬೇಕೆಂಬ ಆಸೆ ಇದ್ದರೂ ಲಂಚದ ಆಮಿಷಕ್ಕೆ ಬಲಿಯಾಗದಿದ್ದರೆ ಜಾಗೃತದಳದ ಕೈಗೆ ಸಿಕ್ಕಿಹಾಕಿಕೊಳ್ಳಬೇಕಾಗಿಲ್ಲ. ಕನಕ, ಕಾಮಿನಿ, ಕೀರ್ತಿಗಳೆಂಬ ಆಮಿಷಗಳಿಗೆ ಬಲಿಯಾಗದಿದ್ದರೆ ಆ ಸನ್ಯಾಸಿ ಅಪಾರ ಆತ್ಮಬಲವನ್ನು ಹೊಂದುವನು. ಆಮಿಷಗಳಿಗೆ ಬಲಿಯಾಗಿಯೇ ಎಷ್ಟೋ ಜನ ಆದರ್ಶಗಳ ಪಥದಿಂದ ದೂರ ಸರಿಯುವರು. ಆದ್ದರಿಂದ ಇಂಥ ಆಮಿಷದ ಅಡ್ಡಗೋಡೆ ಬೇಡ.

ಮೂರನೆಯದು ತಾಮಸ. ಇದು ದೇಹಾಂತರ್ಗತವಾದುದು. ಅತಿಯಾದ ಆಹಾರ ಸೇವನೆ, ಅತಿಯಾದ ನಿದ್ರಾಕಾಂಕ್ಷೆ, ಆಲಸ್ಯ ಇವೆಲ್ಲ ಜಡತ್ವದ, ಜಡತೆಯ ವೃದ್ಧಿಯ ಲಕ್ಷಣಗಳು ಸಾಧಕನಿಗೆ ಬಾಧಕವಾಗುವಂಥವು. ನಾಲ್ಕನೆಯದೆ ಹುಸಿ. ಸತ್ಯಪಥದಲ್ಲಿ ಸಾಗಲೆಳಸುವ ಸಾಧಕನಿಗೆ ಮಹಾ ಆತಂಕ. ಸ್ವಾರ್ಥಕ್ಕೆ ಬಲಿಯಾಗಿ, ಪರಿಸರದ ಒತ್ತಡಕ್ಕೆ ಸಿಳಗಾಗಿ ಸುಳ್ಳನ್ನು ಆಡುತ್ತಿದ್ದಂತೆಯೇ ಅವನ ಆದರ್ಶಗಳ ಅರಳೆಯ ಬೆಟ್ಟ ಬರಬರನೆ ಒಟ್ಟು ಹೋಗುವುದು. ಹುಸಿಯು ಮಾಡುವಂಥ ಆತ್ಮಪತನವನ್ನು ಬೇರಾವುದೂ ಮಾಡದು. ತತ್ತ್ವಭ್ರಷ್ಟನನ್ನಾಗಿ, ಸಮಯಸಾಧಕನನ್ನಾಗಿ ಮಾಡುವ ಹೀನ ಗುಣ ಹುಸಿ.

ಐದನೆಯದು ವಿಷಯ. ಅಂದರೆ ಇಂದ್ರಿಯ ಭೋಗಾಸಕ್ತಿ "ಕಾಮಾತುರಾಣಾಂ

ನಭಯ ನಲಜ್ಜ" ಎಂಬಂತೆ, ಇಂದ್ರಿಯಗಳೆಂಬ ಕಣ್ಣುಕಪಟಗಳು ತಂದು ಹಾಕುವ ವಿಷಯವೆಂಬ ಕೊಳೆಯು ಅಂತರಂಗವನ್ನು ದೇವಸ್ಥಾನವನ್ನಾಗಿ ಮಾಡದೆ ಕೊಳಚೆಯ ಗುಂಡಿಯನ್ನಾಗಿ ಮಾಡುವುದು. ವಿಷಯಾಸಕ್ತಿ ಅಧಿಕವಾದಾಗ ದೇವರು, ಧರ್ಮ ಆದರ್ಶಗಳು ಗಾಳಿಗೊಡ್ಡಿದ ಸೋಡರಿನಂತೆ ಹೊಯ್ದಾಡುವವು. ಆರನೆಯದು ಕುಟಿಲ. ಒಳಗೊಂದು ಹೊರಗೊಂದು ಮಾಡುವ ದ್ರೋಹದ ಬುದ್ಧಿ. ಒಳಗೆ ಕುಟಿಲ ಹೊರಗೆ ವಿನಯವೆಂಬ ದ್ವಂದ್ವ ಬುದ್ಧಿ. ಹಿತೈಷಿಯಂತೆ ನಟನೆ, ಶತ್ರುವಿನಂತೆ ಭಾವನೆ ಹೊರಗಣ ವಿನಯದಿಂದ ಹಿತೈಷಿಯೆಂಬಂತೆ ನಟಿಸುವ, ನಂಬಿಸುವ ವ್ಯಕ್ತಿ ಇದ್ದಕ್ಕಿದ್ದಂತೆಯೇ ದ್ರೋಹಕ್ಕೆ ತೊಡಗಿದಾಗ ನಿಂತನೆಲವೇ ಕುಸಿದಂತಹ ಆಘಾತ ಮಾಡಿಸಿಕೊಂಡವನಿಗೆ, ಈ ಮೊದಲ ಎಲ್ಲ ದುರ್ಗುಣಗಳಿಗಿಂತಲೂ ಹೀನ ಪ್ರವೃತ್ತಿ ಈ ಬೆನ್ನ ಹಿಂದೆ ಇರಿವ ಬುದ್ಧಿ.

ಏಳನೆಯದು ಕುಹಕ. ಒಳ್ಳಿತಿನಲ್ಲೂ ತಪ್ಪನ್ನರಸುವ, ಸತ್ಯವನ್ನೂ ಅಪಹಾಸ್ಯ ಮಾಡುವ ದೋಷೈಕ ದೃಷ್ಟಿಕೋನದಿಂದ ಕೂಡಿದ, ಕುದೃಷ್ಟಿ ಇದು. ಎಂಟನೆಯದು ಕ್ಷುದ್ರತ್ವ. (Sillyness) ಕೆಲವರು ಎಷ್ಟೇ ಉಚ್ಚ ಪದವಿಗೇರಿದ್ದರೂ ಕ್ಷುಲ್ಲಕ, ಕ್ಷುದ್ರಭಾವನೆಗಳನ್ನು ಬಿಟ್ಟರರು. ಹದ್ದು ಎತ್ತರದಲ್ಲಿ ಹಾರಾಡಿದರೂ ಭೂಮಿಯ ಮೇಲೆ ದಬಿದ್ದ ಮಾಂಸ ಕರಣೆಯೊಂದನ್ನು ಅರಸುವಂತೆ ಕೀಳು ಮಟ್ಟದಲ್ಲಿ ಮಾತನಾಡುವರು, ವರ್ತಿಸುವರು. ಚರ್ಚೆಯ ವಿಚಾರಗಳಲ್ಲಿ ಕ್ಷುಲ್ಲಕತೆ ಇರಬಹುದು, ಅತ್ಯಂತ ಕ್ಷುಲ್ಲಕ ತಪ್ಪುಗಳನ್ನು ಭೂತಗನ್ನಡಿಯಲ್ಲಿ ನೋಡುವ ಅಭ್ಯಾಸವಿರಬಹುದು. ಆನೆಯು ಅಂಬಾರಿ ಹೊತ್ತು, ಭವ್ಯವಾದ ನಡಿಗೆ ನಡೆಯುತ್ತ, ಶೃಂಗರಿಸಲ್ಪಟ್ಟು, ಮೆರವಣಿಗೆಯಲ್ಲಿ ಹೋಗುವಾಗ, "ನೋಡಿದಿರಾ. ಆ ಆನೆಯ ಗಾಂಭೀರ್ಯ, ವೈಭವಗಳನ್ನು "ಎಂದರೆ," ಅಯ್ಯೋ, ಅದರ ಬಾಲದ ಮೇಲೆ ನೊಣ ಕುಳಿತಿದ್ದು ನೋಡಲಿಲ್ಲವೆ? ಎಂಬುದು ಕ್ಷುದ್ರತ್ವ.

ಎಂಟನೆಯದು ಮಿಥ್ಯೆ. ಮಿಥ್ಯೆ ಎಂದರೆ ಸುಳ್ಳು ಎಂಬರ್ಥ ಸ್ವಾಭಾವಿಕ. ಆದರೆ ಈಗಲೇ 'ಹುಸಿ' ಎಂಬ ಶಬ್ದ ಪ್ರಯೋಗವಾಗಿರುವ ಕಾರಣ ಅದೇ ಅರ್ಥದಲ್ಲಿ ಇನ್ನೊಮ್ಮೆ ಬಳಸುವರೇಕೆ? ಮಿಥ್ಯೆ ಎಂದರೆ ಭ್ರಾಂತಿ ಎಂದೂ ಅರ್ಥೈಸಬಹುದು. ಮಿಥ್ಯಾವಾದ ಎಂದರೆ ಭ್ರಾಂತಿವಾದ ಎಂದೇ ಅರ್ಥ. ಭ್ರಾಂತಿ ಎಂದರೆ ಯಾವುದಾದರೊಂದು ವಸ್ತು ಇರುವುದಕ್ಕಿಂತ ತೀರಾ ಭಿನ್ನವಾದ ರೀತಿಯಲ್ಲಿ ತಿಳಿದುಕೊಳ್ಳುವದು. ಅನಿತ್ಯವಾದ ಸುಖವನ್ನೇ ಶಾಶ್ವತ ಸುಖವೆಂದು, ನಿಜವಾದ ಆನಂದವನ್ನೇ ಅನವ್ಯಕ, ಅಶಾಶ್ವತವೆಂದೂ ತಿಳಿಯುವುದು ಭ್ರಾಂತಿ. ಈ ಭ್ರಾಂತಿಯಿಂದಾಗಿ ದೇವರ ಬಗ್ಗೆ ಬೆಳೆಯಬೇಕಾದಷ್ಟು ಗಾಢವಾದ ಮೋಹ ಬೆಳೆಯದು. ಆದ್ದರಿಂದ ಇಂತಹ ಎಲ್ಲ ದುರ್ಗುಣಗಳನ್ನು ನಾಲಿಗೆಯ ಮೇಲಿಂದ ತೆಗೆಯಲಿಕ್ಕೆ ಪ್ರಾರ್ಥಿಸುತ್ತ, ಪಂಚೇಂದ್ರಿಯಗಳನ್ನು ಸಂಭಾವಿತರನ್ನಾಗಿ ಮಾಡಲು, ಸಾತ್ವೀಕರಣಗೊಳಿಸಲು ಬೇಡುತ್ತಾರೆ. ಮದೋನ್ಮತ್ತ ಆನೆ ಕಾಡಿನಲ್ಲಿ ತೀರಾ ಉಪಟಳ ಕೊಡುವಂಥಾದ್ದು, ಸಾಧುವಾಗುತ್ತಿದ್ದಂತೆಯೇ ಮನುಷ್ಯನಿಗೆ ಉಪಕಾರಿಯಾಗುವಂತೆ, ಉಪಟಳ ಕೊಡುವ ಇಂದ್ರಿಯಗಳೇ ಸದ್ಭಕ್ತರಾಗಿ ಪರಿವರ್ತಿತರಾದಾಗ ಪರಮಾರ್ಥ ಸಿದ್ಧಿಗೆ ಸಾಧನ ಸಲಕರಣೆಗಳಾಗುವವು.

ಸಮಸ್ಯೆ ? ಸಮಾಧಾನ !

ರತ್ನ ಊರು ಬೇಡ

❋ ಒಂಟಿಯಾಗಿ ಅಧ್ಯಾತ್ಮಜೀವನ ನಡೆಸುವ ಶಕ್ತಿ, ಸ್ಥೈರ್ಯ ಇಲ್ಲವಾಗಿದೆ. ಮದುವೆಯಾಗಿ ಸಾಧನೆ ಮಾಡಬಹುದೇ ? ದೀಕ್ಷೆ ಪಡೆಯಬಹುದೆ ?

* ಮದುವೆ ಮತ್ತು ಸಾಧನೆಗೆ ವಿರೋಧಾಭಾಸತೆ ಏನಿಲ್ಲ. ಜನಕ ಮಹಾರಾಜ, ಬಸವಣ್ಣನವರು ಮುಂತಾದವರು ! ಗೃಹಸ್ಥರಾಗಿಯೂ ಅಪೂರ್ವ ಸಿದ್ಧಿ ಪಡೆಯಲಿಲ್ಲವೆ ? ಧ್ಯಾನ ದೀಕ್ಷೆ ಯಾರು ಬೇಕಾದರೂ ಪಡೆದು ಸಾಧನೆಯಲ್ಲಿ ತೊಡಗಬಹುದು, ಯಾರು ಎಲ್ಲ ಜಂಜಾಟಗಳಿಂದ ಮುಕ್ತರಾಗಿ, ಏಕಾಂತ ಜೀವನ, ಬ್ರಹ್ಮಚರ್ಯ ರಕ್ಷಣೆಯ ಆದರ್ಶ ಹೊಂದಿದ್ದಾರೋ ಅವರು ತಮ್ಮ ಅಭೀಪ್ಸೆಗನುಗುಣವಾಗಿ ಸನ್ಯಾಸ ಮಾರ್ಗಕ್ಕೆ ಬರಬೇಕು. ಗೃಹಸ್ಥ ಜೀವನದಲ್ಲಿದ್ದೂ ಪರಿಸರದಿಂದ ಕಲಂಕಿತವಾಗದೆ ಗುರಿ ಸೇರಬಲ್ಲೆವೆಂಬ ಆತ್ಮವಿಶ್ವಾಸವಿದ್ದವರು ವಿವಾಹವಾಗಿ ಸಾಧನಾಪಥದಲ್ಲಿ ಸಾಗಬಹುದು.

ರತ್ನ

❋ ರಜಸ್ವಲೆಯಾದ ವೀರಶೈವ ಮಹಿಳೆ ಲಿಂಗಪೂಜೆ ಮಾಡಿ, ತೀರ್ಥ ಪ್ರಸಾದ ಸ್ವೀಕರಿಸಿ ಅಡಿಗೆ ಮನೆ, ದೇವರ ಮನೆಗೆ ಹೋದರಾಗದೆ ? ನಮ್ಮ ತಾಯಿ ಒಪ್ಪದೆ ಮೈಲಿಗೆಯಾಗುತ್ತೆ, ದೇವರು ಸಿಟ್ಟಾಗುತ್ತಾನೆ ಎಂದು ಗದರುತ್ತಾರೆ. ಇದು ಸರಿಯೆ ?

* ದೇಹದ ಒಳಗಿನ ರಕ್ತ ಪ್ರಕೃತಿಗುಣಧರ್ಮದಿಂದ ಹೊರಕ್ಕೆ ಹೋದರೆ ಮೈಲಿಗೆ ಎಂಬ ಪ್ರಶ್ನೆ ಎಲ್ಲಿಯದು ? ಹೋಗಲಿ ಅದೇ ಮೈಲಿಗೆಯ ರಕ್ತ ತಡೆದು, ಮಾತೃಗರ್ಭದಲ್ಲಿ ನೆಲೆ ನಿಂತು ಪಿಂಡವಾಗುವುದಷ್ಟೇ. ಹುಟ್ಟುವ ಕೂಸು ಮೈಲಿಗೆಯ ಮುದ್ದೆಯೇ ಸರಿ. ಆಗ ಸಮಸ್ತ ಮಾನವ, ಜೀವ ಕುಲವೆಲ್ಲ ಮೈಲಿಗೆಯಷ್ಟೇ. ಮುಟ್ಟು ತಡೆದು ತಾ ಹುಟ್ಟಿದಾ ಮಗುವ" ಎತ್ತಿಕೊಳ್ಳುವದೇಕೆ ? ಮುದ್ದಿಕ್ಕುವದೇಕೆ ? ಸ್ನಾನ ಮಾಡಿ ಶುಚಿಭೂತರಾದರಾಯಿತು. ಇನ್ನು ಧರ್ಮಗುರು ಬಸವಣ್ಣನವರ ಪ್ರಕಾರ ರಜಸ್ಸೂತಕ ಆಚರಿಸಲೇ ಬಾರದಷ್ಟೆ. ರಜಸ್ಸು ಕಾಣಿಸಿಕೊಳ್ಳುತ್ತಿದ್ದಂತೆಯೇ ತಲೆಯ ಮೇಲಿಂದ ಸ್ನಾನ ಮಾಡಿ, ಪೂಜೆ ಮಾಡಿ ತೀರ್ಥ ಪ್ರಸಾದ ಸ್ವೀಕರಿಸಿದರೆ ಸಾಕು.

ವಿದ್ಯಾಸಾಗರ ಸೀಳಿನ, ಚಿಂಚೋಳಿ

❋ ಮನುಷ್ಯ ಕೆಟ್ಟದನ್ನು ಶೀಘ್ರವಾಗಿ ಕಲಿಯುವನು, ಒಳ್ಳೆಯದನ್ನೇಕೆ ಅಷ್ಟೇ ಶೀಘ್ರವಾಗಿ ಕಲಿಯನು.

* ಬೆಟ್ಟವನ್ನು ಹತ್ತಲಿಕ್ಕೆ ಶಕ್ತಿ ಬಹಳ ಬೇಕು, ಜರ್ರನೆ ಜಾರಲು ವಿಶೇಷ ಶಕ್ತಿಯೇನೂ ಬೇಡ. ನೀರನ್ನು ತಗ್ಗಿನಲ್ಲಿ ಹರಿಸಲು ಪ್ರಯತ್ನವನ್ನೇನೂ ಮಾಡಬೇಕಾಗಿಲ್ಲ. ಮೇಲಕ್ಕೇರಿಸಲು ಎತ್ತುವ ಯಂತ್ರ ಬೇಕಷ್ಟೇ. ಹಾಗೇ ಊರ್ಧ್ವಗಾಮಿಯಾಗಿ ಸಾಗಲು ದೃಢ ಸಾಧನೆ ಬೇಕು, ಶಕ್ತಿ ಬೇಕು. ಅಧೋಗಾಮಿಯಾಗಲು ಏನೂ ಬೇಕಾಗಿಲ್ಲ.

ಹೆಸರು ಹೇಳಲು ಭಯ, ಸನ್ಮಾನಿತನ ಊರಿನವ.

❋ ಓರ್ವ ಸಿರಿವಂತ ರಾಜಕಾರಿಣಿಗೆ ಸನ್ಮಾನ ಮಾಡಿದರು. ಅವನು ಜಾತಿವಾದಿ, ಸಾಕಷ್ಟು ದೌರ್ಜನ್ಯ ಮಾಡಿದ್ದ ಗೂಂಡಾ. ಆದರೆ ಸನ್ಮಾನೋತ್ಸವದಲ್ಲಿ ಅವನು ಜಾತ್ಯತೀತವಾದಿ, ಕರುಣಾಮಯಿ, ವಿಶಾಲ ಹೃದಯಿ ಎಂದು ಮುಂತಾಗಿ ಭಾಷಣಕಾರರು ಮತ್ತು ಕೆಲ ಪತ್ರಿಕೆಗಳು ಹೊಗಳಿದವು. ಅವನಿಂದಾಗಿ ಎಷ್ಟು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತೊಂದರೆಯಾಗಿತ್ತು ಎಂದು ನನಗೆ ಮಾತ್ರವಲ್ಲ, ಭಾಷಣ ಮಾಡುವವರಿಗೂ ಗೊತ್ತಿತ್ತು. ಆದರೂ ಹೀಗೆ ಹೊಗಳಲು ವಂಚನೆ ಎನಿಸವೆ ? ಹೊಗಳಿಸಿಕೊಳ್ಳಲು ಇಂಥವರಿಗೆ ನಾಚಿಕೆಯಾಗದೆ?

* ನಿಮ್ಮ ಪ್ರಶ್ನೆ ಎಷ್ಟು ದೀರ್ಘವೋ ಅಷ್ಟೇ ಗಂಭೀರ, ಮತ್ತು ಕಟುವಾಗಿದೆ. ಹಣ, ಅಧಿಕಾರ ಎರಡಿದ್ದರೆ ಸನ್ಯಾಸಿಯೇ ಇರಲಿ ರಾಜಕಾರಣಿಯೇ ಇರಲಿ ಅಧಿಕಾರಿಯೇ ಇರಲಿ ವಿಶೇಷ ಗುಣಗಳಿಂದ ಆರೋಪಿಸಲ್ಪಡುತ್ತಾರೆ. ಗುಣವಂತನಾದವನು ಬಡವನಾಗಿದ್ದರೆ ಅವನು ಬಹಳ ಹೀನನೆಂದು ಆರೋಪಿಸಲ್ಪಡುತ್ತಾನೆ (ಹಣವಂತರಿಂದ!) ಇದು ಇಂದಿನ ಆಚರಣೆಯೇನಲ್ಲ, ಮಾನವ ಜನಾಂಗದೊಡನೆ ಬೆಳೆದುಬಂದಿರುವ ಸ್ವಾಭಾವಿಕ ಕ್ಷುಲ್ಲಕತನ ಒಂದು ಸುಭಾಷಿತ ಹೇಳುತ್ತದೆ :

ಪೂಜ್ಯತೇ ಯದಪೂಜ್ಯೋಪಿ ಯದಗಮ್ಯೋಪಿ ಗಮ್ಯತೇ
ವಂದ್ಯತೇ ಯದವಂದ್ಯೋಪಿ ಸಪ್ರಭಾವೋ ಧನಸ್ಯ ಚ ॥

ಹಣದ ಪ್ರಭಾವ ಹಣವಂತನ ಪ್ರತಿಷ್ಠೆ ಅಷ್ಟಿಷ್ಟಲ್ಲ. ಯಾವನು ಮರ್ಯಾದೆಗೆ ಅರ್ಹನಲ್ಲವೋ, ಕೈ ಮುಗಿಯುವುದಕ್ಕೆ ಸಹ ಯೋಗ್ಯನಲ್ಲವೋ, ಯಾವನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಹೋಗಬಾರದೊ, ಅಂತಹವನ ಹತ್ತಿರ ಹಣವಿದ್ದರೆ ತೀರಿತು, ಎಲ್ಲರೂ ಅವನಿಗೆ ಮರ್ಯಾದೆ ಮಾಡುತ್ತಾರೆ; ಕೈಮುಗಿಯುತ್ತಾರೆ, ಅವನನ್ನು ಮಾರ್ಗದರ್ಶಿಯನ್ನಾಗಿ ಮಾಡುತ್ತಾರೆ. ಹಣದ ಪ್ರಭಾವವೆಂದರೆ ಹೀಗಿದೆ.

ಇನ್ನು ಹೊಗಳಿಸಿಕೊಳ್ಳಲು ನಾಚಿಕೆಯಾಗದೆ ? ಎಂದರೆ ನಿಮ್ಮ ಪ್ರಶ್ನೆ ತೀರಾ ಹಾಸ್ಯಾಸ್ಪದ ಹೊಗಳಿಸಿಕೊಳ್ಳಲೆಂದೇ ಹಣ ವ್ಯಯಮಾಡಿರುವಾಗ ಅದೇ ಆಗದಿದ್ದರೆ ಆದೀತೆ ?

ಮನೋರಮ, ಮಂಗಳೂರು

❋ ನನ್ನ ಆತ್ಮೀಯ ಗೆಳತಿಯೋರ್ವಳು ಅಧ್ಯಾತ್ಮಪ್ರವೃತ್ತಿಯವಳು. ಅವಳು ಆಶ್ರಮ

ವಾಸಿಯಾಗಬಯಸಿ ಕಲ್ಕತ್ತಕ್ಕೆ ಹೋಗಿದ್ದವಳನ್ನು ಒತ್ತಾಯದಿಂದ ತಾಯಿ–ತಂದೆ ಕರೆದು, ಭೂತಚೇಷ್ಟೆ ಎಂದು ಹೊಡಿಸಿ ಬಡಿಸಿದ್ದರಿಂದ ಮನೋವೈಕಲ್ಯಕ್ಕೆ ಒಳಗಾದಳು. ಈಗ ಇತ್ತ ಲೌಕಿಕ ಅತ್ತ ಪರಮಾರ್ಥ ಎರಡಲ್ಲೂ ಸಲ್ಲದ ಸ್ಥಿತಿ ಆಕೆಯದಾಗಿದೆ. ಅವಳ ಈ ದುರವಸ್ಥೆಗೆ ಕಾರಣರಾರು ?

* ಅವಳು ಸ್ವಾಭಾವಿಕವಾದ ಮಾರ್ಗದಲ್ಲಿ ಮುಂದುವರಿಯಲು ಬಿಡದ ಸ್ವಾರ್ಥಿಗಳೂ, ಅಜ್ಞಾನಿಗಳೂ ಆದ ತಾಯಿ ತಂದೆಯರದ್ದು ಅರ್ಥತಪ್ಪಾಗಿದ್ದರೆ, ತನ್ನ ಧ್ಯೇಯಕ್ಕೆ ಅನುಗುಣವಾದ ಧೈರ್ಯದಿಂದ ಮುಂದುವರೆಯದುದು ಈಕೆಯ ತಪ್ಪು. ತನಗೆ ಒಗ್ಗದ ಮಾರ್ಗದಲ್ಲಿ ತಾಯಿ–ತಂದೆ ಇರಿಸಿಕೊಳ್ಳಲು ಇಚ್ಛಿಸಿದಾಗ ಅವರ ಒತ್ತಾಯಕ್ಕೆ ಬಲಿಯಾದುದು ದೌರ್ಬಲ್ಯವಲ್ಲವೇ ?

ಮಹಾದೇವ ಪ್ರಸಾದ, ಊರು ಬೇಡ

❋ ಇಲ್ಲೊರ್ವ ಸ್ವಾಮಿಗಳುಂಟು. ಅವರು ತಮ್ಮ ಸ್ತುತಿ ಮಾಡಿಸಿಕೊಳ್ಳಲಿಕ್ಕೆ ಹೇರಳವಾಗಿ ಹಣ ವ್ಯಯಿಸುವರು. ಅಷ್ಟೇ ಅಲ್ಲ ಜೊತೆಗೆ ಅನ್ಯ ಸ್ವಾಮಿಗಳ ನಿಂದೆ ಮಾಡಲಿಕ್ಕೂ, ಬಾಡಿಗೆ ಬಾಯಿಗಳನ್ನು ಸಾಕಲಿಕ್ಕೂ ಅಷ್ಟೇ ವ್ಯಯಿಸುವರು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

* ನಿಜವಾದ ಅಧ್ಯಾತ್ಮಜೀವಿ ಸ್ವನಿಂದೆ, ಪರಸ್ತುತಿ ಮಾಡುವನೇ ವಿನಾ, ಆತ್ಮಸ್ತುತಿ ಪರನಿಂದೆ ಎಂದೂ ಮಾಡನು. ಆತ್ಮ ನಿರೀಕ್ಷಣೆ, ಪರರ ಪ್ರತಿಭಾ ಗೌರವ ಬುದ್ಧಿಯುಳ್ಳವ ಮಹಾಂತ ; ಆತ್ಮಸ್ತುತಿ ಮಾತ್ರ ಮಾಡಿಕೊಂಡು ಅನ್ಯರ ಉಸಾಬರಿಗೆ ಹೋಗದವ ಮಾನವ; ಆತ್ಮಸ್ತುತಿ–ಪರನಿಂದೆ ಮಾಡುವವ ದಾನವ; ನೀವು ಹೇಳಿದವರನ್ನು ಯಾವ ವಿಭಾಗಕ್ಕೆ ಬೇಕಾದರೂ ಸೇರಿಸಿಕೊಳ್ಳಿ; ನಾವಂತೂ ಒಂದು ವಿಭಾಗಕ್ಕೆ ಸೇರಿಸಿ ಪರನಿಂದೆ ಮಾಡಲು ತಯಾರಿಲ್ಲ.

—ಸುಕುಮಾರ ಪೈ, ಪಾಣೆ ಮಂಗಳೂರು

❋ ನಮಗಿರುವ ಐವರು ಮಕ್ಕಳಲ್ಲಿ ಈರ್ವರು ಹೆಣ್ಣುಮಕ್ಕಳು. ಅವರಲ್ಲಿ ಓರ್ವಳು ವಿವಾಹವಾಗಿದ್ದಾಳೆ. ಇನ್ನೋರ್ವಳಿಗೆ ಮಾಡಬೇಕೆಂದರೆ ಬೇಡವೇ ಬೇಡವೆಂದು ಹಠ ಹಿಡಿದು ಸನ್ಯಾಸಿನಿಯಾಗುವುದಾಗಿ ಹೇಳುತ್ತಾಳೆ. ಅವಳನ್ನು ಕೇಳುವುದೇಕೆ ಮದುವೆ ಮಾಡಿಬಿಟ್ಟರೆ ಸರಿಯಾಗುತ್ತಾಳೆ, ಎಂದು ಹಿರಿಯರ ಸಲಹೆ. ತಮ್ಮ ಸಲಹೆ ಏನು ?

* ನೀರಿನಿಂದ ಹೊರತೆಗೆದರೆ ಆಮೆ ಬದುಕಬಲ್ಲದು, ಮೀನು ಬದುಕಬಲ್ಲದು. ಕೆಲವರು ವಿವಾಹಾನಂತರ ಬದಲಾವಣೆಗೊಳ್ಳಬಹುದು. ಇನ್ನು ಕೆಲವರು ಪರಿವರ್ತನೆಯಾಗರು. ಆಗ ಎರಡು ಜೀವಗಳಿಗೂ ಅಶಾಂತಿ. ಮನವೊಪ್ಪಿಸದೆ ಒತ್ತಾಯದ ಮದುವೆ ಮಾಡಿ, ಮಾಡಿಕೊಂಡವನನ್ನು ಅಸುಖಿಯನ್ನಾಗಿ ಮಾಡದಿರಿ.

ಮಂಗಳೂರಿನಲ್ಲಿ ವಿಶ್ವಧರ್ಮ ಪ್ರವಚನ

—ವರದಿ : ಸೋದರಿ ಉಮಾದೇವಿ

ತಲೆ ಎತ್ತಿ ನಿಂತ ಬೆಟ್ಟಗಳ ಸಾಲನ್ನು, ಹಸಿರುಡೆಯನ್ನು ಉಟ್ಟು ಕಂಗೊಳಿಸುವ ಗಿರಿಶೃಂಗಗಳನ್ನು ದಾಟಿ ಕೆಳಗಿಳಿಯುತ್ತಲೇ ತೆಂಗಿನ ಚಾಮರ ಬೀಸಿ ಸ್ವಾಗತಿಸುವ ನೆಲವನ್ನು ತುಳಿದು ಆನಂದದ ಹೊನಲು ಹರಿಯುತ್ತದೆ. ತಡೆಯಲಸಾಧ್ಯವಾದ ಉಷ್ಣತೆಯೊಂದನ್ನು ಬಿಟ್ಟರೆ, ಅತ್ಯಂತ ರಮಣೀಯ ಈ ನಾಡು. ಹಸಿರು ಮುರಿಯುವಂತೆ ಕಂಗೊಳಿಸುವ ನಿಸರ್ಗ, ವನದೇವತೆಗೆ ಚಾಮರ ಬೀಸುವ ತೆಂಗು, ಭೂದೇವಿಗೆ ಕೊಡೆಹಿಡಿಯುವ ಗೇರುಬೀಜದ ವೃಕ್ಷಗಳು, ಮನೆಗೆ ತೂಗುಬಿಟ್ಟ ದೀಪಗುಚ್ಛಗಳಂತೆ ಕಾಣುವ ಅಡಿಕೆಯ ಗೊಂಚಲು, ಕಂಪಾದ ವಾಸನೆ ಸೂಸುವ ಹಲಸಿನ ಹಣ್ಣು ಹೊತ್ತ ವೃಕ್ಷಗಳು, ಹಸಿರಿನ ಗರ್ಭದಿಂದ ಉಲಿಯುವ ಕೋಗಿಲೆಯ ಕುಕಿಲ ರವ. ಒಂದೆಡೆ ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ ಬಂದರು, ಇನ್ನೊಂದೆಡೆ ಪ್ರಾಕೃತಿಕ ಚೆಲುವನ್ನು ಸೃಷ್ಟಿಸಿಹ ನೇತ್ರಾವತಿ, ಗುರುಪುರದ ಹೊಳೆಗಳು. ಊರಿನ ಸ್ಮರಣೆ ಮಾಡಿಕೊಳ್ಳುತ್ತಲೇ ಜೊತೆಗೇ ನೆನಪಾಗುವ ಅರಬ್ಬಿ ಸಮುದ್ರ.

ಈ ಎಲ್ಲ ಹಿನ್ನೆಲೆಯಲ್ಲಿ ಕಂಗೊಳಿಸುವ ನಗರ ಮಂಗಳೂರು, ನಗರ ದೇವತೆ ಮಂಗಳಾದೇವಿಯ ಹೆಸರನ್ನು ಹೊತ್ತಿರುವ ಜಿಲ್ಲಾ ಕೇಂದ್ರ. ಇಲ್ಲಿ ಸುಪ್ರಸಿದ್ಧವಾಗಿರುವ ಮತ್ತು ಅಪೂರ್ವ ಸೌರಭದಿಂದ ಘಮಘಮಿಸುವ ಮಂಗಳೂರು ಮಲ್ಲಿಗೆಯ ತವರು ಮನೆ. ಇಂಥ ನಗರದಲ್ಲಿ ಧರ್ಮದ ಕಂಪನ್ನು ಪಸರಿಸಲು, ಸದ್ಭಕ್ತರ ಹೃದಯಗಳೆಂಬ ಮಲ್ಲಿಗೆಗಳನ್ನರಳಿಸಲು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರ ಆಗಮನ. ಮಂಗಳೂರು ನಗರದ ಕೇಂದ್ರ ಭಾಗವಾದ ನೆಹರೂ ಮೈದಾನದಲ್ಲಿ ಫೆಬ್ರವರಿ 1ರಂದು ಪ್ರವಚನದ ಆರಂಭ. ಪ್ರಾರಂಭದ ದಿನದಂದು ಉದ್ಘಾಟಕರಾಗಿ ಮುನಿಸಿಪಲ್ ಕಮೀಷನರ್ ಪ್ರಧಾನ್ ಅವರ ಆಗಮನ. ಮಂಗಳೂರು ನಗರಕ್ಕೆ ಹೃತ್ಪೂರ್ವಕವಾಗಿ ಬರಮಾಡಿಕೊಂಡು ಸ್ವಾಗತಿಸಿ, ಸಭೆಗೆ ಪರಿಚಯ ಮಾಡಿಕೊಟ್ಟರು. ನಗರಸಭೆಯ ಉಪಾಧ್ಯಕ್ಷೆ ಜನಪ್ರಿಯ ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಶಾರದಾ ಆಚಾರ್ಯರವರು. ಈ ಹಿಂದೆ ದಶಕದ ಮೊದಲು ಉಡುಪಿಯಲ್ಲಿ ನಡೆದ ವಿಶ್ವಹಿಂದೂ ಪರಿಷತ್ ರಾಜ್ಯಮಟ್ಟದ ಸಮ್ಮೇಳನದಲ್ಲಿ ಪೂಜ್ಯ ಮಾತಾಜಿಯವರು ಬೀರಿದ ಪ್ರಭಾವ ಅಚ್ಚಳಿಯದೆ ಉಳಿದಿದೆ ಎಂದು ಸ್ಮರಿಸಿಕೊಂಡರು. ದಿನದಿನಕ್ಕೆ ಜನರು ಸಹಸ್ರಾರು ಸಂಖ್ಯೆಯಲ್ಲಿ ಸಮಾವೇಶವಾಗುತ್ತಿರುವದೇ ಅಲ್ಲದೆ ಕ್ರೈಸ್ತ, ಮುಸ್ಲಿಂ

ಬಂಧುಗಳೂ ಸೇರುತ್ತಿರುವ ವೈಶಿಷ್ಟ್ಯಪೂರ್ಣವಾಗಿದೆ. ಎಲ್ಲ ಜಾತಿ ಮತ ಪಂಥ ಧರ್ಮಗಳವರೂ ಸಂಗಮಗೊಳ್ಳುವ ಜನಸಮುದ್ರ ನೋಡಿದರೆ ಆಶ್ಚರ್ಯವೆನ್ನಿಸದಿರದು.

ಇಂಥ ಶುಭಾವಸರದಲ್ಲೇ ಒದಗಿತು ಮಾತಾಜಿಯವರ 34ನೆಯ ಜನ್ಮದಿನೋತ್ಸವ. ದಿ. 13-3-79ರಂದು ಅಭೂತಪೂರ್ವ ಉತ್ಸಾಹದಿಂದ ಜನರು ಭಾಗವಹಿಸಿದರು. ಹೂವಿನ ಮಂಟಪ ಕಟ್ಟಿದರು. ವಿದ್ಯುದಲಂಕಾರ ಮಾಡಿದರು. ಜನ್ಮದಿನೋತ್ಸವದ ಸಿಹಿನೆನಪಿಗಾಗಿ ನೆರೆದಂಥ ಎಲ್ಲರಿಗೆ ಸಿಹಿ ಹಂಚುವ ವ್ಯವಸ್ಥೆ ಮಾಡಿದರು. ಜನತೆಯ ಉತ್ಸಾಹ ನೋಡುವಂಥದಿತ್ತು. ಸ್ವಯಂಪ್ರೇರಿತ ಭಕ್ತಿ ಹೊನಲಾಗಿ ಹರಿಯುತ್ತಿತ್ತು. ಇನ್ನು ಸಮಾರಂಭದಲ್ಲಿ ಭಾಗವಹಿಸಿದ ಶ್ರೋತೃಸಂಖ್ಯೆಯನ್ನು ನೋಡಿದರೆ ಎಂಥವರೂ ದಂಗಾಗಬೇಕು. ಮಂಗಳೂರು ನಗರದ ಇತಿಹಾಸದಲ್ಲಿ ಎಂದೂ ಸೇರದಂಥ ಅದ್ಭುತ ಧಾರ್ಮಿಕ ಸಭೆಯಾಗಿತ್ತು. ಶಿಸ್ತು ಆಶ್ಚರ್ಯವನ್ನುಂಟುಮಾಡುತ್ತಿತ್ತು. ಇಪ್ಪತ್ತು ಮೂವತ್ತು ಜನರ ಒಂದು ರಾಜಕೀಯವೋ, ಅಥವಾ ಮತ್ತಾವುದೋ ಒಂದು ಸಭೆಯಾದರೆ ಸಭಾನಿಯಂತ್ರಣಕ್ಕೆ ಪೋಲೀಸರು ಬೇಕು. ಸಹಸ್ರಗಟ್ಟಳೆ ಜನರಿರುವ ಸಭೆಯಲ್ಲಿ ನೀರವ-ನಿಶ್ಯಬ್ದತೆ, ಒಬ್ಬ ಪೋಲೀಸರೂ ಇಲ್ಲವೆಂದರೆ ಇದೊಂದು ಪವಾಡವೇ ಸರಿ. ದೈವೀಶಕ್ತಿ ಎಂಥ ಪ್ರಭಾವ ಬೀರಬಲ್ಲುದೆಂಬುದಕ್ಕೆ ಸಾಕ್ಷಿ ಎಂದು ಎಲ್ಲರೂ ಉದ್ಗರಿಸುವವರೇ.

ಜನ್ಮದಿನೋತ್ಸವದ ಮುಖ್ಯ ಅತಿಥಿಗಳಾಗಿ ಅಪೂರ್ವ ವಾಗ್ಮಿಗಳು, ಜನಪ್ರಿಯ ಸಮಾಜ ಸೇವಾಕಾಂಕ್ಷಿಗಳೂ ಆದ ಮೈಸೂರಿನ ಶಾಸಕ ಹೆಚ್. ಗಂಗಾಧರನ್‌ರವರು ಆಗಮಿಸಿದ್ದರು. ಸಭಾಧ್ಯಕ್ಷತೆಯನ್ನು ಮುನಿಸಿಪಲ್ ಪ್ರೆಸಿಡೆಂಟ್ ಬ್ಲೇಸಿಯಸ್ ಡಿಸೋಜಾರವರು ಅಲಂಕರಿಸಿ "ನಮ್ಮ ಊರು ಧನ್ಯವಾಯಿತು. ಎಲ್ಲ ಜಾತಿ ಪಂಥ ಮತಗಳವರು ಸಮಾವೇಶವಾಗುವ ಕಾಸ್ಮೊಪಾಲಿಟನ್ ಸಭೆಯನ್ನು ನೋಡಿದ್ದು ಇಂದೇ ಮೊದಲು. ಇನ್ನೂ ಎರಡು ತಿಂಗಳ ಕಾಲವಾದರೂ ಮಾತೆಯವರು ನಮ್ಮೂರಲ್ಲಿ ಇರಬೇಕು" ಎಂದು ಮನವಿ ಮಾಡಿದರು". ಮಾತೆಯವರ ಆಗಾಧ ಪಾಂಡಿತ್ಯ, ಅಪೂರ್ವ ಪ್ರತಿಭೆ ಸಹೃದಯ ಕಳಕಳಿ ನಮ್ಮ ನಗರದ ಜನತೆಯಲ್ಲಿ ನಿಜವಾದ ಪರಿವರ್ತನೆ ತರುತ್ತಿವೆ ಎಂದರು. ಶಾಸಕ ಗಂಗಾಧರನ್ನರು ಮಾತನಾಡಿ ಪೂಜ್ಯ ಮಾತಾಜಿಯವರ ವ್ಯಕ್ತಿತ್ವ, ಕಾರ್ಯವಿಸ್ತಾರ ಉದಾತ್ತ ಧ್ಯೇಯಗಳ ಪರಿಚಯ ಮಾಡಿಕೊಟ್ಟರು.

ಮಂಗಳೂರು ನಗರದ ಪ್ರಮುಖ ವ್ಯಕ್ತಿಗಳೂ, ಸುಸಂಸ್ಕೃತರೂ, ಸರಳ ಸ್ವಭಾವದವರೂ ವಿಶ್ವಹಿಂದೂ ಪರಿಷದ್ ಉಪಾಧ್ಯಕ್ಷರೂ ಆಗಿರುವ ಆರೂರು ಕೃಷ್ಣಮೂರ್ತಿ ರಾಯರು ನಗರದ ನಾಗರಿಕರ ಪರವಾಗಿ ಅಭಿನಂದನೆಯನ್ನು ಸಮರ್ಪಿಸಿದರು. ಪ್ರವಚನದಿಂದ ಮಂಗಳೂರಿನ ಮೇಲೆ ಆದ ಪ್ರಭಾವ-ಪರಿಣಾಮಗಳನ್ನು ವಿವರಿಸಿದರು. ಪೂಜ್ಯ ಮಾತಾಜಿಯವರಿಗೆ ದೀರ್ಘವಾದ ಆಯುಷ್ಯ, ಆರೋಗ್ಯ, ಶಕ್ತಿಯನ್ನು ನೀಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತ ಪೂಜ್ಯ ಮಾತೆಯವರು ಕೈಗೊಂಡ ಯೋಜನೆಗಳಿಗೆ

ವೈಯಕ್ತಿಕ ಕಾಣಿಕೆಯನ್ನಾಗಿ ಐದು ಸಾವಿರದ ಒಂದು ರೂಪಾಯಿಗಳನ್ನು ಸಲ್ಲಿಸಿದರು. ಸುಮಂಗಲೆಯರು ಆರತಿಯನ್ನು, ಪುಷ್ಪವೃಷ್ಟಿಯನ್ನು ಮಾಡಿದರು ಕಿಕ್ಕಿರಿದು ನೆರೆದ ಶ್ರೋತೃವರ್ಗವು ಜಯಕಾರ ಮಾಡಿತು.

ಸಾಮೂಹಿಕ ಪ್ರಾರ್ಥನೆ ಮತ್ತು ಪೂಜೆ

ಜನರಲ್ಲಿ ಆಧ್ಯಾತ್ಮಿಕ ಪ್ರವೃತ್ತಿಯನ್ನು ಉದ್ದೀಪನೆ ಮಾಡುವ ಸಲುವಾಗಿ ಎರಡು ಭಾನುವಾರಗಳಂದು ಶ್ರೀ ಫಲ್ಕೆ ಕೃಷ್ಣ ಆಚಾರ ಸಮುದಾಯ ಭವನದಲ್ಲಿ ಪೂಜ್ಯ ಮಾತಾಜಿಯವರು ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸಿದಾಗ ಅಧಿಕ ಸಂಖ್ಯೆಯಲ್ಲಿ ಮುಮುಕ್ಷುಗಳು ನೆರೆದರು. ದಿ. 18-3-1979ರಂದು ಶ್ರೀ. ಪಿ. ವಿ. ಎಸ್. ಸಂಸ್ಥೆಯವರ ಕಲಾಕುಂಜದಲ್ಲಿ ನಡೆದ ಸಾಮೂಹಿಕ ಪೂಜೆಯಂತೂ ಚಿರಸ್ಮರಣೀಯವಾಗಿತ್ತು. ಅತ್ಯಂತ ಶ್ರದ್ಧೆ-ಭಕ್ತಿಗಳಿಂದ ಜನರು ಸಹಸ್ರಾರು ಸಂಖ್ಯೆಯಲ್ಲಿ ಸೇರಿ ಪೂಜ್ಯ ಮಾತಾಜಿಯವರು ಮಾಡಿದ ಇಷ್ಟ ಲಿಂಗಾರ್ಚನೆಯನ್ನ ಕುತೂಹಲ, ಅಭಿಮಾನ, ಆನಂದಗಳಿಂದ ವೀಕ್ಷಿಸಿದರು. ಶಾಂತಚಿತ್ತರಾಗಿ ಧ್ಯಾನ ಮಾಡಿದರು,ಉತ್ಕಟ ಭಕ್ತಿಯಿಂದ ಜಪ ಮಾಡಿದರು. ಅತ್ಯಂತ ಸುಂದರ ಮತ್ತು ಕಲಾತ್ಮಕವಾಗಿ ಕಟ್ಟಸಲ್ಪಟ್ಟ ಕಲಾಕುಂಜವು ಅಂದು ಶಿವಜ್ಞಾನ ಪುಂಜವಾಗಿ ಶೋಭಿಸಿತು. ಅದರ ಸಚೇತಕಶಕ್ತಿಯಾದ ಶ್ರೀ ಮಧುಸೂಧನ ಕುಷೆಯವರು ಪೂಜಾ ಕಾರ್ಯದಲ್ಲಿ ಭಾಗವಹಿಸಿ ದರ್ಶನ-ಆಶೀರ್ವಾದ-ಪ್ರಸಾದಗಳನ್ನು ಪಡೆದರು ; ನೆರೆದ ಸದ್ಭಕ್ತರಿಗೆಲ್ಲ ತೀರ್ಥ ಪ್ರಸಾದ ವಿತರಣೆಯಾಯಿತು.

ಮಂಗಳೂರು ನಗರದಲ್ಲಿ ಚಿರಸ್ಮರಣೀಯ ಪ್ರಭಾವಬೀರಿ ಅಪಾರ ಪರಿವರ್ತನೆ ತಂದು, ಜ್ಞಾನ ಮಹಾಪೂರವನ್ನು ಹರಿಸಿರುವ ವಿಶ್ವಧರ್ಮ ಪ್ರವಚನದ ಕಾರ್ಯಕ್ರಮ ಮಾರ್ಚಿ ತಿಂಗಳ ಕಡೆಯ ವಾರದಲ್ಲಿ ಮಂಗಲಗೊಳ್ಳಲಿದೆ.

ಜನ್ಮದಿನದಂದು ಅರ್ಪಿಸಿದ ನುಡಿ ಕಾಣಿಕೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರ ಪಾವನ ಚರಣಗಳಲ್ಲಿ ನಿಮ್ಮ ಹರಕೆಯ ಕುಡಿಯೆನಿಸುವ ಕೆ. ಆರ್. ಚಂದ್ರನ ಆತ್ಮೀಯ ಪ್ರಣಾಮಗಳು.

ಇದೀಗ ಮಂಗಳೂರಿನಲ್ಲಿ ನಡೆಯುತ್ತಿರುವ ನಿಮ್ಮ ವಿಶ್ವಧರ್ಮ ಪ್ರವಚನದಿಂದ ಪ್ರಭಾವಿತರಾದ ಬಹುಮಂದಿಯಲ್ಲಿ ನಾನೂ ಒಬ್ಬನೆನ್ನಲು ಹೃತ್ಪೂರ್ವಕ ಆನಂದವಾಗುತ್ತಿದೆ. ನಿಮ್ಮ ಮೌಲಿಕ ತ್ಯಾಗಜೀವನ ಮತ್ತು ಚೇತನಾತ್ಮಕ ತತ್ತ್ವ-ಸಂದೇಶಗಳಿಂದ ಹಿಂದೂ ಧರ್ಮ ಹಾಗೂ ದೆಸೆಗೆಟ್ಟ ಇಂದಿನ ಸಮಾಜ ಜೀವನ ತನ್ನದಾದ ಮೌಲ್ಯಗಳನ್ನು ಗುರುತಿಸಿ, ಸ್ವೀಕರಿಸಿಕೊಳ್ಳಬಲ್ಲದು ಎಂದು ನನ್ನ ನಂಬಿಕೆ. ನಿಮ್ಮ ಧೀರೋದಾತ್ತ ಆಧ್ಯಾತ್ಮಿಕ ಸಾಧನೆಯ ಓಘ, ಅನುಭಾವದ ಹಿರಿಮೆ, ಪ್ರಖರ ವೈಚಾರಿಕತೆ ಆಕರ್ಷಕ ವಾಕ್ಶಕ್ತಿ, ಸಹೃದಯ

ಕಾವ್ಯ-ಸಾಹಿತ್ಯಿಕಸೃಷ್ಟಿ....ಎಲ್ಲವೂ ತಮಸ್ಸಿನ ಆಳದಲ್ಲಿ ತೊಳಲಾಡುವ ಮಂದಿಯ ಜಾಗೃತಿಗೆ, ಸಾಧಕರ ಮುನ್ನಡೆಯ ಸ್ಫೂರ್ತಿಗೆ ಪ್ರೇರಕ ಪೋಷಕ-ಸಂವರ್ಧಕ. ಮಹಾನ್ ವಿಶ್ವಮಾನವ ಸ್ವಾಮಿ ವಿವೇಕಾನಂದರ–'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ' –ದಿವ್ಯಸಂದೇಶ ನಿಮ್ಮಿಂದ ಮಾರ್ದನಿಸುವಂತೆ ಅನ್ನಿಸುತ್ತಿದೆ. ಧರ್ಮದ ಕಡೆ ಜನ ಬಾರದಿದ್ದಾಗ ಧರ್ಮವನ್ನೇ ಜನರೆಡೆಗೆ ಒಯ್ಯುವ ನಿಮ್ಮ-ವಿಶ್ವ ಕಲ್ಯಾಣ 'ಮಿಶನ್'-ಸಂಸ್ಥೆಯ ಮಹೋನ್ನತ ಸಾಧನೆಗೆ ಪರಮಾತ್ಮನ ಅನಂತ ಒಲವಿನ ಬಲವಿರಲಿ.

* * *

ನನ್ನ ಈ ನುಡಿಕಾಣಿಕೆ ದಯಮಾಡಿ ಸ್ವೀಕರಿಸಿ.
ಮಾತೆಯಾದಿರಿ ದಿವ್ಯಜೀವನದ ಬೆಳಕ ಬೇಡುವ ಜಗಕೆ,
–ಜನಮನಕೆ ಕಾಯಕದ ಸೂತ್ರದಿಂದಲೆ ದೇವನೊಲ್ಮೆಗೆ ದಾರಿ ತೋರಿದಿರಿ.
ತೆರೆಸಿದಿರಿ ಎಷ್ಟೋ ಅಜ್ಞಾನದ ಪೊರೆಯಾವರಿಸಿದ ಸುಜ್ಞಾನದ ಕಂಗಳನು,
–ಧರ್ಮ ಜಾಗೃತಿಯ ಅನಿವಾರ್ಯದಲಿ ಸಾಧನೆಗೇ ಅನುಪಮೆಯಾದಿರಿ !
ಮನುಕುಲದ ಮನದಂಗಳದ ಕಾರ್ಗತ್ತಲೆಗೆ ತಂದಿಹಿರಿ ನೀವಿಂದು,
–ಶ್ರೀ ಬಸವ, ಅಕ್ಕಮಹಾದೇವಿ ಹಿಡಿದಿಹ ದೇವದೀಪ್ತಿಯನು.
ಹಾಯಾಗಿ ತೂಗುತಿರುವಿರಿ ಜನಜೀವನದ ಸಹೃದಯ ತೊಟ್ಟಿಲನು,
–ಆತ್ಮ ವಚನಾಮೃತವನೆ ಎಡೆಯೆರೆದು ಸಲಹುತಿರುವಿರಿ ಹೆತ್ತಮ್ಮನಂತೆ.
ದೇಶ–ಧರ್ಮ–ದೇವನ ಸೇವೆಯಲಿ ಮಾನವತೆಗೆ ದೈವೀಕ ರೂಹು ತೋರಿದಿರಿ,
–ನೀವು "ಹೆಪ್ಪಿಟ್ಟ ಹಾಲು" ಉಣಿಸಿ. ದಿವ್ಯ "ತರಂಗಿಣಿ"ಯಲಿ ನಮ್ಮ ಮೀಸಿದಿರಿ.
ವಿಶ್ವಕಲ್ಯಾಣದ ಮಹೋನ್ನತ ಮಣಿಹ ಹೊತ್ತಿಹ ಓ, ಜಗನ್ಮಾತೆ—
....ತೊದಲುಲಿಯಲಿ ನಾನೇನ ಹಾರೈಸಲಿ ನಿಮ್ಮ ಚರಣಾರವಿಂದಗಳ ಮುಂದೆ ?
ಶುಭವಿರಲಿ....ಸಚೇತನ ಸಂದೇಶ ಸಾರುವ ಅಮೃತವಾಣಿಗೆ,
ಮಂಗಳವಿರಲಿ....ದಿವ್ಯ ಅನುಭಾವ ಜೀವನದ ಭವಿತವ್ಯಕೆ,
ಆನಂದವಿರಲಿ....ಮೂವತ್ಮೂರು ವರ್ಷಗಳ ಸೃಷ್ಟಿ-ದೃಷ್ಟಿಯನು ಕಂಡುಂಡ ಮಾತೃಹೃದಯಕೆ,
ಕಲ್ಯಾಣವಿರಲಿ....ಕ್ಷಣಕ್ಷಣವು ಜೀವಸೌಗಂಧವ ತೇದು ಜಗವ ಪರಿಮಳಿಪ ತ್ಯಾಗದೇವತೆಗೆ,
ಆತ್ಮೀಯ ಶುಭ ಹಾರೈಕೆಗಳ ಸಹಿತ ಶತಕೋಟಿ ಪ್ರಣಾಮ....

—'ಸಚ್ಚಿದಾನಂದ ಪ್ರಿಯೆ' ಮಾತೆ ಮಹಾದೇವಿಗೆ

—ರಚನೆ : ಕೆ. ಆರ್. ಚಂದ್ರ, ಮಂಗಳೂರು.

ಮಹಾವೀರ

ಜಿ. ಹನುಮಂತರಾವ್

"ಸೃಷ್ಟಿಕರ್ತನಾದ ದೇವರಲ್ಲಿ ನಂಬಿಕೆ ಅಗತ್ಯ. ಆ ನಂಬಿಕೆ ಇಲ್ಲದವರಿಗೆ ಮತವೇ ಇಲ್ಲ" ಎಂದು ಒಂದು ಶತಮಾನದ ಹಿಂದಿನ ಪಾಶ್ಚಾತ್ಯ ಮೀಮಾಂಸಕರು ಹೇಳುತ್ತಿದ್ದರು. ಸೃಷ್ಟಿಕರ್ತನಾದ ದೇವರನ್ನು ನಂಬದ ಕಾಂಪೂಟ್ಸೆಯ ಮತ್ತು ಬೌದ್ಧ, ಜೈನ ಮತಗಳ ಪರಿಚಯವಾದ ಮೇಲೆ ಅವರು ಮತದ ವಿಚಾರವಾಗಿ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಬೇಕಾಯಿತು. ಮಹಾವೀರನ ಪ್ರಕಾರ ಮತಕ್ಕೆ ಅಗತ್ಯವಾದದ್ದು ಮೂರು ಸಿದ್ಧಿಗಳು : ೧) ಸುಜ್ಞಾನ : ಸ್ವತಂತ್ರವಾಗಿ ವಿವೇಚಿಸಿ ಪಡೆದ ಜ್ಞಾನ, ಸಮ್ಯಕ್ ಜ್ಞಾನ. ೨) ಅದನ್ನು ಅಚಲವಾದ ನಂಬಿಕೆಯಿಂದ ಅಂಗೈಯ್ಯಿನ ನೆಲ್ಲಿಕಾಯಿಯಷ್ಟು ಸಾಕ್ಷಾತ್ತಾಗಿ ಮಾಡಿಕೊಂಡ ಅನುಭವ ಸಮ್ಯಕ್‌ದರ್ಶನ. ಎಂದರೆ, ಕಣ್ಣಿಗೆ ಕಾಣದ ಭಾವ ಕಣ್ಣಿಗೆ ಕಂಡುದರಷ್ಟು ವಿಶದವಾದ ಮಾನಸಿಕ ಪ್ರತ್ಯಕ್ಷವು ಸಮ್ಯಕ್ ದರ್ಶನ. ೩) ತಿಳಿದುದನ್ನು ನಂಬಿ ನಂಬಿದ್ದನ್ನು ನಡೆಸಿದ್ದು ಸಮ್ಯಕ್ ಚಾರಿತ್ರ ಅಥವಾ ಸದ್ವರ್ತನೆ. ಈ ಮೂರೂ ಇಲ್ಲದೆ ಯಾವ ಮತವೂ ಇರಲಾರದು. ಕ್ರೈಸ್ತ ಮತದಲ್ಲೂ, ವೈಷ್ಣವ ಮತದಲ್ಲೂ ಈ ಮೂರರ ಆವಶ್ಯಕತೆ ಸ್ಪಷ್ಟವಾಗಿ ಕಾಣುತ್ತದೆ. ಈ ಮೂರನ್ನು ಬಿಟ್ಟರೆ ಮತವು ಕುಸಿದು ಬೀಳುತ್ತದೆ. ತ್ರಿರತ್ನಗಳಾದ ಆ ಮೂರನ್ನು ತನ್ನ ಮತದ ಅಡಿಗಲ್ಲಾಗಿ ಮಾಡಿಕೊಂಡು ಸ್ವಪ್ರಯತ್ನದಿಂದ ದಿವ್ಯವಾದ ಸತ್ವಯುತವಾದ ಸ್ಥಿತಿಯನ್ನೂ ಗತಿಯನ್ನೂ ಸಿದ್ಧಿಸಿಕೊಂಡ ಮಹಾನುಭಾವ ಮಹಾವೀರ. ಅದು ಅವನ ಶಿಷ್ಯರು ಅವನಿಗೆ ಇಟ್ಟ ಅನ್ವರ್ಥನಾಮ. ಅವನಿಗೆ ಅವನ ತಂದೆ ತಾಯಿಗಳಿಟ್ಟ ಹೆಸರು ವರ್ಧಮಾನ.

೧. ಜನನ–ಬಾಲ್ಯ–ವಿವಾಹ

ವರ್ಧಮಾನನು ಹುಟ್ಟಿದ ಸ್ಥಳ ವೈಶಾಲಿ. ಅವನ ತಂದೆ ಸಿದ್ಧಾರ್ಥನು ಒಂದು ಕ್ಷತ್ರಿಯ ಗಣದ ಮುಖ್ಯಸ್ಥ. ಅವನ ಹೆಂಡತಿ ಗಣರಾಜನ ಮಗಳಾದ ತ್ರಿಶಲಾ. ಮಗ ಹುಟ್ಟುವುದಕ್ಕೆ ಮುಂಚೆ ಅವಳು ಹನ್ನೆರಡು ಕನಸುಗಳನ್ನು ಕಂಡಳೆಂದು ಐತಿಹ್ಯವಿದೆ. ಕನಸುಗಳ ವಿವರ ದಿಗಂಬರರ ಪ್ರಕಾರ ಒಂದು ತೆರನಾಗಿದ್ದರೆ, ಶ್ವೇತಾಂಬರರ ಪ್ರಕಾರ ಬೇರೊಂದು ತೆರನಾಗಿದೆ. ಅವಳು ಕಂಡ ಕನಸುಗಳ ಚಿತ್ರಗಳನ್ನು ಜೈನ ದೇವಸ್ಥಾನಗಳ ಶಿಲ್ಪದಲ್ಲಿ ಈಗಲೂ ನೋಡಬಹುದು. ಈ ಕನಸುಗಳ ವಿವರ, ಅವುಗಳ ಗೂಢಾರ್ಥ ಜೈನ

ಪುರಾಣಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿವೆ. ಆ ಪುರಾಣಗಳು, ವರ್ಧಮಾನನು ಹುಟ್ಟಿದಾಗ, ಶಿಷ್ಯವೃತ್ತಿ ನಡೆಸಿದಾಗ, ದೀಕ್ಷೆ ಪಡೆದಾಗ, ಮನಃಪರ್ಯಯಜ್ಞಾನ ಪಡೆದಾಗ* ಕೇವಲ ಜ್ಞಾನ ಪಡೆದಾಗ ನಡೆದ ಅನೇಕಾನೇಕ ಪವಾಡಗಳನ್ನು ಅತಿ ವಿಸ್ತಾರವಾಗಿ ತಿಳಿಸಿವೆ. ಅವುಗಳನ್ನು ಬಿಟ್ಟು ಅವುಗಳ ತಳಹದಿಯಾದ ವಾಸ್ತವ ಸಂಗತಿಗಳನ್ನು ಮಾತ್ರ ಇಲ್ಲಿ ವಿವರಿಸಿದೆ.

ವರ್ಧಮಾನನು ಹುಟ್ಟಿದ ವರ್ಷವನ್ನು ನಿರ್ದಿಷ್ಟವಾಗಿ ನಿರ್ಧರಿಸಲು ಆಗಿಲ್ಲ.† ಆತನು ಬುದ್ಧನ ಸಮಕಾಲೀನನೆಂದೂ ಅವನಿಗಿಂತ ವಯಸ್ಸಿನಲ್ಲಿ ಹಿರಿಯನೆಂದೂ ಸ್ಥಿರಪಟ್ಟಿದೆ. ಬುದ್ಧನು ಕ್ರಿ. ಪೂ. ೬೨೩ರಲ್ಲಿ ಹುಟ್ಟಿದನೆಂದು ಈಗ ಸ್ಥಿರಪಟ್ಟಿದೆಯಾದ್ದರಿಂದ, ಬಹುಶಃ ಅವನು ಕ್ರಿ.ಪೂ. ೬೫೦ರ ಸುಮಾರಿನಲ್ಲಿ ಹುಟ್ಟಿರಬಹುದು. ಅವನು ವಿದ್ಯಾರ್ಥಿಯಾಗಿದ್ದಾಗ ತನ್ನ ಸಂಗಡಿಗರನ್ನು ಎಲ್ಲ ಕಲೆಗಳಲ್ಲೂ, ಎಲ್ಲ ಆಟಪಾಟಗಳಲ್ಲೂ ಮೀರಿಸಿದ್ದನೆಂದು ಕಥೆಗಳಿವೆ. ಒಂದುದಿನ ಜೊತೆಯವರೊಡನೆ ಆಟವಾಡುತ್ತಿದ್ದಾಗ ಒಂದು ಮದಿಸಿದ ಆನೆ ಅವನ ಕಡೆ ನುಗ್ಗಲು, ವರ್ಧಮಾನನು ಇತರರಂತೆ ಹೆದರದೆ ಆನೆಯ ಮೇಲೆ ಹಾರಿ ಸವಾರಿ ಮಾಡಿದನಂತೆ. ಇನ್ನೊಂದು ಸಲ ಒಂದು ಪಿಶಾಚಿ ಅವನನ್ನು ಆಕಾಶಕ್ಕೆ ಎತ್ತಿಕೊಂಡು ಹೋದಾಗ ವರ್ಧಮಾನನು ಅದನ್ನು ಗುದ್ದಿ ಅದರ ಕೂದಲನ್ನು ಕಿತ್ತು, ಕೆಳಕ್ಕಿಳಿಯುವಂತೆ ಮಾಡಿದನಂತೆ.

ವರ್ಧಮಾನನು ಪ್ರಾಪ್ತವಯಸ್ಕನಾದಾಗ ಕೌಂಡಿನ್ಯ ಗೋತ್ರದ ರಾಜಪುತ್ರಿ ಯಶೋದೆಯನ್ನು ಮದುವೆಯಾದನೆಂದೂ, ಆ ದಂಪತಿಗಳಿಗೆ ಅನುಜಾ (ಪ್ರಿಯದರ್ಶನಾ) ಎಂಬ ಮಗಳು ಹುಟ್ಟಿದಳೆಂದೂ, ತನ್ನ ತಂದೆ ತಾಯಿ ತೀರಿಕೊಂಡಮೇಲೆ ಅವನು ಸಂನ್ಯಾಸವನ್ನು ಹಿಡಿದನೆಂದೂ ಶ್ವೇತಾಂಬರ ಪುರಾಣಗಳು ತಿಳಿಸುತ್ತವೆ. ವರ್ಧಮಾನನು ಮದುವೆಯಾದದ್ದೂ ಮಗಳನ್ನು ಪಡೆದದ್ದೂ ದಿಗಂಬರ ಪುರಾಣಗಳು ಶುದ್ಧ ಸುಳ್ಳೆಂದು ಭಾವಿಸಿವೆ. ಈ ಪುರಾಣಗಳ ಪ್ರಕಾರ ವರ್ಧಮಾನನ ತಂದೆ ತಾಯಿ ಅವನಿಗೆ ಮದುವೆ ಮಾಡಬೇಕೆಂದು ಸಂಕಲ್ಪಿಸಿದ್ದೇನೋ ನಿಜ. ಆದರೆ ವರ್ಧಮಾನನು ಅದಕ್ಕೊಪ್ಪದೆ ತನ್ನ ಮಾತಾಪಿತೃಗಳನ್ನು ಒಪ್ಪಿಸಿ ಸಂನ್ಯಾಸಿಯಾದನೆಂದೂ ದಿಗಂಬರ ಪುರಾಣಗಳು ತಿಳಿಸುತ್ತವೆ. ಶ್ವೇತಾಂಬರರ ವಿವರಣೆ ವಾಸ್ತವಕ್ಕೆ ಹೆಚ್ಚು ಸಂಗತ.

೨. ಸನ್ಯಾಸ ವ್ರತ

ವರ್ಧಮಾನನು ಮೂವತ್ತರ ಹರೆಯ ಮುಟ್ಟಿದಾಗ ಸಂನ್ಯಾಸಿಯ ದೀಕ್ಷೆ ಪಡೆದನೆಂದೂ ಶ್ವೇತಾಂಬರರೂ ದಿಗಂಬರರೂ ಇಬ್ಬರೂ ಒಪ್ಪುತ್ತಾರೆ. ಇವರಿಗೆ ದೀಕ್ಷೆ ಕೊಟ್ಟ ಗುರು

* ಮನಸ್ಸಿನ ಪರಿವರ್ತನೆಯ ಎಲ್ಲ ರೂಪಾಂತರಗಳೇ ತಿಳಿವು.

† ಕೆಲವರು ಅವನ ಜೀವಿತದ ಕಾಲ ಕ್ರಿ.ಪೂ. ೫೨೭ ಎಂದು ಭಾವಿಸಿದ್ದಾರೆ.

ಆಗ್ಗೆ ಇನ್ನೂರೈವತ್ತು ವರ್ಷಗಳ ಹಿಂದೆ ಇದ್ದ ಪಾರ್ಶ್ವನಾಥನ ಮತಾನುಯಾಯಿ. ಆ ಕಾಲದಲ್ಲಿ ತುಂಬ ಪ್ರಬಲವಾಗಿದ್ದ ಅಜೀವಕರ ಮತದ ಹಿರಿಯನಿದ್ದಿರಬಹುದು. ಮಹಾವೀರನ ಗುರು ಅವನಿಗೆ ಬೋಧಿಸಿದ್ದು ಪಾರ್ಶ್ವನಾಥನ ನಾಲ್ಕು ವ್ರತಗಳು: ಪ್ರಾಣಿಗಳನ್ನು ಕೊಲ್ಲದ ಅಹಿಂಸಾವ್ರತ, ಸತ್ಯವ್ರತ, ಚೌರ್ಯವರ್ಜನೆಯ ವ್ರತ, ಸರ್ವತ್ಯಾಗ ವ್ರತ. ನಾಲ್ಕನೆಯದಾದ ಸರ್ವತ್ಯಾಗ ವ್ರತದಲ್ಲಿ ವ್ಯಭಿಚಾರ ವರ್ಜ್ಯವೂ ಸೇರಿದಂತೆ ಭಾವಿಸಿ, ಪಾರ್ಶ್ವನಾಥನು ಅದನ್ನು ಪ್ರತ್ಯೇಕವಾಗಿ ಹೆಸರಿಸಲಿಲ್ಲ. ಅವನಿಂದಾಚೆಗೆ ಇನ್ನೂರೈವತ್ತು ವರ್ಷಗಳಲ್ಲಿ ಆ ಮತದ ಸನ್ಯಾಸಿಗಳಲ್ಲಿ ಕೆಲವರಾದರೂ ವ್ಯಭಿಚಾರಿಗಳಾಗಿದ್ದುದನ್ನು ಕಂಡು ಮಹಾವೀರನು ಬ್ರಹ್ಮಚರ್ಯವನ್ನೇ ಬೇರೆಯ ವ್ರತವಾಗಿ ಸೇರಿಸಿದ. ಪಾರ್ಶ್ವನಾಥನು ತಪ್ಪೊಪ್ಪಿಗೆಯನ್ನು ಶ್ರಮಣರು ನಡೆಸಬೇಕಾದ ಒಂದು ಐಚ್ಛಿಕ ನಿಯಮವಾಗಿ ಸೇರಿಸಿದ. ಮಹಾವೀರನು ಅದನ್ನು ಕಡ್ಡಾಯ ನಿಯಮವಾಗಿ ಮಾಡಿದನು. ಅವನು ಏರ್ಪಡಿಸಿದ ಈ ಎರಡು ನಿಯಮಗಳನ್ನು ಒಪ್ಪದೆ, ಇವನ ಜೊತೆಗಾರ ಗೋಸಾಲನು ಅವನ ಜೊತೆ ಬಿಟ್ಟು ಹೋದ.

೩. ಸಿದ್ಧಿ–ಸಂದೇಶ

ಮಹಾವೀರನು ದೀಕ್ಷೆ ಪಡೆದು ಸಾಧಕ ಜೀವನವನ್ನು ಪ್ರಾರಂಭಿಸಿದ್ದು ವೈಶಾಲಿಯ ಉಪನಗರವಾದ ಕುಂಡ ಗ್ರಾಮದ ಬಳಿ ಇದ್ದ ಸುಂದರವನದಲ್ಲಿ. ಎಲ್ಲ ಋತುಗಳಲ್ಲೂ ಹಸುರಾಗಿರುವ ಅಶೋಕ [ಶೋಕವಿಲ್ಲದ] ವೃಕ್ಷದ ಕೆಳಗೆ ಕುಳಿತು ತಪಸ್ಸನ್ನು ಆಚರಿಸಿದ. ಬೌದ್ಧರಿಗೆ ಅರಳಿಮರ ಪೂಜ್ಯವಾದಂತೆ ಜೈನರಿಗೆ ಅಶೋಕವೃಕ್ಷ ಪೂಜ್ಯವಾದದ್ದು.

ಮಹಾವೀರನು ತಾನು ಹಿಡಿದ ಐದು ವ್ರತಗಳನ್ನೂ ತುಂಬ ನಿಷ್ಠೆಯಿಂದ ಆಚರಿಸಿದನು. ತಾನು ಕೈಕೊಂಡ ಹನ್ನೆರಡು ವರ್ಷಗಳ ತಪಸ್ಸಿನ ಮೂಲಕ ಆತನು ಸ್ವಾಧೀನಮಾಡಿಕೊಂಡಿದ್ದು ಸರ್ವತೋಮುಖವಾದ ಕರ್ಮದ ತಿಳಿವು, ಮತ್ತು ತದನುಗುಣವಾದ ಸಾಧನೆ. ಕರ್ಮದ ತಿಳಿವು ಈ ಐದು ತತ್ವಗಳಲ್ಲಿ ಅಡಗಿದೆ: ಆಸ್ರವ, ಬಂಧನ, ಸಂವರ, ನಿರ್ಜರ ಮತ್ತು ಮೋಕ್ಷ. ೧) ಆಸ್ರವವೆಂದರೆ ನಾವು ಮಾಡಿದ ಕೆಟ್ಟ ಮತ್ತು ಒಳ್ಳೆಯ ಕೆಲಸಗಳ ಸಾರ ನಮ್ಮೊಳಗೆ ಬಂದು ಸೇರಿಕೊಳ್ಳುವುದು. ಹಾಗೆ ಅದು ನಮ್ಮೊಳಗೆ ಸೇರಿಕೊಂಡಾಗ ಅದು ನಮ್ಮ ಚಾಳಿಯಾಗುತ್ತದೆ. ಪಾಪ ಮತ್ತು ಪುಣ್ಯ ಇವು ನಮಗೆ ಕಣ್ಣಿಗೆ ಕಾಣದೆ ನಮ್ಮೊಳಗೆ ಮನೆ ಮಾಡಿಕೊಂಡು ನಮ್ಮಲ್ಲಿ ಅನೇಕ ವಿಧವಾದ ಪ್ರೇರಣೆಗಳನ್ನು ಹುಟ್ಟಿಸುತ್ತವೆ, ನಮ್ಮನ್ನು ಬಂಧಿಸುತ್ತವೆ. ಪುಣ್ಯ ಕೆಲಸಗಳು ನಮ್ಮನ್ನು ಬಂಧಿಸುವುದಿಲ್ಲವೆಂದು ನಮ್ಮ ಭಾವನೆ. ಆದರೆ ಪುಣ್ಯಕೆಲಸಗಳು ಶುದ್ಧ ಪುಣ್ಯಗಳಾಗಿರುವುದು ತುಂಬ ಅಪೂರ್ವ. ಅವುಗಳೊಳ್ಳಗೆ ಪಾಪವು ಬೆರೆತಿರುತ್ತದೆ. ಒಬ್ಬನಿಂದ ದೋಚಿ ಇನ್ನೊಬ್ಬನಿಗೆ ದಾನ ಮಾಡುವುದು ಇದಕ್ಕೆ ಒಂದು ದೃಷ್ಟಾಂತ. ನಾವು ಮಾಡುವ ಅನೇಕ ದಾನಗಳು ನಮ್ಮ ಹೆಚ್ಚಿಗೆಯನ್ನು

ತೋರ್ಪಡಿಸಿಕೊಳ್ಳಲು ಅಹಂಭಾವದಿಂದ ಮಾಡಿದ ದಾನಗಳು. ನಾವು ನಡೆಸಿದ ಪೂಜೆಗಳು ಬೂಟಾಟಿಕೆಯ ಪೂಜೆಗಳು. ಆದ್ದರಿಂದ ಸಾಮಾನ್ಯವಾಗಿ ನಾವು ಮಾಡಿದ ಎಲ್ಲ ಕರ್ಮಗಳಲ್ಲೂ ಪಾಪದ ಅಂಟು ಇದೆ.* ಆ ಅಂಟು, ಆ ಜಿಗಟು ನಿರಂತರವಾಗಿ ನಮ್ಮೊಳಗೆ ಮನೆಮಾಡಿ ನಮ್ಮನ್ನು ಬಂಧಿಸುತ್ತದೆ.

೨) ಅನೇಕ ಕಾಲದಿಂದ ನಮ್ಮೊಳಗೆ ಹೊಕ್ಕು ಮನೆ ಮಾಡಿಕೊಂಡಿರುವ ಅಂಟೇ ನಮ್ಮ ಬಂಧನಕ್ಕೆ ಕಾರಣ. ನಾವೇ ನಮ್ಮನ್ನು ಬಂಧಿಸಿಕೊಳ್ಳುವುದು. ಈ ಬಂಧನಕ್ಕೆ ಬೇರೆಯವರು ಕಾರಣರಲ್ಲ. ಈ ಬಂಧನಕ್ಕೆ ಈ ಜನ್ಮದಲ್ಲೇ ನಾವು ಮಾಡಿದ ಕಾರ್ಯಗಳು ಮಾತ್ರ ಕಾರಣವಲ್ಲ. ಜೀವ ಹುಟ್ಟಿದಾರಭ್ಯ ಜೀವನದಲ್ಲಿ ಬೇರೂರಿರುವ ವಾಸನಾರೂಪವಾದ ಪ್ರವೃತ್ತಿಗಳೂ ಕಾರಣಗಳೇ. ಜೀವಿಗಳಿಗೂ ಆಹಾರದ ಆಸೆ, ಕೂಡಿಕೆಯ ಕಾಮ, ಅವುಗಳಿಗೆ ತಡೆಯದಾಗದ ಕ್ರೋಧ, ಜಗಳಗಂಟಿತನ-ಇವು ಸಾವಿರಾರು ವರ್ಷಗಳ ಕಾಲ ಪ್ರಾಣಿವರ್ಗದಿಂದ ಹಿಡಿದು ಮಾನವವರ್ಗದ ವರೆಗೆ ಎಲ್ಲರಲ್ಲಿಯೂ ಬೇರೂರಿರುವ ವಾಸನೆಗಳು. ಈ ವಾಸನೆಗಳು ಅತಿ ಪ್ರಬಲವಾದವು. ಭೌತ ಪ್ರಪಂಚದಲ್ಲಿರುವ ಪ್ರವಾಹಗಳನ್ನು ತಡೆದಿಡಬಹುದು. ಬಿರುಗಾಳಿಯನ್ನು ತಡೆದಿಡಬಹುದು, ಕಾಡುಗಿಚ್ಚನ್ನು ತಡೆದಿಡಬಹುದು. ಆದರೆ ನಮ್ಮೊಳಗೆ, ನಮಗೆ ತುಂಬ ಸಮೀಪದಲ್ಲಿರುವ ಹಸಿವನ್ನು, ಕಾಮವನ್ನು, ಕ್ರೋಧವನ್ನು ತಡೆದಿಡುವುದು ತುಂಬ ಕಷ್ಟ. ಇವುಗಳ ಬಂಧನಕ್ಕೆ ಒಳಗಾಗದವರು ನೂರಕ್ಕೆ ಒಬ್ಬರು ಸಿಗುವುದೂ ಕಷ್ಟ. ಬಂಧನ ಸಾರ್ವತ್ರಿಕ. ನಮಗೆ ತಿಳಿದ ಬಂಧನಗಳನ್ನು ಕೈಬೆರಳು ಮಡಿಸಿ ಎಣಿಸಬಹುದು. ನಮಗೆ ತಿಳಿಯದ ಬಂಧನಗಳು ಎಣಿಕೆಗೆ ಮೀರಿದವು.

೩) ಬಂಧನ ಸಾರ್ವತ್ರಿಕವಾದರೂ ಅದರಿಂದ ಬಿಡುಗಡೆ ಸರ್ವರಿಗೂ ಸಾಧ್ಯ. ಅದಕ್ಕಾಗಿ ನಾವು ಕೈಕೊಳ್ಳಬೇಕಾದ ಸಾಧನಗಳು ಎರಡು. ಹೊಸದಾಗಿ ಪಾಪದ ಅಂಟು ನಮಗೆ ತಗುಲದಂತೆ ಅವುಗಳನ್ನು ತಡೆದಿಡುವುದು. ಈ ತಡೆಯ ಸಾಧನೆಗೆ ಮಹಾವೀರನು ಕೊಟ್ಟ ಹೆಸರು ಸಂವರ.

೪) ಇದಕ್ಕಿಂತ ಕಷ್ಟವಾದ ಸಾಧನೆ-ಅವಿಚ್ಛಿನ್ನವಾಗಿ ನಮ್ಮೊಳಗೆ ಬೇರೂರಿಕೊಂಡಿರುವ ವಾಸನೆಗಳನ್ನು, ಚಾಳಿಗಳನ್ನು ಬೇರು ಸಹಿತ ಕಿತ್ತು ಹಾಕುವುದು. ಈ ಸಾಧನೆಯನ್ನು ಮಹಾವೀರನು ನಿರ್ಜರವೆಂದು ಕರೆದಿದ್ದಾನೆ. ಸುಳ್ಳನ್ನು ತಡೆದಿಡುವುದು, ಕಾಮವನ್ನು ತಡೆದಿಡುವುದು, ಸಂವರ ಸಾಧನೆ. ಸ್ವಾಮ್ಯ ಪ್ರವೃತ್ತಿ ಉಳಿದೆಲ್ಲಕ್ಕಿಂತಲೂ ಅತ್ಯಂತ

---

* ನೇರವಾಗಿ ನಾವು ಮಾಡಿದ ಪಾಪಗಳು ಪಾಪಗಳೆಂಬ ಅರಿವು ಎಲ್ಲರಿಗೂ ಇದ್ದೇ ಇರುತ್ತದೆ. ಆದರೆ ನಾವು ಮಾಡಿದ ಬೂಟಾಟಿಕೆಯ ಪುಣ್ಯಗಳು ಪುಣ್ಯಗಳಲ್ಲ, ಪಾಪಗಳು ಎಂಬ ಅರಿವಿರುವುದಿಲ್ಲ. ಇದರಿಂದ ವಂಚಿತವಾಗುವಷ್ಟು ಬಹುಶಃ ನೇರವಾಗಿ ನಡೆಸಿದ ಪಾಪಗಳಿಂದ ವಂಚಿತರಾಗುವುದಿಲ್ಲ. ಇದರಿಂದ ಉಂಟಾಗುವ ಬಂಧನವನ್ನು ಭೇದಿಸುವುದು ತುಂಬ ಕಷ್ಟ.

ಪ್ರಬಲವಾದದ್ದು ಮತ್ತು ವ್ಯಾಪಕವಾದದ್ದು. ಉಳಿದೆಲ್ಲಕ್ಕೂ ಇದು ಅಡಿಗಲ್ಲು.* ಪ್ರತ್ಯಕ್ಷವಾಗಿ ನಮ್ಮ ಕಣ್ಣಿಗೆ ಕಾಣದ ಅಂಟನ್ನು ತಡೆದಿಡುವುದು ಸಂವರ. ಪರೋಕ್ಷವಾಗಿ ನಮ್ಮ ಕಣ್ಣಿಗೆಕಾಣದ ಅಂಟನ್ನು ಧ್ವಂಸಮಾಡುವುದು ನಿರ್ಜರ. ನಿರ್ಜರವನ್ನು ಸಾಧಿಸಿದವನಿಗೆ ಮುಕ್ತಿ ಕೈಗೆಟುಕುವಷ್ಟು ಹತ್ತಿರ.

ಈ ನಿರ್ಜರ ಸಾಧನೆಗೆ ತುಂಬ ಸತ್ವ ಬೇಕು. ಸಾಹಸ ಬೇಕು. ಅದರ ಸಾಧನೆಯ ವೀರಮಾರ್ಗವನ್ನು ಧೀರನಾಗಿ ಕಂಡುಹಿಡಿದವನು ಮಹಾವೀರ. ಅವನು ದೀಕ್ಷೆ ಪಡೆದ ಕಾಲದಲ್ಲಿ ಅವನು ಪಡೆದಿದ್ದುದು ಸಾಮಾನ್ಯವಾಗಿ ಎಲ್ಲರೂ ಮನಸ್ಸಿನಿಂದ ಪಡೆಯಬಹುದಾದ ಮತಿಜ್ಞಾನ. ಪ್ರತಿಗಳ ಮೂಲಕ ಹಿಂದಿನಿಂದ ಕೇಳಿಬಂದ ಸತ್ಯಗಳ ಜ್ಞಾನ–ಶ್ರುತಿಜ್ಞಾನ. ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳ ತಿಳಿವು–ಅವಧಿ–ಜ್ಞಾನ. ಈ ಮೂರು ಬಗೆಯ ಜ್ಞಾನಗಳಿಂದಲೇ ಪೂರ್ಣವಾಗಿ ನಿರ್ಜರವನ್ನು ಸಾಧಿಸಲು ಸಾಧ್ಯವಿಲ್ಲ. ಅದಕ್ಕೆ ಮನಃಪರ್ಯಯ ಜ್ಞಾನ ಅಗತ್ಯ.

೪. ಮನಃಪರ್ಯಾಯ ಜ್ಞಾನ

ಮನಃಪರ್ಯಯವೆಂದರೆ ಇತರರ ಮನಸ್ಸಿನಲ್ಲಿ ಹಾದುಹೋಗುವ ಆಲೋಚನೆಗಳನ್ನು ತಿಳಿಯುವುದು ಎಂದು ಅರ್ಥಮಾಡಿಕೊಂಡಿರುವುದುಂಟು. ಇದಿಷ್ಟರಿಂದಲೇ ಮನಃಪರ್ಯಯ ಜ್ಞಾನ ಪೂರ್ಣವಾಗುವುದಿಲ್ಲ. ಅಂಥ ತಿಳಿವಿನಿಂದ ನಮಗೆ ಆತ್ಮಜ್ಞಾನದ ಸಿದ್ಧಿ ದೊರೆಯುವುದಿಲ್ಲ. ಕಳ್ಳನು ತನ್ನಲ್ಲೇ ಗೋಪ್ಯವಾಗಿಟ್ಟುಕೊಂಡಿದ್ದ ಭಾವನೆಯನ್ನು ತಿಳಿದೆವೆನ್ನೋಣ. ಅದರಿಂದ ಕಳ್ಳನ ಮನೋವೃತ್ತಿ ತಿಳಿದಂತಾಯಿತೇ ಹೊರತು, ನಮಗೆ ಮುಕ್ತಿಮಾರ್ಗ ತಿಳಿಯಲಿಲ್ಲ. ಅವನು ಗೋಪ್ಯವಾಗಿಟ್ಟುಕೊಂಡದ್ದನ್ನು ಇತರ ಮಾರ್ಗಗಳಿಂದ ಪೋಲೀಸರವನೂ ಹೊರಹಾಕಬಹುದು.

ಮನಃಪರ್ಯಯಜ್ಞಾನವೆಂದರೆ ಕರ್ಮದ ಸುಳಿವನ್ನು ಬೇರಿನಿಂದ ತುದಿಯವರೆಗೆ ಅದರ ಎಲ್ಲ ರೂಪಾಂತರಗಳನ್ನೂ ತಿಳಿಯುವುದು. ಇದಕ್ಕಿಂತ ಹೆಚ್ಚಾಗಿ ಮನಸ್ಸನ್ನು ಪರಿವರ್ತನೆ ಮಾಡಿಕೊಳ್ಳುವ ರೀತಿಯನ್ನು ತಿಳಿದುಕೊಳ್ಳುವುದು. 'ಎಲ್ಲ ಪಾಪಗಳಿಗೂ ಮೂಲ ನಾವೇ' ಎಂಬ ತಿಳಿವು ಅತಿ ಮುಖ್ಯ. ಈ ಜ್ಞಾನ ದೇವರನ್ನು ನಂಬಿದ ಮಾತ್ರಕ್ಕೆ ಬರುವುದಿಲ್ಲ. ಬಹುಶಃ ಅದು ಆ ಜ್ಞಾನಕ್ಕೆ ಸಾಧಕವಾಗುವುದರ ಬದಲು ಬಾಧಕವಾಗ

---

* ನಾವು ಯಾವುದನ್ನು ನಾಗರಿಕತೆ ಎಂದು ತಿಳಿದಿದ್ದೇವೆಯೋ ಯಾವುದು ಈಗ ಅತ್ಯಂತ ಮೇಲ್ಮಟ್ಟದ ನಾಗರಿಕತೆಯೆಂದು ಪರಿಗಣಿಸಲ್ಪಟ್ಟಿದೆಯೋ ಆ ನಾಗರಿಕತೆ ಸ್ವಾಮ್ಯಪ್ರವೃತ್ತಿಯ ಅಡಿ ಮತ್ತು ಮುಡಿ. ಇಂದಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಂಡ ಸಮಸ್ಯೆಗಳಿಗೆ ಸಂಬಂಧಿಸಿದ್ದು. ಸ್ವಾಮ್ಯಬುದ್ಧಿಯನ್ನು ನಿರ್ಮೂಲಗೊಳಿಸಲು ಪಣ ತೊಟ್ಟಿರುವ ಸೋವಿಯತ್ ನೀತಿಯ ತಳಗಡೆ ಸ್ವಾಮ್ಯದ ಅಂಟು ಸ್ವಲ್ಪವಾಗಿ ಅದರೂ ಇದ್ದೇ ಇದೆ. ಆ ಅಂಟನ್ನು ಕಳಚಲು ಆ ನೀತಿ ಇನ್ನೂ ಬಹು ದೂರ ಸಾಗಬೇಕಾಗಿದೆ.

ಬಹುದು. ದೇವರು ಸರ್ವಕರ್ತನಾದರೆ ಎಲ್ಲಕ್ಕೂ ಕಾರಣನಾದರೆ ನಮ್ಮ ಪಾಪಕ್ಕೂ ಅವನೇ ಕಾರಣನೆಂದು ಆದರ ಹೊಣೆಗಾರಿಕೆಯನ್ನು ಅವನ ಕತ್ತಿಗೆ ಕಟ್ಟಿ ನಾವು ಜಾರಿಕೊಳ್ಳಬಹುದು. ವಿಧಿಯೇ ಎಲ್ಲಕ್ಕೂ ಕಾರಣವೆಂದರೂ ನಮಗೆ ಹೊಣೆಗಾರಿಕೆ ಇಲ್ಲವೆಂದಾಗುತ್ತದೆ. ಆ ವಾದಗಳು ಪಾಪ–ಪುಣ್ಯಗಳೇ ಇಲ್ಲ ಎಂಬ ವಾದಕ್ಕೂ ದಾರಿಮಾಡಿಕೊಡುತ್ತದೆ. 'ನಮ್ಮ ಪಾಪಕ್ಕೆ ನಾವೇ ಕಾರಣರು' ಎಂದು ತಿಳಿದ ವಿನಾ ಶೀಲಜೀವನಕ್ಕೆ ಭದ್ರವಾದ ತಳಹದಿ ಇಲ್ಲವಾಗುತ್ತದೆ.

'ಪಾಪಗಳಿಗೆ ಬೀಜರೂಪವಾದದ್ದೇನು ?' ಎಂಬುದು ಮೂಲಪ್ರಶ್ನೆ. ಇದಕ್ಕೆ ಅವಿದ್ಯೆ ಅಥವಾ ತಿಳಿವಿಲ್ಲದ್ದು ಮೂಲಕಾರಣ ಎಂದು ಎಲ್ಲ ಮತಗಳೂ ಹೇಳಿರುತ್ತವೆ. ಯಾವುದು ಆ ತಪ್ಪು ತಿಳಿವು ? ಮಹಾವೀರನು ತಿಳಿದುಕೊಂಡ ಉತ್ತರವಿದು : (೧) ಎಲ್ಲವೂ ಪ್ರಾಣರೂಪಗಳು. ಪ್ರಾಣದ ಪರ್ಯಾಯಗಳು. ಎಲ್ಲಕ್ಕೂ ಅಂತರ್ಯವಿದೆ, ಎಲ್ಲಕ್ಕೂ ತನ್ನದೇ ಆದ ವ್ಯಕ್ತಿತ್ವವಿದೆ. ಯಾವುದೊಂದೂ ಇನ್ನೊಂದರ ಪುನರುಚ್ಚರಣೆಯಲ್ಲ. ಯಾವುದೊಂದೂ ಇನ್ನೊಂದರ ಪುನರುಚ್ಚರಣೆಯಲ್ಲ. ಯಾವುದೊಂದೂ ಇನ್ನೊಂದರ ಪ್ರತಿನಿಧಿಯಾಗಲಾರದು. (೨) ಎಲ್ಲವೂ ತನ್ನತನ ಪಡೆದಿವೆ ಎಂದಾಗ ಒಂದು ಕಲ್ಲಿನ ಕಣ ಕೂಡ ವ್ಯಕ್ತಿತ್ವ ಪಡೆದಿದೆ ಎಂದು ಅವನ ಭಾವನೆ. ಆ ಕಲ್ಲಿನ ಕಣಕ್ಕೆ ಎಲ್ಲ ಇಂದ್ರಿಯಗಳು ಇಲ್ಲದಿರಬಹುದು. ಆದರೆ ಸ್ಪರ್ಶೇಂದ್ರಿಯವಿಲ್ಲದಿಲ್ಲ. ಸ್ವಶಕ್ತಿ ಇಲ್ಲದ ಜಡಪದಾರ್ಥವಲ್ಲ ಅದು. ಆ ಅಣುವಿಗೂ ಕೂಡ ಕ್ರಿಯಾಶಕ್ತಿ ಇದೆ. ಎಷ್ಟೇ ಕ್ಷಣಿಕವಾದುದಾಗಲಿ ಅದಕ್ಕೆ ಹುಟ್ಟು, ಬೆಳೆ, ಕ್ಷೀಣದೆಶೆಗಳು ಇವೆ. ಕಾಲಾನುಂತರದಲ್ಲಿ ಅದಕ್ಕೆ ಪರಿವರ್ತನೆಯಾಗುವ ಭವಿಷ್ಯವಿದೆ. ಕಣವಾಗಿದ್ದದ್ದೇ ಸಾವಿರಾರು ಜನ್ಮಾಂತರಗಳ ರೂಪಾಂತರಗಳಿಂದ ಮೇಲೆ ಮೇಲೆ ಏರಿ ಮುಕ್ತನಾದ ಕೇವಲಿಯಾಗಬಹುದು. "ಗೋಡೆಯ ಬಿರುಕಿನಲ್ಲಿರುವ ಪುಷ್ಪವೇ, ನಿನ್ನ ಎಲ್ಲ ರೂಪಾಂತರಗಳನ್ನು ತಿಳಿದಾಗ ಮಾನವನನ್ನೂ ದೇವರನ್ನೂ ತಿಳಿದಂತಾಗುತ್ತದೆ." ಎಂದು ಟೆನಿಸನ್ ಕವಿ ಹೇಳಿದ್ದನ್ನು ಮಹಾವೀರನು ಅಕ್ಷರಶಃ ಒಪುತ್ತಾನೆ. ೩) ಈ ಭಾವವಿರುವವನು ಯಾವುದನ್ನೂ ಒಂದು ಭೋಗಸಾಮಗ್ರಿ, ಎಂದು ಕಾಣದೆ, ಎಲ್ಲವನ್ನೂ ತನ್ನದೇ ಆದ ಗುರಿಪಡೆಯಬಲ್ಲ ವ್ಯಕ್ತಿಯಂತೆ ಗೌರವಿಸುತ್ತಾನೆ. ಒಂದು ಮಾವಿನ ಮರವನ್ನು ನೋಡಿ ಅದು ತನ್ನ ಸ್ವಭಾವವನ್ನು ಪರಿಪೂರ್ಣಮಾಡಿಕೊಳ್ಳಲು ಹಣ್ಣು ಬಿಡುತ್ತದೆ ಎಂದು ತಿಳಿಯದೆ, ಅದು ಹಣ್ಣು ಬಿಡುವುದು ನಾವು ತಿನ್ನುವುದಕ್ಕಾಗಿಯೇ ಎಂದು ಭಾವಿಸಿದರೆ, ಅದರ ಸತ್ಯಸೌಂದರ್ಯ ಅವನಿಗೆ ತಿಳಿಯದಂತಾಗುತ್ತದೆ. ಆ ನೀತಿತತ್ವ ಎಲ್ಲದರಲ್ಲೂ ಪ್ರಾಣವಿದೆ ಎಂಬ ತತ್ವದಿಂದ ಅನುಗತವಾಗಿ ಬಂದದ್ದು. ಸಾಮಾನ್ಯವಾಗಿ ನಾವೆಲ್ಲರೂ ಉಳಿದೆಲ್ಲವರ ವಿಚಾರದಲ್ಲೂ ಮೂರು ಬಗೆಯಾಗಿ ಭಾವಿಸುತ್ತೇವೆ: "ಇದು ನಮಗೆ ಉಪಯೋಗಕರವಾದದ್ದು, ಇದು ಪ್ರತಿಕೂಲವಾದದ್ದು, ಇದು ನಿರುಪಯೋಗವಾದದ್ದು." ಉಪಯೋಗವಾದದ್ದರಲ್ಲಿ ಆದರ, ಪ್ರತಿಕೂಲವಾದದ್ದರಲ್ಲಿ ಅನಾದರ, ನಿರುಪಯೋಗ

ವಾದದ್ದರಲ್ಲಿ ಔದಾಸೀನ್ಯ ಹುಟ್ಟುತ್ತದೆ. ಈ ರೀತಿಯಾಗಿ ಭಾವಿಸುವುದು ಕೆಟ್ಟ ನಡತೆಯಲ್ಲವೆಂದು ನಮ್ಮೆಲ್ಲರ ಭಾವನೆ. ಆದರೆ ಧರ್ಮವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಮಹಾವೀರನಿಗೆ ಈ ಮೂರೂ ಎಲ್ಲ ಪಾಪಪ್ರವೃತ್ತಿಗಳಿಗೂ ಮೂಲವೆಂಬುದು ಸ್ಪಷ್ಟವಾಯಿತು. ಈ ಮೂರು ಭಾವಗಳನ್ನುಳ್ಳಾತನು ಪ್ರತಿಯೊಂದೂ ಪವಿತ್ರಾತ್ಮ ಉಳ್ಳದ್ದು, ತನ್ನದೇ ಆದ ಪವಿತ್ರಗತಿ ಉಳ್ಳದ್ದು ಎಂಬ ತಿಳಿವಳಿಕೆಯಿಲ್ಲದೆ ಅದರ ಅಸ್ತಿತ್ವವನ್ನು ಗೌರವಿಸುವುದಿಲ್ಲ. ಇದು ನಾವು ಮಾಡುವ ಅಪಚಾರ ಎಂಬ ಸೂಕ್ಷ್ಮಬುದ್ಧಿ ಇರುವುದಿಲ್ಲ. ಈ ಸೂಕ್ಷ್ಮಧರ್ಮವನ್ನು ಚೇತನಗೊಳಿಸುವುದು ಮನಃಪರ್ಯಯಜ್ಞಾನ. ನಮ್ಮ ಅಂತರಂಗದಲ್ಲಿ ತುಂಬ ಆಳವಾಗಿ ಒಳಹೊಕ್ಕು ಪರೀಕ್ಷಿಸಿದರೆ ನಮ್ಮ ಎಲ್ಲ ಬಗೆಯ ದುರಭಿಮಾನಗಳಿಗೂ, ನಮಗೆ ಈ ಸೂಕ್ಷ್ಮ ಧರ್ಮಬುದ್ಧಿಯ ಅರಿವಿಲ್ಲದಿರುವುದೇ ಕಾರಣವೆಂದು ಸ್ಪಷ್ಟವಾಗುತ್ತದೆ. ಆ ಸೂಕ್ಷ್ಮ ಧರ್ಮಬುದ್ಧಿಯಿಂದ ಉಂಟಾದ ಅರಿವಿನ ಆ ವಿಶೇಷ ಪರಿವರ್ತನೆಯೇ ಮನಃಪರ್ಯಯಜ್ಞಾನ.

೫. ಸಿದ್ಧ ಪುರುಷ

ಈ ಜ್ಞಾನ ಪಡೆಯಬೇಕಾದರೆ ಮಹಾವೀರನು ಬಹುವಾಗಿ ತಪಸ್ಸು ಮಾಡಬೇಕಾಯಿತು. ಅವನು ಆರು ತಿಂಗಳ ಕಾಲ ತಪಶ್ಚರ್ಯೆ ನಡಸಿದಮೇಲೂ ಅವನಿಗೆ ಆ ಜ್ಞಾನ ಲಭಿಸವೆ ಅವನು ಕುಂದಗ್ರಾಮವನ್ನು ಬಿಟ್ಟು ಕುಲಪುರಕ್ಕೆ ಹೋದನು. ಅಲ್ಲಿ ಆರು ತಿಂಗಳ ಕಾಲ ಕುಳಿತ ಜಾಗದಿಂದ ಕದಲದೆ ಒಂದೇ ಸಮನಾಗಿ ತಪಸ್ಸಿನಲ್ಲಿ ಮೈಮರೆತ. ಆರು ತಿಂಗಳ ನಂತರ ಉಪವಾಸವನ್ನು ಬಿಟ್ಟು ಆ ನಗರದ ರಾಜನಾದ ಕುಲಾಧಿಪನು ಅರ್ಪಿಸಿದ ಕ್ಷೀರಾನ್ನವನ್ನುಂಡು ಪಾರಣೆನಡೆಸಿದ. ಅಲ್ಲಿಂದ ಪುನಃ ಕಾಡಿಗೆ ಹೋಗಿ ಹನ್ನೆರಡು ಬಗೆಯ ತಪಸ್ಸುಗಳನ್ನು ಆಚರಿಸಿದ ಮೇಲೆಯೂ ಆ ಜ್ಞಾನ ದೊರೆಯಲಿಲ್ಲ. ಅವನು ಉಜ್ಜಯಿನಿಗೆ ಹೋಗಿ ಅಲ್ಲಿಯ ಸ್ಮಶಾನದಲ್ಲಿ ತಪಸ್ಸು ಮಾಡಿದ. ಅಲ್ಲಿ ರುದ್ರ ಮತ್ತು ಅವನ ಹೆಂಡತಿಯೊಡ್ಡಿದ ಯಾವ ಪ್ರೇರಣೆಗಳಿಗೂ ಅವನು ಬಲಿಯಾಗದೆ, ಜಿತೇಂದ್ರಿಯನಾಗಿ ಪುನಃ ಅರಣ್ಯವಾಸಕ್ಕೆ ಮರಳಿದನು. ಆಗ ಅಲ್ಲಿ ಅವನಿಗೆ ಮನಃಪರ್ಯಯ ಜ್ಞಾನೋದಯವಾಯಿತು. ಅವನು ಮನಃಪರ್ಯಯಜ್ಞಾನ ಪಡೆದಾಗ ಅವನು ಹೇಗಿದ್ದನೆಂಬುದನ್ನು ಕಲ್ಪಸೂತ್ರದಲ್ಲಿ ಈ ರೀತಿ ಚಿತ್ರಿಸಿದೆ :

"ಬೆಳಗಿದ ತಾಮ್ರದ ಚೆಂಬಿಗೆ ನೀರೂ ಶಂಖದ ನುಣುಪಾದ ಭಾಗಕ್ಕೆ ಕಾಡಿಗೆಯೂ ಅಂಟದಂತೆ ಪಾಪಗಳು ಅವನಿಗೆ ಅಂಟಲಿಲ್ಲ ; ಹರಿಯುವ ನೀರಿಗೆ ತಡೆ ಇಲ್ಲದಂತೆ ಅವನ ಜೀವಕ್ಕೆ ತಡೆ ಇರಲಿಲ್ಲ. ಆಕಾಶದಂತೆ ಅವನಿಗೆ ಯಾವ ಆಸರೆಯೂ ಇಲ್ಲದಾಯಿತು. ಆತನ ಹೃದಯ ಗ್ರೀಷ್ಮಕಾಲದ ಕೆರೆಯ ನೀರಿನಂತೆ ತಿಳಿಯಾಗಿತ್ತು, ಕಮಲಪತ್ರದಂತೆ ಕಶ್ಮಲರಹಿತವಾಗಿತ್ತು ; ಆಮೆಯಂತೆ ಆತನ ಇಂದ್ರಿಯಗಳು ಸುರಕ್ಷಿತವಾಗಿದ್ದವು.

ಗೇಂಡಾಮೃಂಗದ ಒಂದೇ ಕೊಂಬಿನಂತೆ ಅವನು ಏಕಾಗ್ರಚಿತ್ತನಾಗಿದ್ದ. ಹಕ್ಕಿಯಂತೆ ಸ್ವತಂತ್ರನೂ, ಸಿಂಹದಂತೆ ಅಜೇಯನೂ, ಮಂದಾರದಂತೆ ಸ್ಥಿರಚಿತ್ತನೂ, ಸಮುದ್ರದಂತೆ ಗಂಭೀರನೂ, ಚಂದ್ರನಂತೆ ಸೌಮ್ಯನೂ, ಸೂರ್ಯನಂತೆ ದೇದೀಪ್ಯಮಾನನೂ, ಅಪರಂಜಿ ಚಿನ್ನದಂತೆ ಶುದ್ಧನೂ, ಭೂಮಿಯಂತೆ ಕ್ಷಮಶೀಲನೂ ಆಗಿದ್ದನು...."

೬. ಕೇವಲಜ್ಞಾನಸಿದ್ಧಿ

ನಾಲ್ಕನೆಯ ಜ್ಞಾನದ ಮೆಟ್ಟಿಲನ್ನು ಮುಟ್ಟಿದ ಮೇಲೆ ಅವನು ಐದನೆಯದೂ, ಕೊನೆಯದೂ ಆದ ಕೇವಲಜ್ಞಾನವನ್ನು ಮುಟ್ಟಲು ಹೆಚ್ಚು ಕಾಲ ಕಾಯಲಿಲ್ಲ. ಅವನು ಪಾರ್ಶ್ವನಾಥ ಗುಡ್ಡದ ಬಳಿ ರುಜ್ಯಂಭಿಕ ಗ್ರಾಮದ ಬಳಿಯಲ್ಲಿದ್ದ ಒಂದು ಅಶೋಕವೃಕ್ಷದ ಕೆಳಗೆ ಒಂದು ವರ್ಷ ಕಾಲ ತಂಗಿದನು. ದೀಕ್ಷೆ ಪಡೆದಾಗ ಎರಡೂವರೆ ದಿವಸಗಳ ಕಾಲ ಉಪವಾಸವ್ರತ ಆಚರಿಸಿದ. ಈ ಕಾಲದಲ್ಲಿ ಅವನು ಧ್ಯಾನಾರೂಢನಾಗಿದ್ದಾಗ, ಅವನಿಗೆ ಕೇವಲಜ್ಞಾನ ಉಂಟಾಯಿತು. ಆ ಸಿದ್ಧಿ ಪಡೆದವನಿಗೆ ಕೇವಲಿನ್ ಎಂದು ಹೆಸರು.

ಕೇವಲಜ್ಞಾನವೆಂದರೆ ಸರ್ವಜ್ಞತ್ವವೆಂದು ಜೈನಾಗಮಗಳು ಹೇಳಿವೆ. ಆದರೆ ಈ ಸರ್ವಜ್ಞತ್ವ ಯಾವ ಬಗೆಯದು, ಯಾವುದಕ್ಕೆ ಮಾತ್ರ ಕ್ಲೃಪ್ತವಾದುದು ಎಂಬುದನ್ನು ಜೈನಗ್ರಂಥಗಳು ಹೇಳಿರುವುದು ಏನೆಂಬುದನ್ನು ವಿಶದಪಡಿಸಿಕೊಳ್ಳದಿದ್ದರೆ ಸರ್ವಜ್ಞತ್ವದ ವಿಚಾರವಾಗಿ ತಪ್ಪು ಭಾವನೆಗಳು ಹುಟ್ಟುವ ಸಂಭವ ಉಂಟು. ಈ ಸರ್ವಜ್ಞತ್ವ ಹೊರ ಪ್ರಪಂಚದ ವಸ್ತುಗಳ ಜ್ಞಾನವಲ್ಲ; ಅದು ವಿಷಯಜ್ಞಾನ (objective knowledge) ವಲ್ಲ, ಇಂದ್ರಿಯಪ್ರತ್ಯಕ್ಷ ಮತ್ತು ಅನುಮಾನಗಳನ್ನು ಆಶ್ರಯಿಸಿದ ಜ್ಞಾನವಲ್ಲ. ಹೊರವಸ್ತುಗಳ ಜ್ಞಾನ ಎಷ್ಟೇ ಪ್ರತ್ಯಕ್ಷವಾದ ಜ್ಞಾನವಾಗಲಿ ಅದು ಅನ್ಯವಸ್ತುವಿಗೆ ಸಂಬಂಧಿಸಿದ್ದಾದುದರಿಂದ ಅದು ನಿಜವಾಗಿ ಪರೋಕ್ಷವೇ; ಅದು ಶುದ್ಧ ನಿಶ್ಚಯಜ್ಞಾನವಲ್ಲ. ಆತ್ಮದ ತಿಳಿವಿನಂತೆ ಪರಪದಾರ್ಥದ ತಿಳಿವು ಸಂಪೂರ್ಣಜ್ಞಾನವಾಗುವುದು, ಸಂಪೂರ್ಣವಾಗಿ ವಿಶದಜ್ಞಾನವಾಗುವುದು ದುರ್ಲಭ. ಹೊರವಸ್ತುವಾದ ಒಂದು ಇರುವೆಯನ್ನು ತಿಳಿಯಲು ಪ್ರಾಣಿವಿಜ್ಞಾನಿಗಳು ಒಂದು ಶತಮಾನಕಾಲ ಶ್ರಮಿಸಿದರೂ ಇರುವೆಯ ವಿಚಾರವಾದ ಜ್ಞಾನ ಪೂರ್ಣವಾಯಿತೆಂದು ಹೇಳುವಂತಿಲ್ಲ. ಮಹಾವೀರನು ಅಂಥ ಜ್ಞಾನವಿಷಯಗಳಲ್ಲಿ ತಾನು ಪರಮಜ್ಞಾನಿಯಲ್ಲವೆಂದು ಸ್ಪಷ್ಟಪಡಿಸಿರುತ್ತಾನೆ.

ಪೂರ್ಣ ನಿಶ್ಚಿತಜ್ಞಾನ, ಶುದ್ಧ ನಿಶ್ಚಿತಜ್ಞಾನ ನಮ್ಮ ಆತ್ಮಕ್ಕೆ ಮಾತ್ರ ನೇರವಾಗಿ ಸಂಬಂಧಿಸಿದ್ದು. ಅದಕ್ಕೆ ಯಾನ, ಯಾರ ಮಧ್ಯಸ್ಥಿಕೆಯೂ ಬೇಕಿಲ್ಲ. ತನ್ನನ್ನೇ ಆಶ್ರಯಿಸಿ, ತಿಳಿಯುವವನೂ ತಾನೇ ಆಗಿ, ತೋರಿಸುವ ಬೆಳಕೂ ತಾನೇ ಆಗಿ, ಸ್ವಾಧೀನಪಡಿಸಿಕೊಂಡ ಸ್ವತಃಸಿದ್ಧವಾದ ಜ್ಞಾನ ಅದು. ಸ್ವತಃಪ್ರಾಮಾಣ್ಯವಾದ ಜ್ಞಾನ. ಪರಾಧೀನವಿಲ್ಲದೆ ಅದನ್ನು ಸಾಧಿಸಿಕೊಂಡವನು ಮಹಾವೀರ. ಅವನದು ಆತ್ಮಜ್ಞಾನದ

ಸರ್ವಜ್ಞತ್ವ; ವಿಷಯಜ್ಞಾನದ ಸರ್ವಜ್ಞತ್ವವಲ್ಲ.

ಮಹಾವೀರನು ಕೇವಲಜ್ಞಾನ ಪಡೆದಮೇಲೆ ಅವನು ಮೊಟ್ಟಮೊದಲಿಗೆ ತನ್ನ ತತ್ತ್ವವನ್ನು ಉಪದೇಶಿಸಿದ್ದು ಆತನ ಮೊದಲ ಶಿಷ್ಯನಾದ ಗೌತಮ ಇಂದ್ರಭೂತಿಗೆ. ಅವನು ಗೌತಮಬುದ್ಧನಾಗಿರಬಹುದೆ? ಇದು ಸಂಶಯಾಸ್ಪದ ವಿಷಯ. ಇದರ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಇಲ್ಲಿ ಪ್ರಸಕ್ತವಾದದ್ದು ಅವನಿಗೆ ಮಹಾವೀರನು ಕೊಟ್ಟ ಉಪದೇಶ. ಅದು ಬಹುಶಃ ಈ ರೀತಿಯದಾಗಿರಬಹುದು:

'ನಾನು ಕಂಡಿರುವುದು ಧರ್ಮಸೂಕ್ಷ್ಮದ, ಕರ್ಮಸೂಕ್ಷ್ಮದ ಸರ್ವ ಪರ್ಯಾಯಗಳನ್ನು ಮಾತ್ರವೇ. ಪಾಪವೆಂದರೇನು, ಪಾಪ ಹುಟ್ಟುವುದು ಹೇಗೆ, ಪಾಪಗಳನ್ನು ತಡೆಯುವುದು ಹೇಗೆ, ಪಾಪದ ಸುಳಿಯನ್ನು ಬೇರುಸಹಿತ ಕಿತ್ತುಹಾಕಿ, ಯಾವುದನ್ನೂ ನಿಕೃಷ್ಟವೆಂದೆಣಿಸದೆ, ಯಾವುದೊಂದನ್ನೂ ಕೇವಲ ಸಾಧನ ಸಾಮಗ್ರಿಯೆಂದು ಭಾವಿಸದೆ, ಆ ಭಾವ ನನ್ನನ್ನು ಬಂಧಿಸದಂತೆ, ನನ್ನ ತಿಳಿವನ್ನೂ, ನುಡಿಯನ್ನೂ, ನಡತೆಯನ್ನೂ, ಪಳಗಿಸುವ ಸರ್ವವಿಧಾನವನ್ನೂ ತಿಳಿದುಕೊಂಡಿದ್ದೇನೆ. ಈ ಜ್ಞಾನ ವಿಷಯಜ್ಞಾನ (objective knowledge)ವಲ್ಲ, ಆತ್ಮಜ್ಞಾನ (ನಾನು ಇಚ್ಛಿಸಿದ್ದು ಆತ್ಮಜ್ಞಾನ, ನಾನು ಪಡೆದಿರುವುದು ಆತ್ಮಜ್ಞಾನ.) ನನ್ನಲ್ಲಿರುವ ವಿಷಯಜ್ಞಾನ ಅತ್ಯಲ್ಪ. ಆತ್ಮದ ಜ್ಞಾನದಲ್ಲಿ ನನಗೆ ಸಂಪೂರ್ಣ ಬಿಡುಗಡೆಯಾಗಿದೆ. ಅದು ನನ್ನ ಆತ್ಮಸಾಕ್ಷಿಯ ಪ್ರಮಾಣದಿಂದ ನನಗೆ ಶುದ್ಧ ನಿಷಿದ್ಧ ಜ್ಞಾನವಾಗಿದೆ. ಈ ಸಂಪೂರ್ಣ ನಂಬಿಕೆಯೆ, ನೆಚ್ಚಿಕೆಯೆ ನನ್ನ ಜ್ಞಾನಸರ್ವಜ್ಞ, ನನ್ನ ಸರ್ವಜ್ಞತ್ವ. ಆ ದೋಣಿ ನನ್ನನ್ನು ಆಚೆಯ ದಡಕ್ಕೆ ಒಯ್ದಿದೆ. ಅದರಿಂದ ನಾನು ತೃಪ್ತನಾಗಿದ್ದೇನೆ. ನನಗೆ ಬೇರೆಯವರ ಹಂಗಿಲ್ಲ. ನನ್ನ ಹಂಗು ಇತರರಿಗೆ ಬೇಡ. ಇತರರು ನನ್ನ ಹಂಗಿನವರು ಎಂದು ನಾನು ಅರೆಕ್ಷಣವಾದರೂ ಯೋಚಿಸಿದ್ದಾದರೆ ಅದು ಘೋರಪಾಪವೆಂದು ನನಗೆ ಕಂಡಿದೆ. ಹಾಗೆ ಯೋಚಿಸಿದಾಗ ನಾನು ರೌರವನರಕಕ್ಕೆ ಬೀಳುವ ದೃಶ್ಯ ನನ್ನ ಕಣ್ಣಮುಂದೆ ನಿಂತಿದೆ. ಅಂಥಾ ಯೋಚನೆ ಇಲ್ಲದಾಗ ನನಗೆ ಶಾಂತಿ ಮತ್ತು ಸಮಾಧಾನ ದೊರೆತಿದೆ. ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಕಂಡ ಬೆಳಕಿನಲ್ಲಿ ಬಾಳಿದರೆ ಅವನಿಗೆ ಮುಕ್ತಿ, ಮಾನವ ತನ್ನಿಂದ ತಾನೇ ಕೆಡುತ್ತಾನೆ. ತನ್ನಿಂದ ತಾನೆ ಉದ್ಧಾರವಾಗುತ್ತಾನೆ. ಇತರರು ಅದಕ್ಕೆ ಕಾರಣರಲ್ಲ. ಅವರು ಸ್ವಪ್ರೇರಣೆಯ ಪ್ರೇರಕರು ಮಾತ್ರವೆ. ಇತರರನ್ನು ನಾನು ಉಳಿಸುತ್ತೇನೆ ಎಂದರೆ ನರಕ, ನಾನು ಇತರರಿಂದ ಉದ್ಧಾರವಾಗುತ್ತೇನೆಂದರೆ ಅದು ಬಂಧನ. ಆದ್ದರಿಂದ ನೀನು ಗುರುವಾದ ನನ್ನಲ್ಲಿ ಇಟ್ಟುಕೊಂಡಿರುವ ಮೋಹ, ದಾಸ್ಯಭಾವ ನಿನ್ನಲ್ಲಿರುವವರೆಗೆ, ನಿನಗೆ ಕೇವಲಜ್ಞಾನ, ಅಂತಿಮ ಬಿಡುಗಡೆ ಸಿದ್ಧಿಸುವುದಿಲ್ಲ. ಈ ಗುರುಮೋಹ, ಈ ಪರಾಧೀನಭಾವವನ್ನು ಕೂಡ ನೀನು ನಿರ್ಮೂಲಗೊಳಿಸಿ ಗೆಲ್ಲಬೇಕು'.

ಆದ್ದರಿಂದಲೇ ಗೌತಮ ಇಂದ್ರಭೂತಿಯು ಮಹಾವೀರನ ಅಂತ್ಯಕಾಲದಲ್ಲಿ ಅವನ ಬಳಿ

ಯಲ್ಲಿ ಇರಬೇಕೆಂಬ ಮಹದಾಸೆಯನ್ನು ಅದುಮಿಟ್ಟು ಅಲ್ಲಿರದೆ ಗುರುವನ್ನು ಸಂಪೂರ್ಣವಾಗಿ ಮರೆತು ಸ್ವಾತ್ಮನಿರತನಾಗಿ ಸ್ವಾತ್ಮಾರಾಮನಾಗಿ ಕೇವಲಜ್ಞಾನ ಪಡೆದನು.

೭. ಧರ್ಮ ಪ್ರಸಾರ

ಮಹಾವೀರನು ತನ್ನ ಮೊದಲ ಶಿಷ್ಯನಿಗೆ ಉಪದೇಶ ಕೊಟ್ಟಮೇಲೆ ಪ್ರಚಾರಕನಾಗಿ ದೇಶದೇಶಗಳನ್ನು ಸುತ್ತಿದನು. ಅವನ ಮತಕ್ಕೆ ವಿದೇಹದ ದೊರೆ ಚೇತಕ, ಅಂಗದೇಶದ ದೊರೆ ಕಣಿಕ, ಕೌಶಾಂಬಿಯ ದೊರೆ ಸತಾನಕ ಮುಂತಾದ ರಾಜರುಗಳ ಮನ್ನಣೆ ದೊರೆಯಿತು. ಅವನು ಬೋಧಿಸುತ್ತಿದ್ದುದು ಅನಕ್ಷರೀ ಭಾಷೆಯಲ್ಲಿ. ಗೌತಮನು ಅದನ್ನು ಮಾಗಧಿಗೆ ಭಾಷಾಂತರಿಸಿ ಜನರಿಗೆ ತಿಳಿಸುತ್ತಿದ್ದ. ಈ ಅನಕ್ಷರೀ ಬಹುಶಃ ಚಿಹ್ನೆಗಳ ಭಾಷೆ ಇರಬಹುದು. ಅಂಥ ಸಂಕೇತಗಳನ್ನು ಈಗಲೂ ಜೈನರು ಬಣ್ಣಬಣ್ಣದ ರಂಗೋಲಿಯಲ್ಲಿ ಬರೆದು ಪೂಜಿಸುತ್ತಾರೆ. ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಸ್ವಸ್ತಿಕ. ಸ್ವಸ್ತಿಕದ ನಾಲ್ಕು ಮೂಲೆಗಳೂ ನಾಲ್ಕು ಬಗೆಯ ಜೀವರುಗಳ ಸಂಕೇತ—ಜೀವಕೋಟಿಗಳ ಸ್ಥಾನ. ಆ ಸಾಲಾಗಿಟ್ಟ ಮೂರು ಬಿಂದುಗಳು ಸಮ್ಯಕ್‌ಜ್ಞಾನ, ಸದ್ದರ್ಶನ, ಸತ್‌ಶೀಲಗಳೆಂಬ ಮೂರು ರತ್ನಗಳ ಸಂಕೇತ. ಇ) ಎಲ್ಲಕ್ಕಿಂತ ಚುಕ್ಕೆಗಳ ಅರ್ಧಚಂದ್ರಾಕೃತಿ ಮೋಕ್ಷದ ಸಂಕೇತ. ಈ ಮೂರರಲ್ಲಿ ಜೀವರ ಸ್ವಭಾವ, ಜೀವ ಬಿಡುಗಡೆ ಹೊಂದಲು ಗಳಿಸಬೇಕಾದ ಶೀಲರತ್ನಗಳು, ಮತ್ತು ಅಂತಿಮ ಬಿಡುಗಡೆ—ಈ ಎಲ್ಲವೂ ಅಡಕವಾಗಿವೆ.

ಮಹಾವೀರನಿಗೂ ಬುದ್ಧನಂತೆ ಉಳಿದೆಲ್ಲ ರಾಜಧಾನಿಗಳಿಗಿಂತ ಮಗಧ ರಾಜಧಾನಿಯಾದ ರಾಜಗೃಹ ಮೆಚ್ಚಿನ ಪಟ್ಟಣವಾಗಿತ್ತು. ಆ ಪಟ್ಟಣಕ್ಕೆ ಹನ್ನೆರಡು ಸಲ ಹೋಗಿ ಅಲ್ಲಿ ಬೋಧಿಸಿದ. ಅವನ ಬೋಧನೆಗೆ ಒಳಪಟ್ಟ ಇತರ ಸ್ಥಳಗಳು: ಅಸ್ತಿಗ್ರಾಮ, ಚಂಪ, ವೈಶಾಲಿ, ಮಿಥಿಲಾ, ಭದ್ರಿಕಾ, ಅಲಂಬಿಕಾ, ಶ್ರಾವಸ್ತಿ. ಅವನು ಮೂವತ್ತು ವರ್ಷಗಳ ಕಾಲ ಪರಿವ್ರಾಜಕನಾಗಿ ಯಾವ ಸ್ಥಳದಲ್ಲೂ ಒಂದರಿಂದ ನಾಲ್ಕೈದು ದಿನಗಳಿಗಿಂತ ಹೆಚ್ಚು ಕಾಲ ನಿಲ್ಲದೆ ದೇಶಪರ್ಯಟನೆಮಾಡಿದನು. ಕೊನೆಯಲ್ಲಿ ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಪಾವಾಪುರದಲ್ಲಿ ಸಂಪರ್ಯಾಣಕ ಆಸನದಲ್ಲಿ ಮಂಡಿಸಿ ಮುವತ್ತಾರು ಪ್ರಶ್ನೆಗಳಿಗೆ ಉತ್ತರವನ್ನು ಒಳಗೊಂಡ ಐವತ್ತಾರು ಭಾಷಣಗಳನ್ನು ಮಾಡಿದನು. ಕೊನೆಯಲ್ಲಿ ಏಕಾಂತದಲ್ಲಿ ಮೃತ್ಯು ಮಹೋತ್ಸವ*ವನ್ನು ಆಚರಿಸಿದನು. ಈ ಉತ್ಸವದ ದಿನ ದೀಪಾವಳಿ. ಜೈನರ ಪರಮ ಪವಿತ್ರಸ್ಥಳ ಪಾವಾಪುರಿ.

---

* ಜೈನರು ಅಂಥ ಸಾವನ್ನು ಮರಣವೆಂದು ಹೇಳುವುದಿಲ್ಲ. ಆ ಸಾವು ಸಂಕಟವಲ್ಲ ; ಉತ್ಸಾಹದ ಸ್ಥಿತಿ.

೮. ಅಂತ್ಯಕಾಲ

ಮಹಾವೀರನ ಅಂತಿಮ ಕಾಲದಲ್ಲಿ ಅವನ ಎಲ್ಲ ಶಿಷ್ಯರು ಅವನ ಬಳಿ ಇದ್ದರು. ಮೊದಲ ಮತ್ತು ಮುಖ್ಯ ಶಿಷ್ಯನಾದ ಗೌತಮ ಇಂದ್ರಭೂತಿ ಮಾತ್ರ ಇಲ್ಲಿರಲಿಲ್ಲ. ಅದಕ್ಕೆ ಕಾರಣ ಈಗಾಗಲೇ ತಿಳಿಸಿದೆ. ಮಹಾವೀರನು ಕಾಲವಾದಮೇಲೆ ಅವನ ಇಬ್ಬರು ಶಿಷ್ಯರು, ಸುಧರ್ಮ ಮತ್ತು ಜಂಬೂ, ಮಹಾವೀರನ ವಚನಗಳನ್ನು ಬರೆದಿಟ್ಟರು. ಇವು ಮುಂದಿನ ಕಾಲದಲ್ಲಿ ಜೈನಾಗಮ ಗ್ರಂಥಗಳಾದುವು. ಇವರೂ ಕೊನೆಯಲ್ಲಿ ಕೇವಲಿಗಳಾದರು.

೯. ಅರ್ಹಂತ

ಮಹಾವೀರನ ಅನುಯಾಯಿಗಳಾದ ಕೇವಲಿಗಳು ಪೂಜಾರ್ಹರಲ್ಲ. ಈ ಯುಗದಲ್ಲಿ ಅವರಿಗೆಲ್ಲ ಆದರ್ಶನಾದ ಮಹಾವೀರನೇ ಪೂಜಾರ್ಹ. ಈ ಅರ್ಹಂತನೇ ಜೈನರ ದೇವರು. ಈ ದೇವರು ಲೋಕನಿರ್ಮಾಪಕ ದೈವವಲ್ಲ. ಲೋಕಕ್ಕೆಲ್ಲಾ ಬೆಳಕಾದ ಮಾನವ. ಈ ದೈವತ್ವ ಬೇರೆ ಯಾವ ಮತದಲ್ಲೂ ಕಾಣದ ಜೈನಮತಕ್ಕೆ ವಿಶಿಷ್ಟವಾದ ದೈವತ್ವ. ಈ ಬೆಳಕಿನ ಗಣ್ಯವಾದ ಪರ್ಯಾಯಗಳು ಹಿಂದಿನ ಇಪ್ಪತ್ತುಮೂರು ತೀರ್ಥಂಕರರು. ಇವರು ಬೇರೆ ಬೇರೆ ಯುಗಗಳ ಅರ್ಹಂತರು. ಅವರು ಯಾರೊಬ್ಬರೂ ಮಹಾವೀರನ ಪಡಿಯಚ್ಚಲ್ಲ; ಮಹಾವೀರನೂ ಅವರ ಪಡಿಯಚ್ಚಲ್ಲ ; ಆದ್ದರಿಂದ ಅವರೆಲ್ಲರೂ ಪೂಜಾರ್ಹರು. ಇವರೇ ಜೈನರ ದೇವರುಗಳು. ಇತರ ಹಿಂದೂ ಮತದವರ ದೇವರುಗಳಂತೆ ಅವರು ಇಳಿದುಬಂದ ದೇವರುಗಳಲ್ಲ ! ಅವತಾರಗಳಲ್ಲ ; ಮೇಲಕ್ಕೇರಿದ ಮಾನವದೇವರುಗಳು. ದೇವಸ್ಥಾನಗಳನ್ನು ಕಟ್ಟಿ ಇವರನ್ನು ವಿಗ್ರಹರೂಪದಲ್ಲಿ ಪೂಜಿಸುವ ಜೈನಾಚಾರ ಸಾಮಾನ್ಯ. ಅದನ್ನು ಬಿಟ್ಟು ಕೇವಲ ಭಾವರೂಪದಲ್ಲಿ ಪೂಜೆ ಸಲ್ಲಿಸುವ ಜೈನಾಚಾರ ಅಪೂರ್ವ.

೧೦

“ಮಹಾವೀರನು ಭಾರತ ಮತಗಳಲ್ಲಿಲ್ಲದ ಯಾವುದೊಂದು ಹೊಸ ತತ್ತ್ವವನ್ನೂ ಕಂಡುಹಿಡಿದವನಲ್ಲವೆಂದೂ, ಜೈನತತ್ತ್ವದಲ್ಲಿ ಯಾವ ವೈಶಿಷ್ಟವೂ ಇಲ್ಲ” ಎಂದು ಒಬ್ಬ ಪಾಶ್ಚಾತ್ಯ ವಿದ್ವಾಂಸನು ಹೇಳಿದ್ದಾನೆ. ಕರ್ಮತತ್ತ್ವ, ಜನ್ಮಾಂತರಗಳ ತತ್ತ್ವ ಅಹಿಂಸಾತತ್ತ್ವ, ಸಮ್ಯಕ್‌ಜ್ಞಾನತತ್ತ್ವ, ಸಮ್ಯಕ್‌ದರ್ಶನತತ್ತ್ವ, ಸಮ್ಯಕ್ ಶೀಲತತ್ತ್ವ—ಇವೆಲ್ಲವೂ ವೈದಿಕ ಮತ್ತು ಬೌದ್ಧ ಮತಗಳಲ್ಲಿವೆ. ಜೈನರ ತತ್ತ್ವಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆ ಒಂದೊಂದು ತತ್ತ್ವಕ್ಕೂ ಮಹಾವೀರ ಹೊಸ ರೂಪ ಕೊಟ್ಟಿರುತ್ತಾನೆಂಬುದು ಸ್ಪಷ್ಟವಾಗುತ್ತದೆ. ಅವೆಲ್ಲದರಲ್ಲೂ ಅವನು ವಿಶಾಲವೂ ವ್ಯಾಪಕವೂ ಆದ ಅರ್ಥ ತುಂಬಿರುತ್ತಾನೆ. ಅ) ಈಗಾಗಲೇ ನಾವು ನೋಡಿರುವಂತೆ ಅವನ ಮನಃ

ಪರ್ಯಯತತ್ತ್ವ ಜೈನಧರ್ಮಕ್ಕೆ ವಿಶಿಷ್ಟವಾದದ್ದು. ಆ) ದೇವರು ಲೋಕಕರ್ತನಲ್ಲ. ಆದ್ದರಿಂದ ಅವನು ಈ ಲೋಕದಲ್ಲಿರುವ ಅನಿಷ್ಟಗಳಿಗೆ ಕಾರಣನಲ್ಲ. ಆ ದೇವರನ್ನು ನಂಬಿದವರಿಗೆ 'ದೇವರೇ ಹೀಗೇಕೇ ಮಾಡಿದೆ? ನಿನಗೆ ಕಣ್ಣಿಲ್ಲವೆ? ತಿಳಿವಿಲ್ಲವೆ? ದಯೆ ಇಲ್ಲವೆ? ನ್ಯಾಯ ನೀತಿ ಇಲ್ಲವೆ? ಎಂದು ಕೇಳಲು ಕಾರಣವಿಲ್ಲ. ತಮ್ಮ ಪಾಪವನ್ನು ಅವನ ತಲೆಗೆ ಕಟ್ಟುವಂತಿಲ್ಲ. ಹಾಗೆಯೇ ತಮ್ಮ ದುಃಸ್ಥಿತಿಗೆ ವಿಧಿ ಕಾರಣವೆಂದು ಹೇಳುವಂತಿಲ್ಲ. ತಮ್ಮ ಬಂಧನಕ್ಕೆ ತಾವೇ ಕಾರಣರು. ನಮ್ಮ ಮುಕ್ತಿಗೂ ನಾವೇ ಕಾರಣರು ಎಂಬ ಸ್ವಧರ್ಮ ನೀತಿ ಜೈನರ ಧರ್ಮದ ನೀತಿ. ಈ ನಮ್ಮ ಪಾಪಪುಣ್ಯಗಳು ಕೇವಲ ಪಾಪವೂ ಅಲ್ಲ, ಕೇವಲ ಪುಣ್ಯವೂ ಅಲ್ಲ, ಅದು ಪುಣ್ಯವಾದ ಪಾಪ; ಪಾಪವಾದ ಪುಣ್ಯ. ಪುಣ್ಯಪಾಪಗಳ ಮಿಶ್ರಣವಿಲ್ಲದ ಪೂರ್ಣಸ್ಥಿತಿಯನ್ನು ಈ ಲೋಕದಲ್ಲಿರುವಾಗಲೇ ಸಾಧಿಸಬಹುದು. ಹಾಗೆ ಸಾಧಿಸಿದವರು ಕೇವಲಿಗಳಾಗುತ್ತಾರೆ.

ಇ) ಇತರ ಮತಗಳವರೂ ಅಹಿಂಸೆಯನ್ನು ಪರಮಧರ್ಮವೆಂದು ಒಪ್ಪುತ್ತಾರೆ. ಆದರೆ ಜೈನರು ಅಹಿಂಸೆಗೆ ಕೊಟ್ಟಿರುವ ಅರ್ಥ ತುಂಬ ವಿಶಾಲವಾದದ್ದು. ಕೊಲೆ, ಕಳ್ಳತನ, ವ್ಯಭಿಚಾರ, ದ್ರವ್ಯಸಂಗ್ರಹಣ–ಇವು ಮಾತ್ರವೇ ಹಿಂಸಾಕೃತ್ಯಗಳಲ್ಲ. ಈ ಲೋಕದಲ್ಲಿರುವ ಪ್ರತಿಯೊಂದು–ಅದು ಒಂದು ಕೇವಲ ಅಣುಜೀವಿಯಾಗಲಿ–ತನ್ನತನವನ್ನು ಪಡೆದಿದೆ. ಅದು ಕೂಡ ಒಂದಲ್ಲ ಒಂದು ಕಾಲದಲ್ಲಿ ಅನಂತಜ್ಞಾನ, ಅನಂತ ದರ್ಶನ, ಅನಂತ ಚಾರಿತ್ರಗಳನ್ನು ಪಡೆಯಬಲ್ಲ ಯೋಗ್ಯತೆಯನ್ನೂ ಪಡೆದಿದೆ ಎಂದು ಗೌರವಿಸದೆ, ಎಲ್ಲವೂ ತನಗಾಗಿ, ತನ್ನ ಕಾಮಕ್ಕಾಗಿ, ತನ್ನ ಲೋಭಕ್ಕಾಗಿ, ತನ್ನ ಭೋಗಕ್ಕಾಗಿ ಎಂದು ಭಾವಿಸುವುದು ಎಲ್ಲಕ್ಕಿಂತ ವ್ಯಾಪಕವಾದ ಅಹಿಂಸೆ. ಅದು ಉಳಿದೆಲ್ಲ ಅಹಿಂಸೆಗಳ ಬೀಜ. ಎಲ್ಲವನ್ನು ನಿನ್ನಂತೆ! ನಿನ್ನಲ್ಲಿ ನಿನ್ನ ಆತ್ಮವಿರುವಂತೆ, ಎಲ್ಲದರಲ್ಲೂ ಅದರದರ ಆತ್ಮವಿದೆ ಎಂಬ ತತ್ವದ ಅಂತರಾಳವನ್ನು ಮಹಾವೀರನು ತೆರೆದು ತೋರಿಸಿರುತ್ತಾನೆ. ಇವನದು ಆತ್ಮವೆಲ್ಲ ಒಂದೇ ಎಂಬ ಅದ್ವೈತವಲ್ಲ. ಒಂದೊಂದರಲ್ಲೂ ತನ್ನದೇ ಆದ ಅದ್ವಿತೀಯ ಆತ್ಮವಿದೆ ಎಂದು ಅವನ ಭಾವನೆ. ಯಾವ ಒಂದೂ ಇನ್ನೊಂದರ ಸ್ಥಾನದಲ್ಲಾಗಲಿ ನಿಲ್ಲಲಾರದು; ಪ್ರತಿನಿಧಿಯಾಗಿ ಕೂಡ ಇರಲಾರದು. ಇರುವುದು ಒಂದೇ ಆತ್ಮ ಎಂದರೆ ವಿಶ್ವಕ್ಕೆಲ್ಲ ಅಪಚಾರವಾಗುತ್ತದೆ. ಒಂದೊಂದರ ವ್ಯಕ್ತಿತ್ವವನ್ನು ಕಡೆಗಣಿಸಿದಂತಾಗುತ್ತದೆ. ಏಕತತ್ತ್ವತ್ವ ಹಿಂಸೆಯ ಪರಮಾವಧಿ ಎಂಬುದು ಜೈನರ ಭಾವನೆ.

ಈ) ಅದು ಇತರ ಜೀವಿಗಳನ್ನೇ ಅಲ್ಲ. ತನ್ನದಲ್ಲದ ಇತರ ಮತಗಳನ್ನು ಅಸೂಯೆಯಿಂದ ಭಾವಿಸುವ ದೃಷ್ಟಿಯೂ ಹಿಂಸಾದೃಷ್ಟಿ, ಒಂದೊಂದು ಮತದವರೂ ತಾವು ನೋಡಿದ್ದೇ ಪರಮಸತ್ಯವಾಗಿ ತಿಳಿಯುತ್ತಾರೆ. ಇಂಥವರನ್ನು ಆನೆಯನ್ನು ಮುಟ್ಟಿ ಏಳು ಅಪೂರ್ಣರೂಪಗಳಾಗಿ ಚಿತ್ರಿಸಿಕೊಂಡ ಏಳು ಕುರುಡರಿಗೆ ಜೈನಗ್ರಂಥಗಳಲ್ಲಿ ಹೋಲಿಸುವುದುಂಟು. ಒಂದೊಂದು ದರ್ಶನವೂ ವಿಶ್ವವನ್ನು ಒಂದು ನಿಟ್ಟನಿಂದ ನೋಡುತ್ತದೆ. ಆ

ನಿಟ್ಟನಿಂದ ನೋಡಿ ಕಂಡದ್ದು ಕಂಡಷ್ಟುಮಟ್ಟಿಗೆ ಸತ್ಯ. ಆದ್ದರಿಂದ ಯಾವ ದರ್ಶನವನ್ನೇ ಆಗಲಿ ಅದು ಅಸತ್ಯವೆಂದು ಹೇಳಿದರೆ ಆ ದರ್ಶನವನ್ನು ದೂಷಿದಂತಾಗುತ್ತದೆ. ಆ ದರ್ಶನದವರನ್ನು ಹಿಂಸಿಸಿದಂತಾಗುತ್ತದೆ. ಆದ್ದರಿಂದ ಅಹಿಂಸಾಮಾರ್ಗವನ್ನು ಬಿಟ್ಟು ತಾವು ಎಲ್ಲ ಮತಗಳ ಸತ್ಯವನ್ನೂ ಒಪ್ಪಿಕೊಂಡು ತತ್ತ್ವವಿಚಾರದಲ್ಲಿ ಶಾಂತಿಶೀಲವನ್ನು ಅನುಸರಿಸುತ್ತೇವೆಂದು ಜೈನರು ಭಾವಿಸುತ್ತಾರೆ. ಒಂದೊಂದು ದರ್ಶನವನ್ನೂ ಸತ್ಯವನ್ನೂ ಮುಟ್ಟಿಸುವ ಒಂದೊಂದು ಮೆಟ್ಟಲಾಗಿ ಭಾವಿಸಿ, ಅವುಗಳನ್ನೆಲ್ಲ ಒಳಗೊಂಡ ಸತ್ಯವನ್ನು ಏಳು ಮೆಟ್ಟಲಿನ ಏಣಿಯಾಗಿ ಏರ್ಪಡಿಸಿಕೊಂಡಿರುತ್ತಾರೆ. ಇದೇ ಅವರ ಸಪ್ತಭಂಗಿ. ಸ್ವಮತದಲ್ಲಿ ಪಕ್ಷಪಾತ ಬಿಟ್ಟು, ಪರಮತದ ಅಸೂಯೆಯನ್ನು ಬಿಟ್ಟು, ಒಂದೊಂದು ಮತದ ವೈಶಿಷ್ಟ್ಯವನ್ನು ಮೆಚ್ಚಿ ಆನಂದಪಡುವುದು (ಆತ್ಮಾರಾಮ) ಮನೋಗುಪ್ತಿ. ಈ ಆತ್ಮಾರಾಮದ ಶೀಲ ರಮ್ಯವಾದದ್ದು. ಆದರೆ ಈಗ ಅದು ಜೈನರಲ್ಲಿ ತುಂಬ ಲುಪ್ತವಾಗಿದೆ.

(ಏಪ್ರಿಲ್ ೧೦ನೆಯ ತಾರೀಖು ಒದಗಲಿರುವ ಮಹಾವೀರ ಜಯಂತಿಯ ಸ್ಮರಣಾರ್ಥ)

* * *

ಎಲ್ಲ ಹಿರಿ-ಕಿರಿ ವ್ಯಕ್ತಿಗಳ ಜೀವನದಲ್ಲಿ ಅವರ ಜೀವನ ಪಥವನ್ನೇ ಆಮೂಲಾಗ್ರ ಬದಲಾಯಿಸುವ ಬಿಂದುವೊಂದಿದೆ. ಈ ಪ್ರಸಂಗ ಒಂದು ವಿಶಿಷ್ಟ ಘಟನೆಯೆಂದು ಕಾಣಿಸಿದರೂ, ಅದು ದೀರ್ಘ ಘಟನಾವಳಿಗಳ ಒತ್ತಡದ ಉಚ್ಚ ಬಿಂದುವಾಗಿರುತ್ತದೆ. ಈ ಬಿಂದುವನ್ನು ಮುಟ್ಟಿದಾಗ, ಜೀವನ ಪ್ರವಾಹವು ಪೂರ್ತಿಯಾಗಿ ಹೊಸ ಹಾದಿ ಹಿಡಿಯುತ್ತದೆ. ಜೀವನದ ಬಗ್ಗೆ ದೃಷ್ಟಿಯೇ ಬದಲಾಗಿ ಪರಿಣಾಮತಃ ಪೂರ್ತಿ ಬದಲಾದ ವ್ಯಕ್ತಿ ಕಾಣಿಸುತ್ತಾನೆ.

* * *

ವಿಕಾರಗಳ ಬೇತಾಳ ರಾಗವು ನಿಲ್ಲದೆ ಧ್ಯೇಯ ಗೀತೆಯು ಕೇಳುವುದೆಂತು? ಮೇಲಿರುವ ಕಲ್ಲು ಬಂಡೆಯನ್ನು ತೆಗೆಯದೆ ಒಳಗೆ ಅಡಗಿದ ನಿರ್ಮಲ ಝರಿಯು ತೋರುವುದೆಂತು? ಅದರಂತೆ, ಅಹಂಕಾರ, ಆಸಕ್ತಿ, ರಾಗ–ದ್ವೇಷಗಳ ಮಹಾ ಶಿಲೆಯನ್ನು ಒಡೆಯದೆ ಹೃದಯದಲ್ಲಿನ ಭಾವಗಂಗೆಯ ನಿರ್ಝರ ಗೀತೆಯು ಕೇಳುವುದೆಂತು?

ಆನು ಒಲಿದಂತೆ ಹಾಡುವೆ—೬

ಜಗದ್ಗುರು ಮಾತೆ ಮಹಾದೇವಿ

ಸಾಕ್ಷಾತ್ಕಾರದ ಬಗೆ

೨೩. ಬಯಲ ರೂಪಮಾಡಬಲ್ಲಾತನೆ ಶರಣನು
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ
ಬಯಲು ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ ?
ಆ ರೂಪ ಬಯಲ ಮಾಡದಿದ್ದರೆ ಎಂತು ಲಿಂಗಾನುಭಾವಿ ಎಂಬೆ ?
ಈ ಉಭಯ ಒಂದಾದರೆ ನಿಮ್ಮಲ್ಲಿ ತೆರಹುಂಟೆ
ಕೂಡಲ ಸಂಗಮದೇವಾ ?

ವ್ಯಾಖ್ಯೆ : ಸಾಧನೆಯಲ್ಲಿ ಎರಡು ಹಂತ, ಸಗುಣ ಅಥವಾ ಖಂಡಿತ ಸಾಕ್ಷಾತ್ಕಾರ ಮತ್ತು ನಿರ್ಗುಣ ಅಥವಾ ಅಖಂಡ ಸಾಕ್ಷಾತ್ಕಾರ. ಪರಮಾತ್ಮನು ನಿರಾಕಾರ, ನಿರ್ಗುಣ, ಸರ್ವವ್ಯಾಪಕ, ಸರ್ವಶಕ್ತ ಪರಂಜ್ಯೋತಿ. ಅವನಿಗೆ ಸೃಷ್ಟಿ, ಸ್ಥಿತಿ, ಲಯ, ತಿರೋಧಾನಗಳೇ ಅಲ್ಲದೆ ಅನುಗ್ರಹಿಸುವ ಶಕ್ತಿಯುಂಟು. ಯಾವ ಆಕಾರದಲ್ಲಿ ? ಅವನಿಗಂತೂ ಆಕಾರವಿಲ್ಲ ; ಆದಿರುವುದು ಜನ್ಮಧಾರಿ ಮಾನವಶರೀರಕ್ಕೆ ಮಾತ್ರ. ಅವನು ಭಕ್ತನಿಗೆ ಬೇಕೆನಿಸಿದ ಆಕಾರದಲ್ಲಿ ತೋರಬಲ್ಲ. ನಿರಾಕಾರ ವಿದ್ಯುತ್ತು ಬಲ್ಬನ್ನು ಆಶ್ರಯಿಸಿ ಪ್ರಕಟವಾಗುವಂತೆ ನಿರಾಕಾರ ದೇವನು ನಾನು ಆರಾಧಿಸುವ ಒಂದು ಆಕಾರದಲ್ಲಿ ಕಾಣಿಸಿಕೊಳ್ಳಬಲ್ಲ. ನೀರಿಗೆ ಆಕಾರವಿಲ್ಲ. ಆಶ್ರಯಿಸಿದ ಪಾತ್ರೆಯ ಆಕಾರವನ್ನು ಅದು ತಾಳಬಲ್ಲುದು. ಹೀಗೆ ತಾನು ಆರಾಧಿಸುವ, ಧ್ಯಾನಿಸುವ ಒಂದು ಆಕಾರದಲ್ಲಿ ಖಂಡ ಸಾಕ್ಷಾತ್ಕಾರ ಅಥವಾ ಸಗುಣ ಸಾಕ್ಷಾತ್ಕಾರ ಪಡೆಯಬಲ್ಲವನೇ ಶರಣನು. ಇದಕ್ಕೆ ಉದಾಹರಣೆಯಾಗಿ ಎರಡು ವಚನಗಳನ್ನು ಕೊಡಬಹುದು :

ಹೊನ್ನ ಹಾವುಗೆಯ ಮೆಟ್ಟಿದವನ, ಮಿಡಿ ಮುಟ್ಟಿದ ಕೆಂಜೆಡೆಯವನ
ಮೈಯ್ಯಲ್ಲಿ ವಿಭೂತಿಯ ಧರಿಸಿದವನ, ಕರದಲ್ಲಿ ಕಪಾಲವ ಪಿಡಿದವನ
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ ;
ನಂಬಿಗೆ ಕುಂಟಣಿಯಾದವನ
ಚೋಳಂಗೆ ಹೊನ್ನ ಮಳೆಯ ಕರೆದವನ
ಎನ್ನ ಮನಕ್ಕೆ ಬಂದವನ ಸದ್ಭಕ್ತರ ಹೃದಯದಲ್ಲಿಪ್ಪವನ
ಮಾಡಿದ ಪೂಜೆಯಲೊಪ್ಪುವನ ಕೂಡಲ ಸಂಗಯ್ಯನೆಂಬವನ.

—(ಬ.ಷ.ವ ೫೦೧)

ಹೊಳೆವ ಕೆಂಜೆಡೆಗಳ ಮಣಿಮಕುಟದ ಒಪ್ಪವ
ಸುಲಿಪಲ್ಗಳ ನಗೆ ಮೊಗದ ಕಂಗಳ ಕಾಂತಿಯ
ಈರೇಳು ಭುವನವ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು
ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ
ಗಂಡ ಗಂಡರೆಲ್ಲರ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರೆಸಿ ಮಾತನಾಡುವ ಪರಮಗುರು
ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು— (ಅಕ್ಕಮಹಾದೇವಿ)

ಹೀಗೆ ಆಕಾರ ಉಳ್ಳ ಗುರುವಿನ ರೂಪದಲ್ಲಿ ದೇವನನ್ನು ಸಾಕ್ಷಾತ್ಕರಿಸಿಕೊಂಡುದೇ ಸಗುಣ ಸಾಕ್ಷಾತ್ಕಾರ. ಪಡೆದವನೆ ಶರಣ. ಕೇವಲ ಸಗುಣ ಸಾಕ್ಷಾತ್ಕಾರದಲ್ಲಿಯೇ ಉಳಿಯದೇ ಮುಂದಿನ ಹಂತಕ್ಕೆ ಅಂದರೆ ಅಖಂಡ, ನಿರ್ಗುಣ ಸಾಕ್ಷಾತ್ಕಾರಕ್ಕೆ ಸಾಗುವವನೇ ಲಿಂಗಾನುಭಾವಿ. ಅನಂತರ ತನ್ನಿಚ್ಛೆಯಂತೆ ಆಗಾಗ ಈ ಅನುಭವಗಳನ್ನು ಪಡೆಯಬಲ್ಲ. ಮತ್ತು ಆಗವನು ಪರಮಾತ್ಮನಲ್ಲಿ ತನ್ನ ಮನವನ್ನು ವಿಲೀನಗೊಳಿಸಿದ ಜೀವನ್ಮುಕ್ತನಾಗಿ ತೆರಹಿಲ್ಲದೆ ಇರುವನು.

ದಿವ್ಯಾನುಭೂತಿ

೨೪. ಎಲ್ಲರ ಗಂಡರು ಬೇಂಟೆಗೆ ಹೋದರು
ನೀನೇಕೆ ಹೋಗೆ, ಎಲೆ ಗಂಡನೇ ?
ಸತ್ತುದ ತಾರದಿರು, ಕೈಮುಟ್ಟಿ ಕೊಲ್ಲದಿರು
ಆಡಗಿಲ್ಲದೆ ಮನೆಗೆ ಬಾರದಿರು !
ದೇವರ ಧರ್ಮದೊಳೊಂದು ಬೇಂಟೆ ದೊರೆಕೊಂಡರೆ
ಕೂಡಲ ಸಂಗಮದೇವಂಗೆ ಅರ್ಪಿತವ ಮಾಡುವೆ, ಎಲೆ ಗಂಡನೇ !

ವ್ಯಾಖ್ಯೆ : ಪರಿಶುದ್ಧ ಸಸ್ಯಾಹಾರದ ಪ್ರತಿಪಾದಕರಾದ, ಶುದ್ಧ ಅಹಿಂಸಾವಾದಿಯಾದ ಬಸವಣ್ಣನವರು ಬೇಟೆಗೆ ಹೊರಡುವುದಾಗಲೀ, ಆಡಗನ್ನು ತರುವುದಾದಲೀ ಅಸಮರ್ಥನೀಯ, ಊಹಾತೀತ. ಇದೊಂದು ಬೆಡಗಿನ ವಚನ. ಸಂಪೂರ್ಣ ವಿಭಿನ್ನವಾದ ಅರ್ಥದಿಂದ ಕೂಡಿದ ಕಬ್ಬಿಣದ ಕಡಲೆ.

ಗಂಡನೆಂದು ಸಂಬೋಧಿಸಿರುವುದು ದೇವರಿಗಂತೂ ಅಲ್ಲವೇ ಅಲ್ಲ (ಬೇರೆ ವಚನಗಳಲ್ಲಿ ಸಾಮಾನ್ಯವಾಗಿ ಹೇಳುವಂತೆ). ಇಲ್ಲಿ 'ಗಂಡ'ನು ತಂದುದನ್ನು ದೇವರಿಗೆ ಅರ್ಪಿತ ಮಾಡಲು ಸಿದ್ಧನಾಗಿರುವ ಸಾಧಕ, ಸತಿ 'ಗಂಡ'ನಿಗೆ ಬೇಟೆಗೆ ಹೋಗಲು ಪ್ರಚೋದಿಸುತ್ತಿದ್ದಾಳೆ. ಒತ್ತಾಯಿಸುತ್ತಿದ್ದಾಳೆ, ಆಜ್ಞಾಪಿಸುತ್ತಲೂ ಇದ್ದಾಳೆ. ಮಾತ್ರವಲ್ಲ ಬೇಟೆಗೆ ಹೋದಾಗ ಯಾವ ಕ್ರಮಗಳನ್ನು ಅನುಸರಿಸಬೇಕೆಂದು ಮಾರ್ಗದರ್ಶನ ಸಹ ಮಾಡುತ್ತಿದ್ದಾಳೆ. ಹಾಗಾದರೆ ಹೆಂಡತಿಯಾರು ? ಗಂಡನಾರು ? ಬೇಟೆ ಯಾವುದು ? ಆಡಗು ಯಾವುದು ? ಅರ್ಪಿತವ ಮಾಡುವುದು ಯಾರಿಗೆ ? ಬೇಟೆಯ ವಿಧಾನವೇನು ? ಈ ಎಲ್ಲ

ಪ್ರಶ್ನೆಗಳಿಗೆ ಉತ್ತರಿಸಿದರೆ ಬಹುಶಃ ವಚನವು ಅಂಗೈನೆಲ್ಲಿಯಾಗದಿರದು.

ಹೆಂಡತಿ—ಸಾಧನೆಯಲ್ಲಿ ತಲ್ಲೀನನಾಗಿರುವ **ಅನುಭವಾನ್ವೇಷಿ.**

ಗಂಡ—ಬೇಟೆಯನ್ನು ತರಬೇಕಾಗಿರುವ ಮನಸ್ಸು.

ಬೇಟೆ—ದಿವ್ಯಾನುಭೂತಿಯನ್ನು ಗಳಿಸಿಕೊಡುವ ಸಾಧನವಾದ **ಧ್ಯಾನ ಅಥವಾ ಯೋಗ.**

ಅಡಗು=ಸಾಧನೆಯ ಪರಿಣಾಮವಾಗಿ ದೊರೆಯುವ ದಿವ್ಯವಾದ ಅನುಭೂತಿ (Mystic experience)

ಅರ್ಪಿತ ಮಾಡಿಸಿಕೊಳ್ಳುವವನು=ಪರಮಾತ್ಮ.

ಬೇಟೆಯ ವಿಧಾನ=ಶಿವಯೋಗ (ವಿವರಗಳು ಮುಂದೆ)

"ಎಲ್ಲೆ ಮನಸ್ಸೇ ಅನೇಕ ಜನ ಸಾಧಕರು, ಮುಮುಕ್ಷುಗಳು ಧ್ಯಾನ-ಏಕಾಗ್ರತೆಗಳ ಬೇಟೆಯನ್ನು ಕೈಗೊಂಡರು. ನೀನೇಕೆ ಅದಕ್ಕೆ ಯತ್ನಿಸುತ್ತಿಲ್ಲ. ಅಂತರಂಗದ ಅರಣ್ಯವ ಹೊಕ್ಕು ದಿವ್ಯಾನುಭೂತಿ ಎಂಬ ಅಡಗನ್ನು ತಾ. ಆದರೆ ಸತ್ತುದನ್ನು ಅರ್ಥಾತ್ ಇಂದ್ರಿಯ ನಿಷ್ಕ್ರಿಯತ್ವ ತರಬೇಡ; ನೀನಾಗಿ ಕೊಲ್ಲಲೂ ಬೇಡ; ಅಂದರೆ ಇಂದ್ರಿಯ ದಮನ (Suppression) ಸಹ ಮಾಡಬೇಡ. ಆದರೆ ದಿವ್ಯಾನುಭವದ ಅಡಗು ಮಾತ್ರ ತಾ. ಹೀಗೆ ಪರಮಾತ್ಮನ ಆಧ್ಯಾತ್ಮದ ಪಥದೊಳಗೆ ಒಂದು ವಿಶೇಷ ಅನುಭೂತಿ ಎಂಬ ಆಹಾರ (ಬೇಂಟೆ) ದೊರೆತರೆ, ತ್ರಿಪುಟಿಯಳಿದ ಸ್ಥಿತಿಯಿಂದ ಆ ಅನುಭವವನ್ನೂ ಶಿವಾರ್ಪಿತ ಮಾಡಿ, ನಾನು ನಿರ್ವಿಕಾರವಾಗಿಯೇ ಉಳಿಯುವೆ."

ಹೀಗೆ ಒಂದು ಸರಳಾರ್ಥ ಬರೆದ ಬಳಿಕ, "ಸತ್ತುದ ತಾರದಿರು ಕೈಮುಟ್ಟಿ ಕೊಲ್ಲದಿರು" ಎಂಬ ಹೇಳಿಕೆಯನ್ನು, "ದೇವಂಗೆ ಅರ್ಪಿತ ಮಾಡುವೆ" ಎಂಬುದನ್ನೂ ಸ್ವಲ್ಪ ವಿವರಿಸುವೆ.

ಪ್ರತಿಯೊಂದು ಸಿದ್ಧಾಂತ, ಸಾಧನೆಗಳ ಗುರಿಯೂ ವಿಶೇಷಾನುಭವ. ಇದನ್ನು ಪಡೆವ ಮಾರ್ಗ ಅನೇಕ; ಬಸವಣ್ಣನವರು ಸಾಗಿದ, ನೀಡಿದ ದಾರಿ ಶಿವಯೋಗ. ಈ ಯೋಗದ ಪ್ರಕಾರ ಸತ್ತುದನ್ನು ತರುವಂತಿಲ್ಲ, ಕೈಮುಟ್ಟಿ ಕೊಲ್ಲುವಂತಿಲ್ಲ. ಇಂದ್ರಿಯಗಳ ನಿಶ್ಶಕ್ತಿ, ನಿರ್ವೀರ್ಯತ್ವವನ್ನವರು ಪ್ರತಿಪಾದಿಸರು. "ಮನಸ್ಸು ಅನ್ನುವದೊಂದು ಉರಿವ ದೀಪ, ಎಣ್ಣೆ-ಬತ್ತಿ ಚಾಚುವ ತನಕ ಉರಿದೇ ಉರಿಯಬೇಕು. ಆದ್ದರಿಂದ ಅದಕ್ಕೆ ಬೇಕಾದ ಆಹಾರ ಕೊಡದಿದ್ದರೆ ತಾನೇ ಆರುವುದು. ಆದ್ದರಿಂದ ಇಂದ್ರಿಯಗಳಿಗೆ ಕೊಡುವ ಆಹಾರ ನಿಂತಾಗ ಅವು ನಿಸ್ಸತ್ವಗೊಳ್ಳುವುವು, ಸತ್ತಂತಾಗುವುವು. ಇಂಥ ನಿಶ್ಶಕ್ತಿ ಧ್ಯಾನದ ಗುರಿಯಲ್ಲ. ಅಥವಾ ಹುಚ್ಚುಕುದುರೆಗಳಂತೆ ಕುಣಿಯುವ ಇಂದ್ರಿಯಗಳ ಒತ್ತಾಯದ ದಮನವೂ ಸರಿಯಲ್ಲ. ಇಂದ್ರಿಯಗಳು ಪಟುಗೊಳ್ಳಬೇಕು ಮತ್ತು ಅವು ದೈವೀಜ್ಞಾನದಲ್ಲಿ ವರ್ಧಿಸಿದ ಉತ್ಸಾಹದಿಂದ ಮುಂದುವರಿಯಬೇಕು. ಉಪವಾಸ-ವನವಾಸಗಳಿಂದ ನಿಶ್ಶಕ್ತಗೊಂಡು ಕೈ ಕೆಲಸಮಾಡದಿರಬಾರದು; ಅದು ಸ್ವಾಭಾವಿಕವಾಗಿ ದೈವೀಸಂಬಂಧ

ಕ್ರಿಯೆಗಳನ್ನು ಮಾಡಬೇಕು. ಕಣ್ಣು ಕಾಣದಂತಾಗುವುದು ವೈರಾಗ್ಯವಲ್ಲ; ಅದು ಸ್ವಾಭಾವಿಕವಾಗಿ ಒಳ್ಳೆಯದನ್ನೇ ನೋಡುವಂತಾಗುವುದು ಸಹಜ ವೈರಾಗ್ಯ. ಹೀಗೆ ಇಂದ್ರಿಯಗಳೆಲ್ಲ ಸಾತ್ವಿಕ ಪಥದಲ್ಲಿ ಸಹಜವಾಗಿ ತಲ್ಲೀನವಾದಾಗ ದಮನಗೊಳ್ಳವು, ಉದಾತ್ತೀಕರಣಗೊಳ್ಳುವವು.

ಪರಿಣಾಮವಾಗಿ ಮನಸ್ಸು ದಿವ್ಯಾನುಭೂತಿಯ ಬೇಂಟೆಯನ್ನು ಪಡೆದು ಸಾಧಕ ಸತಿಯ ಕೈಗೆ ಒಪ್ಪಿಸಿದಾಗ, ಆಕೆ ಅದನ್ನೂ ಶಿವಾರ್ಪಿತ ಮಾಡಿ, ನಿರ್ಲಿಪ್ತಳಾಗಿ ಉಳಿವಳು. ಇದು ತ್ರಿಪುಟಿಯಳಿದ ಸ್ಥಿತಿ. ಜ್ಞಾನ, ಜ್ಞಾತೃ, ಜ್ಞೇಯ, ಧ್ಯಾನ, ಧ್ಯಾತೃ, ಧ್ಯೇಯ ಎಂಬ ಭಾವ ಅಳಿಯುವುದು. "ನಾನು ದಿವ್ಯಾನುಭವವನ್ನು ಹೊಂದುತ್ತಿದ್ದೇನೆ" ಎಂಬ ಪ್ರಜ್ಞೆ ಸಹ ಅಳಿಯುವುದು, ಅನುಭವದ ಉರಿಯಲ್ಲಿ ಅಹಂನ ಕರ್ಪೂರ ಕರಗಿಬಿಡುವುದು. ಅನುಭವಿಸುವ ಆತ್ಮನೇ ಅನುಭವಿಸಲ್ಪಟ್ಟಾಗ ಹೇಳಲು ಕೇಳಲು ಅಲ್ಲಿ ಇಂಬಿಲ್ಲ.

> ಅರಿವನ್ನಕ್ಕರ ಅರ್ಚಿಸದೆ, ಅರಿವನ್ನಕ್ಕರ ಪೂಜಿಸಿದೆ
> ಅರಿವನ್ನಕ್ಕರ ಹಾಡಿ ಹೊಗಳಿದೆ
> ಅರಿವುಗೆಟ್ಟು ಮರವು ನಷ್ಟವಾಗಿ
> ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ
> ಕೂಡಲ ಸಂಗಯ್ಯನಲ್ಲಿ ಸರ್ವ ನಿವಾಸಿಯಾಗಿರ್ದೆನು

ಛಲವಂತ ಶರಣ

> ೨೫. ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
> ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
> ಛಲ ಬೇಕು ಶರಣಂಗೆ ಪರದೈವನೊಲ್ಲೆನೆಂಬ
> ಛಲ ಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ
> ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ
> ಛಲವಿಲ್ಲದವರ ಮೆಚ್ಚ ನಮ್ಮ ಕೂಡಲ ಸಂಗಮದೇವ !

ಜೀವನವು ಆದರ್ಶಜೀವನ, ದೈವೀಜೀವನ ಎನಿಸಿಕೊಳ್ಳಬೇಕಾದರೆ ಅದರಲ್ಲಿ ಕೆಲವಾರು ಛಲಗಳಿರಬೇಕು. ಕಡು ಬಡತನವೇ ಬರಲಿ, ಅಂಬಲಿಯನ್ನೀಂಟುವ ದುರ್ದೆಸೆಯೇ ಬರಲಿ ತನ್ನದಲ್ಲದ ಸೊತ್ತು ಹೇಯ, ಮುಟ್ಟಲಾರೆ ಎಂಬ ಛಲವಿರಬೇಕು ಶರಣನಿಗೆ. ಅಪ್ಸರೆಯೇ ಬಂದು ಒಯ್ಯಾರದಿಂದ ಉಲಿದರೂ ಪರಸತಿಯ ಒಲ್ಲೆನೆಂಬ ದೃಢತೆ ಬೇಕು. ಗೃಹಸ್ಥ ಜೀವನದ ಮುಖ್ಯಾಂಗವಾದ ನೀತಿವಂತಿಕೆಯೂ ಸಂಯಮದ ಮತ್ತೊಂದು ಮುಖ. ತನಗೇ ಆಸೆಯಾಗುವ ಪರಿಸರ ಒದಗಿರಬಹುದು ಅಥವಾ ಯಾರಾದರೂ ಆಮಿಷವನ್ನಾಗಿ ಪರಧನ-ಪರಸತಿಯರನ್ನು ಒಡ್ಡಿರಬಹುದು. ಉಭಯ ಪ್ರಸಂಗಗಳಲ್ಲೂ ಸೋಲದೆ ಇರಬೇಕು. ಇದಕ್ಕಿಂತಲೂ ವಿಚಿತ್ರ ಪರದೈವದ ಆಮಿಷ. ತನ್ನ ಮೇಲಧಿಕಾರಿಯ ಮನ

ಒಲಿಸಲು ಅವನು ಆರಾಧಿಸುವ ದೈವಕ್ಕೆ ತಲೆ ಬಾಗುವ ಪ್ರಸಂಗ ಬರಬಹುದು; ಬಹು ಜನರ ಪ್ರೇಮವನ್ನು ಗಳಿಸಿಕೊಳ್ಳಲು ಅವರ ದೈವಕ್ಕೆ ಎರಗುವ ಪ್ರಸಂಗ ಬರಬಹುದು. ಅಥವಾ ತನ್ನ ಮನೆಯಲ್ಲಿ ಹೆಂಡತಿ–ಮಕ್ಕಳಿಗೆ ಕಾಯಿಲೆ ಕಸಾಯಿಲೆಯಾದಾಗ, ಭಯಕ್ಕೆ ಬಲಿಯಾಗಿ ಕ್ಷುದ್ರ ದೈವಕ್ಕೆ ತಲೆಬಾಗುವ ವಿಷಮ ಪರಿಸ್ಥಿತಿ ಒದಗಬಹುದು. ಈ ಯಾವುದೇ ಪ್ರಸಂಗಗಳಲ್ಲಿಯೂ ಸೋತು ಅನ್ಯದೈವಕ್ಕೆ ಶರಣಾಗಲಾಗದು. ಇಲ್ಲಿ ಪರದೈವ ಎಂಬುದರ ಬದಲಿಗೆ ಅನ್ಯಧರ್ಮ ಅನ್ಯಸಂಸ್ಕೃತಿ ಎಂದೂ ಅರ್ಥೈಸಬಹುದು. ಪ್ರಲೋಭನೆ, ರಾಜಕೀಯ ಒತ್ತಡ ಮುಂತಾದವಕ್ಕೆ ಈಡಾಗಿ ಸ್ವಧರ್ಮ ತೊರೆದು ಪರಧರ್ಮಕ್ಕೆ ಶರಣಾಗತ ತಾನಾಗೆ ಎಂಬ ಛಲ ಶರಣಂಗೆ ಬೇಕು.

ಪರಮಾತ್ಮನು ನಿರಾಕಾರ. ಅನುಗ್ರಹಿಸಲು ಅವನು ಗುರು ಮತ್ತು ಜಂಗಮ ರೂಪದಲ್ಲಿ ಬರುವನಾದ ಕಾರಣ ಲಿಂಗ–ಜಂಗಮ ಒಂದೇ ಎಂಬ ನಂಬುಗೆ ಬೇಕು. ಇನ್ನೊಂದು ಅರ್ಥದಲ್ಲಿ ನಿರಾಕಾರ ದೇವನ ಸಾಕಾರ ಮುಖ ಸಮಾಜವಾದ ಕಾರಣ, ಸಮಾಜ ಸೇವೆ ಲಿಂಗದೇವನಿಗೆ ಮಾಡುವ ಪೂಜೆ ಎಂಬ ಭಾವ ಬಲಿಯಬೇಕು. ಶರಣನಿಗೆ ಛಲ ಬೇಕು ಪ್ರಸಾದ ದಿಟವೆಂಬುದರಲ್ಲಿ. ಪ್ರಸಾದ (Grace) ಅರ್ಥಾತ್ ದೈವೀಕಾರುಣ್ಯವು ಪರಮ ಸತ್ಯ. ಆದರಿಂದ ಕೊರಡು ಕೊನರುವುದು, ಬರಡು ಹಯನಾಗುವುದು, ವಿಷವು ಅಮೃತ ವಾಗುವುದು. ಈ ತಿಳುವಳಿಕೆಯಲ್ಲಿ ಪೂರ್ಣಶ್ರದ್ಧೆ ಬೇಕು. ಯಾರಾದರೂ ನಾಸ್ತಿಕ ವಾಡುತ್ತಿದ್ದಂತೆಯೇ ಕದ್ದು ಮುಚ್ಚಿ ಧರ್ಮಾಚರಣೆ ಮಾಡುವವನು ಹೇಡಿ. ಅಥವಾ "ನಿಮ್ಮ ದೇವರ ನಂಬುಗೆಗೆ ಏನು ಅರ್ಥವಿದೇರಿ? ನಿಮಗೆ ಏಕೆ ಹೀಗೆ ಕಷ್ಟ ಬಂದಿದೆ ಹೇಳಿರಿ?" ಎಂದು ಮುಂತಾಗಿ ಕೇಳುತ್ತಿದ್ದಂತೆಯೇ ದೈವೀಕಾರುಣ್ಯದಲ್ಲಿ ನಂಬುಗೆ ಕಳೆದು ಕೊಳ್ಳುವವ ಶರಣನಲ್ಲ. ಪರಮಾತ್ಮನ ಪ್ರತಿರೂಪರಾದ ಸ್ವಯಂಜ್ಞಾನಿಗಳಾದ ಗುರು, ಜಂಗಮ ಮುಂತಾದ ಮಹಾಂತರ ಪ್ರಸಾದವು ಬಾಳಿನಲ್ಲಿ ಅದ್ಭುತ ಪಲ್ಲಟ, ಪರಿವರ್ತನೆ ಗಳನ್ನು ತರಬಲ್ಲುದು ಎಂಬುದರಲ್ಲಿ ವಿಶ್ವಾಸ ಬೇಕು. ಯಾವುದರಲ್ಲಿಯೂ ಛಲವಿಲ್ಲದೆ ಸಮಯಸಾಧಕನಾಗಿ, ಅಂಜುಕುಳಿಯಾಗಿ, ನಡೆವ ಹೆಣ ನುಡಿವ ಹೆಣವಾಗಿ ಬಾಳುವವನು ಶರಣನೇ ಅಲ್ಲ, ಸಜವಾದ ದೇವಭಕ್ತನೂ ಅಲ್ಲ. ತತ್ತ್ವನಿಷ್ಠ ಶರಣಾಗತನು ಮಾತ್ರವೇ ನಿಜ ಶರಣನು.

(ಸಶೇಷ)

※ ※ ※

ಸತ್ಯವೆಂಬ ಬೂಟಿನ ಲೇಸ್ ಕಟ್ಟಿ ಮುಗಿಯುವುದರೊಳಗೆ ಅಸತ್ಯವು ಪೃಥ್ವಿಗೆ ಮೂರು ಪ್ರದಕ್ಷಿಣೆ ಹಾಕಿಬಂದಿರುತ್ತದೆ.

—ಡ್ಯಾನಿಕೆ

ಪ್ರತ್ಯಕ್ಷ ಸೂರ್ಯನ ಬಿಸಿಲಿನಲ್ಲಿ ನಡೆಯಬಹುದು. ಆದರೆ ಅದರಿಂದ ಕಾದ ಮರಳಿನ ಮೇಲೆ ನಡೆಯಲು ಸಾಧ್ಯವಿಲ್ಲ.

—ಸುಭಾಷಿತ

ದೃಷ್ಟಾಂತ ಕಥೆ

ಮಮತೆಯ ಮಕ್ಕಳೇ,

ಕಲ್ಯಾಣ ಪಟ್ಟಣದಲ್ಲಿ ಬಸವಣ್ಣನವರು ಅನುಭವಮಂಟಪ ಕಟ್ಟಿ ಧರ್ಮಜಾಗೃತಿ ಯಲ್ಲಿ ತಲ್ಲೀನರಾಗಿದ್ದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಬ್ಬಿರುವ ಈ ನಾಡಿನಾದ್ಯಂತದಿಂದ ಶರಣಸಾಧಕರು ಸಮಾವೇಶವಾಗಿದ್ದರು. ಪ್ರಧಾನಮಂತ್ರಿಯಾಗಿದ್ದ ಬಸವಣ್ಣನವರು ಹಾಕಿದ ಮಹಾನ್ ಯೋಜನೆಗಳಿಂದಾಗಿ ಕಲ್ಯಾಣ ರಾಜ್ಯ ಶ್ರೀಮಂತ ಮತ್ತು ಸಮೃದ್ಧವಾಗಿತ್ತು. ಭೂಮಿಯ ಫಲವತ್ತತೆಯ ದೃಷ್ಟಿಯಿಂದ ಅಷ್ಟೇನೂ ಸಮೃದ್ಧವಾಗಿರದ ಆ ನಾಡಿನಲ್ಲಿ ಸಮೃದ್ಧಿ, ಸಂತೃಪ್ತಿ ತುಂಬಿ ತುಳುಕುತ್ತಿತ್ತು. ಪಕ್ಕದ ನಾಡು ತುಂಬಾ ಫಲವತ್ತಾದ ಭೂಮಿಯಾಗಿದ್ದರೂ ಆರ್ಥಿಕ ವಿಪ್ಲವವಾಗಿತ್ತು. ಹೀಗಾಗಿ ಅಲ್ಲಿಯ ರಾಜನಿಗೆ ಪರಿಹರಿಸಲಾಗದ ಚಿಂತೆ ಇತ್ತು. ಅವನು ತನ್ನ ಮಂತ್ರಿಯನ್ನು ಕರೆದು ಕೇಳಿದ, "ಇದೇನು ಮಹಾಮಂತ್ರಿಗಳೇ, ಕಲ್ಯಾಣನಾಡಿನಲ್ಲಿ ಭೂಮಿ ಫಲವತ್ತಾಗಿಲ್ಲ ದಿದ್ದರೂ ಅತ್ಯಂತ ಶ್ರೀಮಂತವಾಗಿದೆ. ನಮ್ಮಲ್ಲಿ ಭೂಮಿ ಫಲವತ್ತಾಗಿದ್ದರೂ ಅಂಥ ಸಂಪತ್ತನ್ನು ಪಡೆಯಲಾಗುತ್ತಿಲ್ಲ. ಕಾರಣವೇನು?"

ಮಂತ್ರಿ ಚಿಂತಾಕ್ರಾಂತನಾಗಿ ನುಡಿದ. "ಮಹಾಪ್ರಭು, ಬಿಜ್ಜಳಭೂಪಾಲರ ಪ್ರಧಾನ ಮಂತ್ರಿಗಳಾದ ಬಸವಣ್ಣನವರು ಅಸಾದೃಶ್ಯ ಪವಾಡಪುರುಷರು. ಅವರ ಬಳಿ ಮಂತ್ರದ ದಂಡವಿದೆ. ಆ ದಂಡದ ಬಲದಿಂದಲೇ ರಾಜ್ಯದ ಬೊಕ್ಕಸದ ಆದಾಯ ಹೆಚ್ಚಿಸಿದ್ದಾರೆ, ಅವರ ಅನುಯಾಯಿಗಳು ಸಂತೃಪ್ತ, ಸಮೃದ್ಧ ಜೀವನ ನಡೆಸುತ್ತಾರೆ ಎಂದು ಜನರ ಬಾಯಿಂದ ಕೇಳಿದ್ದೇನೆ. ನಾವೂ ಅಂಥದೊಂದು ರಹಸ್ಯವಿದ್ಯೆ ಪಡೆದರೆ, ಮಂತ್ರದಂಡ ಪಡೆದರೆ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡು ಸಮೃದ್ಧ ಸಮಾಜ ಕಟ್ಟಬಹುದು...."

ರಾಜನು ಆಲೋಚನಾಮಗ್ನನಾಗಿ ನಂತರ ಹೇಳಿದ. "ಮಂತ್ರಿಗಳೇ ಒಂದು ಉಪಾಯ ಮಾಡೋಣ. ನಾವಿಬ್ಬರೂ ಮಾರುವೇಷದಿಂದ ಅವರ ರಾಜಧಾನಿಯನ್ನು ಪ್ರವೇಶಿಸಿ, ಜನರಿಂದ ರಹಸ್ಯ ಸಂಗ್ರಹಿಸೋಣ. ಅವರ ಮಂತ್ರದ ಕೋಲು ಸಿಗುವಂತೇನಾದರೂ ಇದ್ದರೆ ಅದನ್ನೇ ತರುವಾ. ಇಲ್ಲದಿದ್ದರೆ ಅವರ ಅನುಯಾಯಿಗಳಂತೆ ವೇಷಧರಿಸಿ ಆ ವಿದ್ಯೆ ಯನ್ನು ಕಲಿತುಬಂದು ನಮ್ಮ ರಾಜ್ಯದಲ್ಲೂ ಪ್ರಯತ್ನಿಸೋಣ." ಮಂತ್ರಿ ಒಪ್ಪಿದ.

ರಾಜ್ಯದ ಕಾರ್ಯಕಲಾಪಗಳನ್ನು ಹೆಂಡತಿಗೆ ಮತ್ತು ಮಂತ್ರಿಗಳ ಸಂಪುಟಕ್ಕೆ ವಹಿಸಿ ಕೊಟ್ಟರು. ರಾಜ ಮತ್ತು ಅಮಾತ್ಯರು ಪ್ರಯಾಣಗೊಂಡರು. ಕಲ್ಯಾಣ ರಾಜ್ಯದಲ್ಲಿ ಕಾಲಿಡುತ್ತಲೇ ಹಸಿರಾದ ಧರಿತ್ರಿ, ಜ್ಞಾನ ತುಂಬಿದ ಮುಖಗಳು, ಸಂತೃಪ್ತ ಜೀವನದ ಕಣ್ಣುಗಳನ್ನು ಕಂಡು ಆನಂದ, ಆಶ್ಚರ್ಯಗಳ ಜೊತೆಗೆ ಮತ್ಸರ ಸಹ ಪಡುತ್ತಾ ಮುಂದೆ ಸಾಗಿ ಕಲ್ಯಾಣಪುರದ ಸನಿಹಕ್ಕೆ ಬಂದರು.

ನಗರದ ಹೊರವಲಯದಲ್ಲಿ ಒಂದು ಹೊಲದಲ್ಲಿ ಉಳುಮೆ ಮಾಡುತ್ತಿದ್ದ ಒಕ್ಕಲಿಗ ಮುದ್ದಣ್ಣ. ಆರೋಗ್ಯಕರವಾದ ದಷ್ಟ ಪುಷ್ಟ ಎತ್ತುಗಳನ್ನು ಹೂಡಿಕೊಂಡು ಗೆಯ್ಮೆ ಮಾಡುತ್ತ, ಅತ್ಯಂತ ಸಂತೋಷದಿಂದ ಮಂತ್ರಜಪ ಮಾಡುತ್ತ ಕಾರ್ಯಮಗ್ನನಾಗಿದ್ದ. ಆಗಂತುಕ ಅತಿಥಿಗಳನ್ನು ಕಾಣುತ್ತಲೇ, ಮುಗುಳ್ನಕ್ಕು ಶರಣು ಸಲ್ಲಿಸಿ ನನ್ನಿಂದೇನಾದರೂ ಸಹಾಯ ಬೇಕೆ? ಎಂದ—ತಕ್ಷಣ ಆಗಂತುಕರು, "ಅಯ್ಯಾ, ನಿಮ್ಮ ಬದುಕು ಎಷ್ಟೊಂದು ಸಂತೃಪ್ತವಾಗಿದೆಯಲ್ಲಾ. ರಾಜ್ಯವೂ ಸಂಪದ್ಭರಿತವಾಗಿದೆ. ಈ ಸಂವೃದ್ಧಿ ಮತ್ತು ಸಂತೃಪ್ತಿಯ ರಹಸ್ಯವೇನು ?"

"ಶರಣ ಬಂಧುಗಳೇ ಈಗ ಕ್ಷಮಿಸಿ. ಆ ರಹಸ್ಯ ಬೇಕೆಂದಿದ್ದರೆ ನನ್ನ ಮನೆಗೆ ರಾತ್ರಿ ವೇಳೆ ಬನ್ನಿ...." ಎಂದು ವಿಳಾಸ ನೀಡಿದ. ಪ್ರವಾಸಿಕರು ಮುಂದೆ ಸಾಗಿದರು. ಈಗ ಎದುರಾದ ಮಡಿವಾಳ ಮಾಚಯ್ಯನೆಂಬ ನಿಜಶರಣನು. ಒಂದು ಸುಂದರವಾದ ಕೆರೆಯ ಬಳಿ ಬಟ್ಟೆಗಳನ್ನು ತೊಳೆಯುತ್ತ, ಮಂತ್ರಧ್ಯಾನ ಮಾಡುತ್ತ ಆನಂದಿತನಾಗಿದ್ದ. ಅವನನ್ನು ಸಮೀಪಿಸಿ ಕೇಳಿದರು. "ಮಹಾನುಭಾವ ಈ ನಾಡು ಎಷ್ಟು ಸಮೃದ್ಧವಾಗಿದೆ. ನೀವೆಷ್ಟು ಸುಖಿಗಳಾಗಿದ್ದೀರಿ. ಇದರ ರಹಸ್ಯವೇನು...."

"ಇಂದು ಸಂಜೆಯ ಸಮಯಕ್ಕೆ ನನ್ನ ಮನೆಗೆ ಬನ್ನಿ. ಆ ರಹಸ್ಯ ಹೇಳುವೆ...." ಪ್ರವಾಸಿಕರು ಮುಂದುವರಿದರು. ನೇಕಾರ ಕಾಯಕದ ಸಂಕಣ್ಣನ ಮನೆ ಸಿಕ್ಕಿತು. ಒಳಗೆ ಪ್ರವೇಶಿಸಿದರು: ಪ್ರೀತಿಯಿಂದ ಅತಿಥಿಗಳನ್ನು ಬರಮಾಡಿಕೊಂಡು, ಹೆಂಡತಿಗೆ ಉಪಚರಿಸಲು ಹೇಳಿ, ನೇಯ್ಗೆ ಕಾಯಕದಲ್ಲಿ ತಲ್ಲೀನನಾದ. ಆಗಂತುಕ ಪ್ರವಾಸಿಗಳು ಅಂದರು :

"ನಿಮ್ಮ ಉಪಚಾರವೇನೂ ನಮಗೆ ಬೇಕಾಗಿಲ್ಲ. ನಾವು ಊಟ ಮಾಡಿದ್ದೇವೆ ನಮ್ಮ ಸಂದೇಹ ಪರಿಹರಿಸಿ...." ಎಂದು ಅದೇ ಪ್ರಶ್ನೆ ಕೇಳಿದರು. ಆಗ ನೇಕಾರ ಸಂಕಣ್ಣ ನುಡಿದ : "ಕ್ಷಮಿಸಿ ಈ ರಹಸ್ಯದ ಉತ್ತರ ಬೇಕಿದ್ದರೆ ರಾತ್ರಿಯ ವೇಳೆ ಬನ್ನಿ...." ಎಲ್ಲಿ ಹೋದರೂ ಇದೇ ಉತ್ತರ ಎಂದು ತಿಳಿದ ಪ್ರವಾಸಿಕರು ಇನ್ನಾರನ್ನೂ ಕಾಣಹೋಗದೆ ನಗರವನ್ನು ವೀಕ್ಷಿಸಿದರು. ಸಂಜೆಯಾಗುತ್ತಲೇ ಕಾತುರದಿಂದ ಮಡಿವಾಳ ಮಾಚಿದೇವರ ಮನೆಯನ್ನು ಪ್ರವೇಶಿಸಿದರು. "ಬನ್ನಿ, ಬನ್ನಿ ನಿಮಗಾಗಿ ಕಾಯುತ್ತಿದ್ದೆ. ಶರಣಾ ಶರಣಾರ್ಥಿ" ಎಂದು ಸ್ವಾಗತಿಸಿದರು. ಉಪಚಾರದ ನಂತರ ಆಗಂತುಕ ಪ್ರವಾಸಿಗಳು ಹೇಳಿದರು : "ನೋಡಿ ಎಲ್ಲರ ಮುಖದ ಮೇಲೂ ಸಂತೃಪ್ತಿಯ ತೇಜಸ್ಸು. ಅದೇ

ಕಳೆ ! ಭೂಮಿಯ ಮುಖದ ಮೇಲೂ ತೊಳಗಿ ಬೆಳಗುತ್ತಿದೆ. ಸಮೃದ್ಧಿ ಸಂತೃಪ್ತಿಗಳ ರಹಸ್ಯ ಬಸವಣ್ಣನವರ ಬಳಿ ಇರುವ ಮಂತ್ರದಂಡದಲ್ಲಿದೆ ಎಂದು ಪರರಾಜ್ಯದಲ್ಲಿ ಸುದ್ದಿಯಾಗಿದೆ. ಆ ಮಂತ್ರದಂಡ ಇರುವುದೆಲ್ಲಿ ? ಇದರ ರಹಸ್ಯ ತಿಳಿಯಬಯಸಿ ನಿಮ್ಮನ್ನೂ ಸೇರಿ ಮೂವರನ್ನು ಪ್ರಶ್ನಿಸಿದೆವು. ಎಲ್ಲರೂ ರಾತ್ರಿಗೆ ಬನ್ನಿ ಎಂದು ಒಂದೇ ಉತ್ತರ ನೀಡಿದ್ದಾರೆ. ನೀವಾದರೂ ನಮ್ಮ ಕುತೂಹಲ ತಣಿಸಿರಿ."

"ಮೂರು ಜನ ಶರಣರನ್ನು ಕಂಡಮೇಲೂ ನಿಮ್ಮ ಸಮಸ್ಯೆಗೆ ಇನ್ನೂ ಉತ್ತರ ಸಿಕ್ಕಿಲ್ಲವೆ? ಆಶ್ಚರ್ಯ. ಯಾವ ಮಾಯದ ಕೋಲು ಇಲ್ಲಿಲ್ಲ. ಒಂದು ದಿವ್ಯ ಮಂತ್ರ ಮಾತ್ರ ಇಲ್ಲಿದೆ. ಅದೇ "ಕಾಯಕವೇ ಕೈಲಾಸ." ನಮ್ಮ ಗುರು ಬಸವಣ್ಣನವರು ಕೊಟ್ಟದ್ದು. ಕಾಯಕ ಮಾಡುವ ವೇಳೆಯಲ್ಲಿ ನಾವು ಅತ್ತಿತ್ತ ಸಮಯ ಹರಣ ಮಾಡುವುದಿಲ್ಲ. ಅದು ಪವಿತ್ರವಾದ ದೇವರಪೂಜೆ ಎಂದು ಭಾವಿಸಿ ಮಾಡುತ್ತೇವೆ. ಅದಕ್ಕಾಗಿ ನಿಮ್ಮೊಡನೆ ಆಗ ಮಾತಾಡಲಿಲ್ಲ. ಕಾಯಕದಿಂದ ಬಂದ ಹಣವನ್ನು ನಮ್ಮ ಉಪಜೀವನಕ್ಕೆ ಉಪಯೋಗಿಸುತ್ತೇವೆ. ಸರಳವಾಗಿ ಬಾಳುತ್ತ ಮಿಕ್ಕಿದ ಹಣವನ್ನು ಸಮಾಜದ ಉದ್ಧಾರಕ್ಕೆ ಬಳಸುತ್ತೇವೆ. ಬಡಬಗ್ಗರಿಗೆ ಧನದ ನೆರವು ನೀಡಿ, ಕಾಯಕದ ಅವಲಂಬನೆ ಕಲಿಸಿ ಶಾಶ್ವತವಾಗಿ ಅವರ ಜೀವನೋಪಾಯಕ್ಕೆ ದಾರಿ ತೋರುತ್ತೇವೆ. ಎಲ್ಲರಿಗೂ ವಿದ್ಯೆ ಕಲಿಯಲು ನೆರವಾಗುತ್ತೇವೆ. ಆದ್ದರಿಂದ ಸತ್ಯ ಶುದ್ಧ ಕಾಯಕದಿಂದ ಸಮೃದ್ಧಿ, ನಿತ್ಯ ದಾಸೋಹದಿಂದ ಸಂತೃಪ್ತಿ ನಮಗೆ ಬಂದಿವೆ. ಹೀಗೆ ಎಲ್ಲರೂ ಬದುಕಿನ ಅರ್ಥ ಕಂಡುಕೊಂಡು ಸಂತೃಪ್ತರಾಗಿದ್ದೇವೆಯೇ ಹೊರತು ಇನ್ನಾವ ಮಂತ್ರದಂಡದ ಬಲದಿಂದಲ್ಲ.... ಅದನ್ನು ಹೀಗೆ ನಮ್ಮ ಗುರುಗಳು ಹೇಳಿದ್ದಾರೆ :

ಭಕ್ತಿ ವಿಶೇಷವ ಮಾಡುವರೆ ಹತ್ತು ಬೆರಳುಂಟು.

ಹಾಸಿ ದುಡಿವಡೆ ತನಗುಂಟು ತನ್ನ ಪ್ರಮಥರಿಗುಂಟು." ಹತ್ತು ಬೆರಳುಗಳಿಂದ ದುಡಿಯುತ್ತೇವೆ. ಆ ದುಡಿಮೆಯಿಂದ ದಾಸೋಹ ಮಾಡುತ್ತೇವೆ...." ಆಶ್ಚರ್ಯ ಚಕಿತರಾದ ಆಗಂತುಕ ಅತಿಥಿಗಳು "ಮಂತ್ರರಹಸ್ಯ"ವನ್ನರಿತು ಅದನ್ನು ಅನುಷ್ಠಾನಕ್ಕೆ ತರಲು ತಮ್ಮ ನಾಡಿಗೆ ಹಿಂತಿರುಗಿದರು, ಬಸವಣ್ಣನವರನ್ನು ದರ್ಶಿಸಿ.

ನೀತಿ : ಯಾವುದೇ ಮಾಯ–ಮಂತ್ರ ಜಾದೂಗಳಿಂದ ಶ್ರೀಮಂತಿಕೆ ಪಡೆಯಲು, ರಾಷ್ಟ್ರ ನಿರ್ಮಾಣ ಮಾಡಲು, ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಸಾಧ್ಯವಿಲ್ಲ. ಕಷ್ಟಪಟ್ಟು ದುಡಿಯಲೇಬೇಕು. ದುಡಿಮೆಯೆ ಜೀವಂತಮಂತ್ರ, ಕಾಯಕವೇ ಕೈಲಾಸ ಎಂಬುದರ ಮುಖಾಂತರ ಬಸವಣ್ಣನವರು ಹೇಳಿದ್ದಾರೆ; ಅಂಥ ಪ್ರವಿತ್ರ ಹಣವನ್ನು ಹೇಗೆ ಸಹಾಯಕ್ಕೆ ಬಳಸಬೇಕು ಎಂಬುದನ್ನು ದಾಸೋಹದಲ್ಲಿ ಹೇಳಿದ್ದಾರೆ. ನೀವೂ ಅದರಂತೆ ಕಾಯಕನಿಷ್ಠರಾಗುವಿರೆಂದು ನಂಬೋಣವೇ ?

ನಿಮ್ಮೊಲವಿನ
ತ್ರಿನೇತ್ರ

ಸ್ಫುರಣ-ಕಿರಣ

ಮಾತಾಜಿ

ಇಂದ್ರಿಯಗಳು–ವಾಹನಗಳು

ಒಮ್ಮೆ ಪ್ರವಾಸ ಮಾಡುತ್ತಿದ್ದೆವು ಪ್ರವಚನ ಮಾಡಲಿಕ್ಕೆಂದು ; ಕಾರಿನಲ್ಲಿ ನಾನು, ನನ್ನ ಶಿಷ್ಯವೃಂದ, ಆವಶ್ಯಕ ಸಾಮಾನು ಮಾತ್ರ ತೆಗೆದುಕೊಂಡಿದ್ದೆವು. ಪ್ರವಚನ ಕಾರ್ಯಕ್ರಮವೆಂಬ ನಮ್ಮ ಮಿನಿ ಸರ್ಕಸ್ ಸಾಮಾನುಗಳನ್ನು ಒಯ್ಯಲು ಕಾರೊಂದೇ ಎಲ್ಲಿ ಸಾಕಾದೀತು ! ಉಳಿದ ಸಾಮಾನು ಮತ್ತು ಇತರ ಶಿಷ್ಯವೃಂದವನ್ನು ಬಸ್ಸಿನ ಮೂಲಕ ಕಳಿಸಲಾಗಿತ್ತು. ಎಂಟು ತಾಸುಗಳ ದೀರ್ಘಪಯಣ. ಮಾರ್ಗಮಧ್ಯದಲ್ಲಿ ಕಾರನ್ನು ನಿಲ್ಲಿಸಿದೆವು, ಎತ್ತಿನ ಹಳ್ಳದ ಸೇತುವೆ ಮೇಲೆ. ಹಳ್ಳದಲ್ಲಿಳಿದು ಕೈಕಾಲು ಮುಖ ತೊಳೆದುಕೊಂಡು ಬಂದಾಗ ಹಾಯೆನಿಸಿತು. ಪ್ರಯಾಣ ಮುಂದರಿದಾಗ ಒಂದು ವಿಚಾರ ನೆನಪಿಗೆ ಬಂತು. ನಾವೇನೋ ಬೇಸರವಾದಾಗ ಕಾಡಿನ ಮಧ್ಯೆ ಗಾಡಿ ನಿಲ್ಲಿಸಿ ಸುಧಾರಿಸಿಕೊಂಡೆವು, ಗಾಡಿ ನಮ್ಮ ವಶದಲ್ಲಿರುವುದರಿಂದ. ಆದರೆ ಬಸ್ಸಿನಲ್ಲಿ ಹೋಗುವವರೇನು ಮಾಡಬೇಕು ? ಪಾಪ ! ಅದು ನಿಂತಲ್ಲಿ ಇವರಿಳಿಯಬೇಕೆ ವಿನಾ ; ಇವರು ಬಯಸಿದಲ್ಲಿ ಅದು ನಿಲ್ಲದಷ್ಟೆ. ಆಗ ಒಂದು ತತ್ತ್ವ ಸ್ಫುರಿಸಿತು.

ವಾಹನಗಳಲ್ಲಿ ಮೂರು ಬಗೆ. ನಮ್ಮನಮ್ಮ ಕಾರು ನಮ್ಮ ಕೈಯಲ್ಲಿ ; ಬೇಕೆನಿಸಿದಾಗ ನಿಲ್ಲಿಸಲು ಸಾಧ್ಯ ; ಬಸ್ಸು ಹಾಗಲ್ಲ. ತನ್ನ ನಿಲ್ದಾಣವಿದ್ದಲ್ಲಿ ನಿಲ್ಲುತ್ತೆ. ತೀರಾ ಪ್ರಸಂಗ ಬಂದಾಗ, ಯಾರಿಗಾದರೂ ತ್ರಾಸಾದಾಗ ಬಸ್ ಚಾಲಕ ನಿಲ್ಲಿಸಬಲ್ಲ. ಆದರೆ ವಿಮಾನಗಳು ಹಾಗಲ್ಲ. ಎಂಥ ಪ್ರಸಂಗದಲ್ಲೂ ಎಲ್ಲೆಂದರಲ್ಲೇ ಇಳಿಯಲಾರವು. ಚಾಲಕ ಬೇಕೆಂದರೂ ಇಳಿಸಲಾರ. ವಿಮಾನ ನಿಲ್ದಾಣದಲ್ಲಿ ಅವನಿಳಿಸಿದಾಗಲೇ ನಾವು ಇಳಿಯಬೇಕಷ್ಟೆ.

ಹಾಗೆಯೇ ಸ್ವಭಾವ ವ್ಯತ್ಯಾಸದಿಂದ ಕೂಡಿದ ಇಂದ್ರಿಯಗಳೂ ಸಹ. ಮಹಾತ್ಮರ, ಜಿತೇಂದ್ರಿಯರ ಇಂದ್ರಿಯಗಳು ಕಾರ್ ಇದ್ದಂತೆ. ಎಲ್ಲಿ ಬೇಕೆಂದರಲ್ಲಿ ನಿಲ್ಲಬಲ್ಲವು. ಯಾವ ಮಾರ್ಗ (ರೂಟ್)ದಲ್ಲಿ ಬೇಕಾದರೂ ಸಾಗಬಲ್ಲವು, ಇವರ ವಶದಲ್ಲಿರುತ್ತವೆ. ಗೃಹಸ್ಥರ ಇಂದ್ರಿಯಗಳು, ಬಯಕೆಗಳು ತಮ್ಮ ನಿಗ್ರಹದಲ್ಲಿ ಮನುಷ್ಯನನ್ನು ಬಸ್ ಡ್ರೈವರನಂತೆ ಇರಿಸಿಕೊಳ್ಳುತ್ತವೆ. ಆದರೆ ಪ್ರಸಂಗ ಬಂದಾಗ ಖಂಡಿತಾ ಸಂಯಮದ, ನೈತಿಕ ಚೌಕಟ್ಟಿನಲ್ಲಿ ನಿಲ್ಲಬಲ್ಲುವು. ಆದರೆ ವಿಲಾಸಿಗಳ, ವಿಷಯಾಸಕ್ತರ ಇಂದ್ರಿಯಗಳು

ವಿಮಾನಗಳ ಚಾಲಕರಂತೆ. ಅವು ಕೊಂಡೊಯ್ದು ಇಳಿಸಿದಲ್ಲೇ ಅವರು ಇಳಿವರೇ ವಿನಾ, ತಮಗೆ ಬೇಕೆನಿಸಿದಾಗಲ್ಲಿಲ್ಲ. ಮನುಷ್ಯನು ಸಂಪೂರ್ಣವಾಗಿ ಇಂದ್ರಿಯಗಳ ವಶದಲ್ಲಿರುವನು, ಈ ಮೂರನೆಯ ಬಗೆಯ ಪ್ರವೃತ್ತಿಯವನಾದರೆ.

ಶಾಸ್ತ್ರಜ್ಞಾನ-ಸ್ವಯಂಜ್ಞಾನ

ಮೈಸೂರಿನ ಓರ್ವ ಭಕ್ತರು ಪ್ರವಚನದ ಅನುಕೂಲಕ್ಕಾಗಿ ಒಂದು ಎಮರ್ಜೆನ್ಸಿ ಲೈಟ್ ಕಾಣಿಕೆಯಾಗಿ ನೀಡಿದರು. ಅದನ್ನು ವಿದ್ಯುತ್ ಪ್ಲಗ್ಗಿಗೆ ಹಾಕಿಟ್ಟದ್ದರೆ ವಿದ್ಯುತ್ ಆರುತ್ತಲೇ ತಾನಾಗಿ ಲೈಟ್ ಹತ್ತಿಕೊಂಡು ಬೆಳಕು ಚಿಮ್ಮುತ್ತದೆ. ವಿದ್ಯುತ್ ಇಲ್ಲದಾಗ ಪ್ಲಗ್ಗಿನಿಂದ ಬೇರ್ಪಡಿಸಿ ಸ್ವತಂತ್ರವಾಗಿ ಉರಿಸಬಹುದು. ಅದನ್ನು ಛಾರ್ಜು ಮಾಡಲಿಕ್ಕೆ ಯಾವಾಗಲೂ ಪ್ಲಗ್ಗಿನ ಸಂಬಂಧದಲ್ಲೇ ಇಟ್ಟಿರುತ್ತೇವೆ. ಒಮ್ಮೆ ಪ್ರವಚನ ಮಾಡುವಾಗ ವಿದ್ಯುತ್ ಆರಿದ ತಕ್ಷಣ ಇದು ಹತ್ತಿತು. ಆಗ ನನಗೊಂದು ಸ್ಫುರಣವು ಹೊಳೆಯಿತು. ವಿದ್ಯುತ್ತಿನಂತೆ ಶಾಸ್ತ್ರಜ್ಞಾನ, ಎಮರ್ಜೆನ್ಸಿ ದೀಪದಂತೆ ಸ್ವಯಂಜ್ಞಾನ. ಸಾಧಕನು ಮೊದಮೊದಲು ಶಾಸ್ತ್ರಗಳನ್ನು ಚೆನ್ನಾಗಿ ಓದಿ, ಅರ್ಥೈಸಿ ತನ್ನ ಜ್ಞಾನವನ್ನು ತುಂಬಿಕೊಳ್ಳಬೇಕು. ನಂತರ ಆತ್ಮ-ಚಿಂತನೆ, ನಿರಂತರ ಜ್ಞಾನ ಮಥನದಿಂದ ಸ್ವಯಂ ಜ್ಞಾನವೆಂಬ ಬೆಳಕು ಹತ್ತುವುದು. ನಿಜವಾದ ಅನುಭಾವಿ ಯಾದವನು ಎಂಥ ವಾದ ವಿವಾದದ ಪ್ರಸಂಗದಲ್ಲಿಯೂ ತನ್ನ ಸ್ವಯಂಜ್ಞಾನದಿಂದ ಬೆಳಕು ನೀಡಿ ಸಾಧಕರ ಸಂದೇಹ ಪರಿಹರಿಸಬಲ್ಲನು. ಆದರೆ ಎಮರ್ಜೆನ್ಸಿ ಲೈಟ್ ಹೇಗೆ ಸದಾ ವಿದ್ಯುತ್ ಪ್ಲಗ್ ಸಂಪರ್ಕದಲ್ಲಿದ್ದರೆ ಶಕ್ತಿಯುತವಾಗಿರುವದೋ ಹಾಗೇ ಎಷ್ಟೇ ಮಹಾಜ್ಞಾನಿಯಾದರೂ ನಿರಂತರವಾಗಿ ಸಾಹಿತ್ಯಾಧ್ಯಯನದಲ್ಲಿ ತೊಡಗಿದ್ದರೆ ಅವನಲ್ಲಿ ನೂತನ ಜ್ಞಾನ-ಚಿಂತನೆ ಆಳವಟ್ಟು ಪ್ರಕಾಶಿಸುವನು.

* * *

ನಗೆಹನಿ :

"ಅಲ್ಲಾ ಎರಡೂ ಕೈಮುರಿದು ಹೋಗಿರುವ ನಿನ್ನ ಗಂಡ ನಿನ್ನ ಕಪಾಳಕ್ಕೆ ಹೊಡೆಯುವುದಾದರೂ ಹೇಗೆ ಸಾಧ್ಯವಮ್ಮಾ ?" ಮ್ಯಾಜಿಸ್ಟ್ರೇಟರು ಕೇಳಿದರು.

"ಕಪಾಳಕ್ಕೆ, ಹೊಡೆಯುವ ಮೊದಲು, ಅವರ ಎರಡೂ ಕೈಮುರಿದಿರಲಿಲ್ಲ," ಎಂದಳಾ ಧರ್ಮಪತ್ನಿ,

* * *

"ನಿನ್ನೆ ನನ್ನ ಹೆಂಡತಿ ನನ್ನ ಕೋಟಿನ ಕಿಸೆಯ ಸಂಶೋಧನೆ ಮಾಡಿದಳು,"

ಏನಾದರೂ ಸಿಕ್ಕಿತೇನು ?"

"ಹುಂ. ಉಳಿದ ಸಂಶೋಧಕರಿಗೆ ಸಿಗುವಷ್ಟೇ. ಅಂದರೆ ಒಂದೆರಡು ತಾಸು ಬಡಬಡಿಸಲು ಸಾಕಷ್ಟು ಮಾಹಿತಿ ಸಿಕ್ಕಿತು"

ವಿಶ್ವವಿಭೂತಿ ಬಸವಣ್ಣನವರು

ಜಗದ್ಗುರು ಮಾತೇ ಮಹಾದೇವಿ

'ಕಲ್ಯಾಣ ಕಿರಣದ' ಓದುಗರು ಅನೇಕ ಬಾರಿ ಪತ್ರ ಬರೆದು ಬಸವಣ್ಣನವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಡಬೇಕೆಂದು ಕೇಳುತ್ತಿದ್ದರು. ಇದೇ ತಿಂಗಳು ವಿಶ್ವಗುರು ಬಸವಣ್ಣನವರ ಜಯಂತಿಯು ಬರುತ್ತಿರುವದರಿಂದ ಪರಿಚಯಾತ್ಮಕ ಲೇಖನ ಬರೆಯೋಣ ಎಂದು ನಿಶ್ಚಯಿಸಿ ಆರಂಭಿಸುತ್ತಿದ್ದೇನೆ. ಬಸವಣ್ಣನವರ ತತ್ತ್ವಗಳನ್ನು ಹಲವು ಹನ್ನೊಂದು ನಿಟ್ಟಿನಿಂದ ಮಾಡಿ ನಾನಾಗಲೇ ಗ್ರಂಥಗಳನ್ನು ಬರೆದಿರುವುದರಿಂದ ಈ ಲೇಖನ ಮಾಲೆಯಲ್ಲಿ ಕಥೆಗೇ ಪ್ರಾಮುಖ್ಯ ಸ್ಥಾನವನ್ನು ಕೊಡಲಿದ್ದೇನೆ.

ಬಸವಣ್ಣನವರು ಯಾರು ?

ಜನಮನದಲ್ಲಿ ಅಪೂರ್ವ ಜಾಗೃತಿ ತಂದು, ಯಾರೂ ಹುಟ್ಟಿನಿಂದಲೇ ಮೇಲಲ್ಲ ಮತ್ತು ಹುಟ್ಟಿನಿಂದಲೇ ಕೀಳಲ್ಲ. ಎಲ್ಲರೂ ಹುಟ್ಟಿನಿಂದ ಸಮಾನರು. ವ್ಯಕ್ತಿತ್ವ, ನೀತಿ, ಜ್ಯೋತಿಯ ಗಳಿಕೆಯಿಂದ ಶ್ರೇಷ್ಠರು ಎಂಬ ತತ್ತ್ವವನ್ನು ಸಾರಿ, ಸಮಸ್ತ ಮಾನವ ಜನಾಂಗಕ್ಕೆ ಧರ್ಮಸಂಸ್ಕಾರ ದೊರೆಯಬೇಕೆಂದು ಮಾನವ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮನುಜ ಧರ್ಮ, ವಿಶ್ವಧರ್ಮವನ್ನು ಕೊಟ್ಟ ಕ್ರಾಂತಿಪುರುಷರು ಬಸವಣ್ಣನವರು. ಇವರ ಹೋರಾಟ ಮಾನವರ ಸಾಮಾಜಿಕ, ಧಾರ್ಮಿಕ, ಶೈಕ್ಷಣೀಯ ಹಕ್ಕು ಬಾಧ್ಯತೆಗಳಿಗಾಗಿಯೇ ಆಯಿತೆಂದರೆ ಉತ್ಪ್ರೇಕ್ಷೆಯಲ್ಲ. ಜಾತಿಕಾರಣದಿಂದಲೊ ಅಂತಸ್ತು ಭೇದದಿಂದಲೊ ವೃತ್ತಿ ಭೇದದಿಂದಲೋ ಯಾವೊಂದು ಕಾರಣದಿಂದಲೂ ಯಾರೂ ಕೆಲವು ಮೂಲಭೂತ ಹಕ್ಕುಗಳಿಂದ ವಂಚಿತರಾಗಬಾರದು. ಅಂತಹ ಮೂಲಭೂತ ಹಕ್ಕುಗಳಲ್ಲಿ ಧರ್ಮಸಂಸ್ಕಾರವೂ ಒಂದು. ಇದು ಎಲ್ಲರಿಗೂ ಕೊಡಲ್ಪಡಬೇಕೆಂಬುದೇ ಅಂತಿಮ ಧ್ಯೇಯ.

"ಕಲ್ಯಾಣ" (Welfare)ವನ್ನು ಅಂತಿಮ ಧ್ಯೇಯವಾಗಿಟ್ಟುಕೊಂಡು ಧರ್ಮವನ್ನು ಸಾಧನೆಯಾಗಿ ಬಳಸಿಕೊಂಡು ಕ್ರಾಂತಿ ಮಾಡಹೊರಟ ಬಸವಣ್ಣನವರು, ಧರ್ಮದೆಡೆಗೆ ಜನ ಬರದಾಗ ಧರ್ಮವನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯಕ್ರಮ ಹಾಕಿಕೊಂಡರು ; ಮಾತೃಭಾಷೆಯಲ್ಲಿ ಧರ್ಮಸಾಹಿತ್ಯ ರಚಿಸಿ ತಾಯ್ನುಡಿಯಲ್ಲಿ ಜ್ಞಾನಬೋಧೆ ಮಾಡಿ, ಮಣ್ಣಿನ ಮಾತಿನಲ್ಲೇ ಆತ್ಮಗೀತೆಯನ್ನು ಹಾಡುವ ಸೌಲಭ್ಯ ಜನತೆಗೆ ಕೊಟ್ಟರು. ಮಾತೃಭಾಷೆಯಲ್ಲಿ ಅಧ್ಯಾತ್ಮ ರಸಗಂಗೆ ವಚನ ಸಾಹಿತ್ಯವಾಹಿನಿಯಾಗಿ ಬಸವ ಭಗೀರಥನ ಪ್ರಯತ್ನದಿಂದಲೆ ಧಾರಾಕಾರವಾಗಿ ಪ್ರವಹಿಸತೊಡಗುತ್ತಿದ್ದಂತೆಯೇ ನಿರಾಶೆಯಿಂದ

ಭಸ್ಮೀಭೂತರಾಗಿದ್ದ ಅಸಂಖ್ಯಾತರು ಪುನರ್ಜನ್ಮ ಪಡೆದು, ಪುನೀತರಾದರು ; ಮೇಲೆದ್ದು ಮುಕ್ತಿಯ ಗೌರಿಶಂಕರವನ್ನೇರಿ ಆತ್ಮವಿಶ್ವಾಸದ ಬೆಳಕಿನ ಗೋಲಗಳಾಗಿ ಮೆರೆದರು.

ನೂತನ ಪರಂಪರೆಯ ಸೃಷ್ಟಿಕರ್ತರಾಗಿ, 'ಮನುಜದೇವ'ನೆ ಆಗಿ ನೊಂದವರ ನಂದಾದೀಪವಾಗಿ, ಬೆಂದವರ ಭಾಗ್ಯದೇವತೆಯಾಗಿ, ಆತ್ಮವಿಶ್ವಾಸದ ಕಾರಂಜಿಯನ್ನು ಜನಮನದಲ್ಲಿ ಪುಟಿಸತೊಡಗಿದ ಭುವನದ ಭಾಗ್ಯ ಬಸವಣ್ಣನವರು. ಇಂಥ ವಿಭೂತಿಯು ಆಗಿಹೋದುದು ಹನ್ನೆರಡನೆಯ ಶತಮಾನದಲ್ಲಿ.

ಜನನ

ಈಗಿನ ಬಿಜಾಪುರ ಜಿಲ್ಲೆಯ ಬಾಗೆವಾಡಿ ಗ್ರಾಮ. ಪಂಡಿತೋತ್ತಮರಿಂದ ವಿಜೃಂಭಿಸುತ್ತಿದ್ದ ಪಟ್ಟಣ. ಅದಕ್ಕೆ ಇಂಗುಳೇಶ್ವರ ಬಾಗೆವಾಡಿ ಎಂದೂ ಹೆಸರಿತ್ತು. ಬಾಗೆವಾಡಿಯಲ್ಲಿ ಅತ್ಯಂತ ಪ್ರಸಿದ್ಧವಾದ ಭಾಗ ಅಗ್ರಹಾರ. ಪುರಪ್ರಮುಖನಾದ ಮಾದಿರಾಜನ ಮನೆಯೂ ಅಲ್ಲಿಯೇ !

ಬಂದು ಭೂಲೋಕದೊಳು ಕೀರ್ತಿಯಂ ಪಡೆದಿರ್ಪ
ಸಂದಣಿಪ ವಿಪ್ರಸಂತಾನದಿಂದಿಡಿದಿರ್ಪ
ಶಿವಪುರಾಣಾಗಮ ಕುಳಂಗಳಿಂದೆಸೆದಿರ್ಪ
ಶಿವಶಾಸ್ತ್ರಘೋಷ ಸಂಗೀತದಿಂದಿಡಿದಿರ್ಪ
ಅಗ್ರಹಾರಂ ಬಾಗೆವಾಡಿಯೊಳಗೆಸೆದಿರ್ಪ
ಅಗ್ರೇಶ್ವರನ ಕಮ್ಮೆಕುಲದಿಂದೆ ಮೆರೆದಿರ್ಪ !
ವಿಪ್ರನಿರ್ಪ ಮಾದಿರಾಜನಾತನ ಸತಿಯು
ಅಪ್ರತಿಮ ಮಾದಾಂಬೆಯೆಂದೆನಿಪ್ಪ ಗುಣವತಿಯು.

ಧರ್ಮಶಾಸ್ತ್ರ ಪಠಣ, ಪಾರಾಯಣಗಳ ಝೇಂಕಾರದಿಂದ ಮಿಡಿಯುತ್ತಿರುವ ಅಗ್ರಹಾರದಲ್ಲಿ ಸತ್ಕುಲ ಪ್ರಸೂತೆಯಾದ ಧರ್ಮಪತ್ನಿ ಮಾದಲಾಂಬಿಕೆಯೊಡನೆ ಮಾದರಸನು ವಾಸಿಸುತ್ತಿದ್ದನು. ಶೈವಬ್ರಾಹ್ಮಣ ಮನೆತನದವರಾಗಿದ್ದರು.

ಕೀರ್ತಿ, ಸಂಪತ್ತು, ವಿದ್ಯೆ-ಕುಲಾಧಿಕ್ಯತೆ ಎಲ್ಲವೂ ಇದ್ದರೂ, ಪುತ್ರಪ್ರಾಪ್ತಿ ಆ ದಂಪತಿಗಳಿಗಿರಲಿಲ್ಲ. ನಾಗಲಾಂಬಿಕೆಯೆಂಬ ಮಗಳು ಇದ್ದರೂ ವಂಶಪಾರಂಪರ್ಯದ ವೃತ್ತಿಯನ್ನು, ಪೌರೋಹಿತ್ಯವನ್ನು ನಡೆಸಿಕೊಂಡು ಹೋಗಬಲ್ಲ ಮಗನಿರಲಿಲ್ಲ. ಈ ಬಗೆಯ ಕೊರಗೂ ಮಾದರಸನದಾದರೆ, ಮಾದಲಾಂಬಿಕೆಯ ಕೊರಗು ಮತ್ತೊಂದು ಬಗೆಯದು. ಸತ್ತಾಗ ತರ್ಪಣ ಬಿಡಲು ಮಗನಿಲ್ಲವಾದರೆ ಸ್ವರ್ಗಪ್ರಾಪ್ತಿ ಸುಮನಿಸದು ಎಂಬ ಚಿಂತೆ ಪ್ರತಿನಿತ್ಯ ಪುರಾಣಗಳನ್ನು ಕೇಳುತ್ತಿದ್ದ ಆಕೆಗೆ ಒದಗಿತ್ತು. ಸತ್ತು ಸ್ವರ್ಗಕ್ಕೆ ಹೋದಾಗ ಪುತ್ರರಿಲ್ಲದ ಕಾರಣ ಹೊರದೂಡಲ್ಪಟ್ಟ ಪುರಾಣಪ್ರಸಂಗಗಳು, ಸಮಾಜದ ಜನರಾಡುವ ಚುಚ್ಚುನುಡಿಗಳು, ಆಕೆಯ ನೋವನ್ನು ವರ್ಧಿಸಿದ್ದವು.

ಬಾಗೆವಾಡಿಯ ನಗರ ದೈವವಾಗಿದ್ದ ನಂದೀಶ್ವರನ ಗುಡಿಗೆ ನಿತ್ಯ ಹೋಗಿ ಬರುವ ಪರಿಪಾಠವಿದ್ದ ಮಾದಲಾಂಬಿಕೆ ಒಂದು ದಿವಸ "ನಂದಿ ಪುರಾಣ" ಕೇಳುವಾಗ ನಂದೀವ್ರತ ಕೈಗೊಂಡರೆ ಸಂತಾನ ಪ್ರಾಪ್ತಿಯುಂಟೆಂಬ ವಿಚಾರ ಕೇಳುತ್ತ ಮನಸ್ಸಿನಲ್ಲೇ ಸಂಕಲ್ಪಿಸಿದಳು. ಅಂದಿನಿಂದ ವ್ರತವನ್ನು ಅಚಲವಾಗಿ ಆರಂಭಿಸಿದಳು. ಅವಳ ವ್ರತ ಪೂರ್ತಿಯಾದ ದಿವಸ ನಂದಿಕೇಶ್ವರನ ದರ್ಶನಕ್ಕೆ ಹೋದಾಗ ವಿಗ್ರಹಕ್ಕೆ ಏರಿಸಿದ ಒಂದು ಹೂವು ಜಾರಿಬಿತ್ತು. ಅದನ್ನು ಅರ್ಚಕನು ಭಕ್ತಿ–ಸಂಭ್ರಮಗಳಿಂದ ತಂದುಕೊಟ್ಟು "ನಿಮ್ಮ ಸಂಕಲ್ಪ ಸಿದ್ಧಿಯಾಯಿತು. ಪ್ರಸಾದ ಲಭ್ಯವಾಯಿತು. ಅಪೇಕ್ಷೆ ಖಂಡಿತಾ ಈಡೇರುತ್ತದೆ." ಎಂದು ನುಡಿದಾಗ ಆಕೆಯ ಸಂತೋಷ ಹೇಳತೀರದು.

ಅಂದು ರಾತ್ರಿಯೇ ಆಕೆಗೊಂದು ಕನಸಾಯಿತು. ಸುಂದರವಾದ ರಜತಗಿರಿ. ಮಂಗಲರೂಪಿ ಮಹಾದೇವನು ತನ್ನ ಆಪ್ತ ಶಿಷ್ಯನಾದ ನಂದಿನಾಥನಿಗೆ ಲೋಕೋದ್ಧಾರಕ್ಕಾಗಿ ಅವತರಿಸಲು ಆಜ್ಞಾಪಿಸುವಾಗಲೇ, ಶುಭ್ರಧವಳ ಬಣ್ಣದ ಆ ಭವ್ಯನಂದಿಯು ಸಂತಸದಿಂದ ಅವತರಿಸುತ್ತಿದೆ ಇಳೆಗೆ. ಅವತರಣವಾಗುತ್ತ ಬೆಳಕಿನ ಸ್ವರೂಪ ತಾಳುತ್ತ ಮಾದಲಾಂಬಿಕೆಯ ದೇಹದೊಳಕ್ಕೆ ಪ್ರವೇಶಿಸುತ್ತಿದೆ. ಆಕೆ ಆನಂದ–ಆಶ್ಚರ್ಯಗಳಿಂದ ಸಂಭ್ರಾಂತಳಾಗಿ ತನ್ನ ಕನಸನ್ನು ಮಾದರಸನ ಮುಂದೆ ಹೇಳುತ್ತಾಳೆ. ಅವನೂ ಸಂತೋಷಭರಿತನಾಗಿ ಪೂಜೆಯನ್ನು ಮಾಡುತ್ತಾನೆ. ಕನಸಿನ ಸುದ್ದಿ ಊರಿನಲ್ಲೆಲ್ಲ ಗುಣುಗುಣಿಸುತ್ತಿದೆ.

ಉಷಃಕಾಲವನ್ನು ಬೆನ್ನುಹತ್ತಿ ಬಾಲ ಸೂರ್ಯನ ಉದಯವಾಗುವಂತೆ, ಈ ಕನಸಿನಾನಂತರ ಮಾದಲಾಂಬಿಕೆ ಗರ್ಭವತಿಯಾದುದು ಸುದ್ದಿ ರೂಪ ತಾಳಿತು. ಮನೆಯಲ್ಲಿ–ಊರಲ್ಲಿ ಸಂಭ್ರಮದ ಹೊನಲು ಹರಿಯುತ್ತಿದೆ. ವಂಶೋದ್ಧಾರಕ ಪುತ್ರ ಬರುವನೆಂಬಾಶೆ ತಾಯಿಯದು, ಅಗ್ರಹಾರದ ಮುಖ್ಯಸ್ಥವೃತ್ತಿ ಮಾಡುವ ಮಗ ಬರುವನೆಂಬ ಸಂತೋಷ ತಂದೆಯದಾದರೆ, ಲೋಕಕ್ಕೆ ಬೆಳಗು ಚೆಲ್ಲುವ ಕ್ರಾಂತಿಪುರುಷ ಬರುವನೆಂಬ ಆನಂದ ಪರಮಾತ್ಮನದು.

ಮಾದಲಾಂಬಿಕೆಯ ವರ್ತನೆಯಲ್ಲಿ ಶಾರೀರಕ ಬದಲಾವಣೆ ಮಾತ್ರವಲ್ಲ, ಸ್ವಭಾವ ಪರಿವರ್ತನೆಯೂ ಆಗತೊಡಗಿತು. ಅಂತರ್ಮುಖಿಯಾಗಲಾರಂಭಿಸಿದಳಲ್ಲದೆ ಸದಾ ಜಪ, ವ್ರತ, ಪಾರಾಯಣದಲ್ಲಿ ತೊಡಗಿದಳು. ನವಮಾಸಗಳು ತುಂಬುತ್ತಿದ್ದಹಾಗೆಯೇ ಅಕ್ಷಯಾ ತೃತೀಯ ರೋಹಿಣಿ ನಕ್ಷತ್ರದಲ್ಲಿ, ವೈಶಾಖ ಮಾಸದಲ್ಲಿ* ಪುತ್ರೋತ್ಸವವಾಯಿತು, ಮಾದಲಾಂಬಿಕೆ ತೌರುಮನೆಯಾದ ಇಂಗಳೇಶ್ವರದಲ್ಲಿ ಮಗುವನ್ನು ಹೆತ್ತಳು. ಯುಗಪುರುಷನಾದ ಬಸವಣ್ಣನಿಂದ ಶಕೆಯೇ ಪ್ರಾರಂಭವಾಯಿತಾದ್ದರಿಂದ ಬಸವ ಶಕೆಯನ್ನು

* ಭೀಮಕವಿಯ ಪ್ರಕಾರ ಆಥೋರ್ಣದಯದಲ್ಲಿ; ಇನ್ನು ಕೆಲವರ ಪ್ರಕಾರ ಕಾರ್ತಿಕ ಶುದ್ಧ ಪ್ರತಿಪದೆ ಸ್ವಾತಿ ನಕ್ಷತ್ರ. ವಾದ–ವಿವಾದಕ್ಕಳಿಯದೆ ಈಗ ಪ್ರಚಲಿತವಿರುವ ಜಯಂತಿಯ ದಿನವನ್ನೇ ಬಳಸಿಕೊಳ್ಳಲಾಗಿದೆ.

ಅಂದಿನಿಂದ ಜನರು ಪರಿಗ್ರಹಿಸುವರು.

ಮಗುವು ಜನನವಾಗುತ್ತಿದ್ದಂತೆಯೇ ವಿಶೇಷ ಪ್ರಸಂಗವೊಂದು ಜರುಗಿತು. ಬಾಗೆವಾಡಿಯ ಉತ್ತಮಕೇರಿಯವರ ಮನೆಯಲ್ಲಿ ಹಸುವೊಂದು ಸತ್ತಿದ್ದು ಅದನ್ನು ಎಳೆದೊಯ್ಯಲು ಮಾದಾರನೋರ್ವನಿಗೆ ಹೇಳಿಕಳಿಸಲಾಗಿತ್ತು. ಓರ್ವ ತರುಣ ದನದ ಶವವನ್ನೊಯ್ಯಲು ಬಂದವನು ಸುಶ್ರಾವ್ಯವಾದ ಮಂತ್ರಘೋಷ ಕೇಳುತ್ತ, ಕುತೂಹಲಿತನಾಗಿ ಬ್ರಾಹ್ಮಣೋತ್ತಮರೊಬ್ಬರ ಮನೆಯ ಹೊಸ್ತಿಲನ್ನೇರಿ, ಬಗ್ಗಿ ನೋಡಿದ. ಒಳಗೆ ಮಂತ್ರಘೋಷ ಮಾಡುತ್ತಿದ್ದವರ ದೃಷ್ಟಿ ಹೊರಗೆ ಹರಿದು ಅವರು ಗಾಬರಿಯಿಂದೆದ್ದು ಶಾಸ್ತ್ರ ಪಾವಿತ್ರ್ಯಕ್ಕೆ ಅಪಚಾರವಾಯಿತೆಂದು ಬೊಬ್ಬೆ ಇಡತೊಡಗಿದರು. ಮುಗ್ಧ ಮಾದಾರ ಗಡಗಡ ನಡುಗಿದ. ದೂರು ಪುರಪ್ರಮುಖ ಮಾದರಸನಲ್ಲಿಗೆ ಹೋಯ್ತು. ವಿಚಾರಣೆ ಆರಂಭವಾಯಿತು. ತಿಳಿಯದೆ ಹುಡುಗ ಮಾಡಿದ ತಪ್ಪೆಂದು ಅವರ ತಂದೆ ವಾದಿಸಿದ. ಆದರೆ ಶಾಸ್ತ್ರನಿಷ್ಠರು ವಾದಿಸಿದರು; ತಿಳಿಯದೆ ಬೆಂಕಿಯಲ್ಲಿ ಇಟ್ಟರೆ ಸುಡದೆ ಇದ್ದೀತೆ? ಧರ್ಮಶಾಸ್ತ್ರಗಳನ್ನು ಪಠಿಸಿದ ಪಂಚಮನ ನಾಲಿಗೆ ಕೊಯ್ಯಬೇಕು; ಕೇಳಿದವನ ಕಿವಿಗೆ ಕಾಯ್ದ ಸೀಸ ಹಾಕಬೇಕೆಂದು ಶಾಸ್ತ್ರಕಾರರು ಹೇಳಿಲ್ಲವೆ?" ಮಾದರಸನ ಅಂತರಾತ್ಮ ಒಪ್ಪುತ್ತಿಲ್ಲ. ಈ ಕ್ರೂರ ವಿಧಾನಕ್ಕೆ ಬಿಟ್ಟರೆ ಸವರ್ಣೀಯರು ರೊಚ್ಚಿಗೇಳಬಹುದೆಂಬ ಭಯ. ವಿಚಾರಣಾಸಭೆಯಲ್ಲಿ ಕುಳಿತ ಮಾದರಸ ಸಂದಿಗ್ಧ ಅವಸ್ಥೆಯಲ್ಲಿರುವಾಗಲೇ ಓರ್ವ ಆಳು ಓಡಿ ಬಂದು, "ಪ್ರಭುಗಳೇ, ತಮಗೆ ಪುತ್ರೋತ್ಸವವಾಗಿದೆ. ಮಗನು ರೋಹಿಣಿ ನಕ್ಷತ್ರದಲ್ಲಿ ಜನಿಸಿರುವನು...." ಮಾದರಸನಿಗೆ ಆನಂದದ ಮಹಾಪೂರ ಹರಿಯುತ್ತಿದ್ದಂತೆಯೇ, ತಲೆಯಲ್ಲಿ ಬೆಳಕೊಂದು ಮೂಡಿ ಮರೆಯಾಯಿತು. ಆಗ ಹೇಳುವನು, "ಕುಲೋತ್ತಮರೇ, ಆ ತರುಣನು ಎಸಗಿದ್ದು ತಪ್ಪೋ ಒಪ್ಪೋ ಎಂಬ ಬಗ್ಗೆ ಉಭಯತರು ವಾದಿಸಿದ್ದೀರಿ. ತಪ್ಪೆಂದೇ ತಿಳಿದುಕೊಂಡರೂ ಚಿಂತೆಯಿಲ್ಲ; ಆದರೆ ನನಗೆ ಪುತ್ರೋತ್ಸವವಾಗಿ, ನನ್ನ ವಂಶಜ್ಯೋತಿ ಭುವಿಗಿಳಿದ ಆನಂದದ ಸುದ್ದಿ ಕೇಳಿದ ಬಳಿಕ ನಾನು ಕ್ರೂರಶಿಕ್ಷೆಯನ್ನು ನೀಡುವ ಅಮಂಗಲದ ಕೆಲಸ ಮಾಡಲಾರೆ. ಈ ಶುಭವಾರ್ತಾ ಪ್ರಸಂಗದಲ್ಲೇ ನಾನು ಈ ತರುಣನಿಗೆ ಔದಾರ್ಯದ ಕ್ಷಮೆ ನೀಡಿ ಬಿಡುಗಡೆ ಮಾಡಿರುವೆ. ಇದರಿಂದ ನಿಮಗೆ ಸಂತೋಷವಾಗುವದೆಂದು ನಂಬುವೆ." ವಿರೋಧಿಗಳ ಬಾಯಿ ಕಟ್ಟಿ ಹೋಯಿತು. ಇನ್ನಾವುದೇ ಒತ್ತಡ ತರಲು ಸಾಧ್ಯವಿಲ್ಲವೆಂದರಿತು ಮೌನ ತಾಳಿದರು.

ಇತ್ತ ಹೊಲೆಯರ ಪಾಳ್ಯದಲ್ಲಿ ಆನಂದವೋ ಆನಂದ. ಆರೋಪಿ ತರುಣನ ವೃದ್ಧ ತಂದೆ, ಮಗನ ಬಿಡುಗಡೆಯಾಗುತ್ತಲೇ ಸಂಭ್ರಾಂತನಾಗಿ ನುಡಿದ: "ಎಲೈ ಮಹಾನುಭಾವನೆ, ನೀನು ನಮ್ಮ ಬಿಡುಗಡೆಗಾಗಿ ಹುಟ್ಟಿಬಂದಂತೆ ತೋರುತ್ತೀಯ. ಹುಟ್ಟುತ್ತಲೇ ನಮ್ಮ ಬಿಡುಗಡೆಗೆ ಕಾರಣನಾದೆ. ಚಿರಕಾಲ ಬಾಳು...."*

* "ಕರ್ತಾರನ ಕಮ್ಮಟ" ಕೃತಿಯಿಂದ ಸ್ಫೂರ್ತಿ ಪಡೆದುದು.

ಸಂಭ್ರಮ-ಸಡಗರಗಳಿಂದ ಸಭೆ ಮುಗಿಸಿದ ಮಾದರಸನು ತನ್ನ ಕಂದನನ್ನು ಕಾಣಲು ಇಂಗಳೇಶ್ವರಕ್ಕೆ ಬಂದನು. ಕಾಣುತ್ತಲೇ ಉಕ್ಕುವ ಹಾಲಿಗೆ ತಣ್ಣೀರು ಸೋಂಕಿದಂತಾಗಿ ಉತ್ಸಾಹದ ಅಲೆಗಳಡಗಿದವು. ಕಾರಣ ಸುಂದರವಾಗಿದ್ದರೂ ಮಗುವು 'ಕಣ್ತೆರೆಯದೆ, ಬಾಯಿ ತೆರೆಯದೆ, ಅಳದೆ ಮಿಡಕದೆ' ನಿಶ್ಚಲವಾಗಿತ್ತು. ಜೀವವು ಇದೆಯೋ ಇಲ್ಲವೋ ಎಂಬಂತಿತ್ತು. ಎಲ್ಲರೂ ಗಾಬರಿಗೊಂಡು ಓಡಾಡುವಾಗಲೇ, "ಹರಹರ ಮಹಾದೇವ" ಎಂಬ ಘೋಷಣೆ ಕೇಳಿಬಂತು. ಮಾದರಸ ಸಂಭ್ರಮಿತನಾಗಿ ಪರಿಚಿತ ಸ್ವರದ ಸ್ಮರಣೆ ಮಾಡಿಕೊಳ್ಳುತ್ತ ಹೊರಬರುವಾಗ ಜಾತವೇದ ಮುನಿಗಳ ಸದ್ರೂಪು ತಲೆಬಾಗಿಲಲ್ಲಿ ನಿಂತಿತ್ತು. "ಗುರುದೇವಾ ಎಷ್ಟು ಆಕಸ್ಮಿಕ ನಿಮ್ಮ ಬರವು...." ಎಂದು ಶುದ್ಧೋದಕ ತಂದು ಪಾದಕ್ಕೆರೆದು, ನಮಿಸಿ ಒಳಕ್ಕೆ ಬರ ಮಾಡಿಕೊಂಡ.

"ಆಕಸ್ಮಿಕವೇನೆಲ್ಲ ಮಾದರಸ ಶಿವ ಆಜ್ಞಾಪಿತ. ನಿನಗೆ ಪುತ್ರೋತ್ಸವವಾಗಿದೆಯಲ್ಲವೆ ? ದೇವನ ಕಾರುಣ್ಯದ ಕಂದನವನು...." ಕಾಷಾಯ ವಸ್ತ್ರಧಾರಿಯಾದ, ಜಟಾಮುಕುಟ ಧಾರಿ, ಭಸ್ಮಾಲಂಕೃತ ಶೈವಗುರು ಜಾತವೇದ ಮುನಿಗಳು ಒಳಕ್ಕೆ ಧಾವಿಸಿದರು. ಕೂಡಲ ಸಂಗಮವೆಂಬ ಶೈವಕ್ಷೇತ್ರಾಧಿಪತಿಗಳು, ಮಾದರಸನ ಕುಲಗುರುಗಳೂ ಆಗಿದ್ದ ಜಾತವೇದ ಮುನಿಗಳು ಪರಮಜ್ಞಾನಿಗಳಾಗಿದ್ದರು. ಭುವಿಗಿಳಿದ ಬೆಳಕನ್ನು ತಮ್ಮ ಅತೀಂದ್ರಿಯಾನುಭವದಿಂದ ಗ್ರಹಿಸಿ ಆಶೀರ್ವದಿಸಲು ಬಂದಿದ್ದರು. ಮೊರದಲ್ಲಿ ಮಲಗಿಸಿದ್ದ ಮಗುವು ಕರ್ಪೂರದ ಗೊಂಬೆಯಂತೆ ಕಣ್‌ತೆರೆಯದೆ ಇರುವುದನ್ನು ಕಂಡು ಮುಗುಳ್ನಕ್ಕು ತಮ್ಮ ಜೋಳಿಗೆಯಿಂದ ಭಸ್ಮವನ್ನು ತೆಗೆದು ಮಗುವಿನ ಹಣೆಗೆ ಧರಿಸಿ, ಮಸ್ತಕದ ಮೇಲೆ ಹಸ್ತವನ್ನಿಟ್ಟು, "ಓಂ ನಮಃ ಶಿವಾಯ" ಎಂದು ಕಿವಿಯಲ್ಲಿ ಮಂತ್ರಜಪವನ್ನು ಉಸುರುತ್ತಿದ್ದಂತೆಯೇ ಆ ಮಗುವು ಕಣ್ತೆರೆದು ಜೀವಂತಿಕೆಯ ಸಾಕ್ಷಿಯಾಗಿ ಅಳತೊಡಗಿತು. ಇಹಲೋಕಕ್ಕೆ ಬಂದ ಬಳಿಕ ಗುರುದರ್ಶನವಿಲ್ಲದೆ ಮತ್ತೇನನ್ನೂ ನೋಡುವುದು ಬೇಡವೆಂದೋ ಏನೋ ಮಗುವು ಲೀಲೆಯನ್ನು ತೋರುತ್ತಿದೆ. ತಾಯಿ-ತಂದೆ ಆನಂದಭರಿತರಾದರು. ಆಗ ಜಾತವೇದರು ಹೇಳುತ್ತಾರೆ: "ಸದ್ಭಕ್ತ ದಂಪತಿಗಳೇ, ಇವನು ಶಿವನ ಶಿಶು. ನಂದೀಶ್ವರನ ವ್ರತಧಾರಿಗಳಾಗಿ ತಾವು ಇವನನ್ನು ಪಡೆದಿದ್ದೀರಿ. ನಂದಿಯು ಧರ್ಮದ ಪ್ರತೀಕ. ಶಿವನು ನಂದಿ ವಾಹನ ಎಂಬುದರ ಅರ್ಥ ಪರಮಾತ್ಮನು ಧರ್ಮವೆಂಬ ವಾಹನದ ಮೇಲೆ ಸಂಚರಿಸುವವನೆಂಬುದು ; ಆದ್ದರಿಂದ ಇವನು ಧರ್ಮಪುರುಷ. ನೀವು ನಿಮಿತ್ತಮಾತ್ರ ತಾಯಿ-ತಂದೆಗಳು. ನಿಮ್ಮ ಸೀಮಿತ ಪ್ರೇಮದಲ್ಲಿ ಕಟ್ಟಿಹಾಕದೆ ಅವನನ್ನು ಲೋಕೋದ್ಧಾರಕನೆಂದು ಭಾವಿಸಿರಿ. ವೃಷಭನ ಪ್ರಸಾದದಿಂದ ಹುಟ್ಟಿದ ಇವನನ್ನು ಬಸವನೆಂದು ಕರೆಯಿರಿ...." ಆಶೀರ್ವದಿಸಿ ತಮ್ಮ ನೆಲೆಗೆ ತೆರಳಿದರು. ಮಾದರಸ-ಮಾದಲಾಂಬೆಯರು ತಮ್ಮ ಮುದ್ದು ಮಗನಿಗೆ ಬಸವರಸನೆಂದು ಹೆಸರಿಟ್ಟು, ಮುದ್ದಾಗಿ ಬೆಳೆಸತೊಡಗಿದರು. ಮುಂದೆ ಈತನೇ ಮಹಾಗುರುವಾದಾಗ ಬಸವೇಶ್ವರನೆಂದು ಕೀರ್ತಿಸಲ್ಪಟ್ಟನು. ದೀನದಲಿತರ ಉದ್ಧಾರಕ

ನಾಗಿ, ಶೋಷಿತರ ಬಂಧುವಾದಾಗ "ಅಣ್ಣಾ" ಎಂದು ಸಂಬೋಧಿಸಲ್ಪಟ್ಟು ಬಸವಣ್ಣನಾದರು.

ಬಾಲ್ಯ

ಬಸವರಸ ತೀಕ್ಷ್ಣಮತಿ. ಗುರುಹಿರಿಯರಲ್ಲಿ ಶ್ರದ್ಧೆ, ದೇವನಲ್ಲಿ ಭಕ್ತಿಯನ್ನು ಇರಿಸಿ ಅಧ್ಯಯನಕ್ಕೆ ತೊಡಗಿದ. ಎಳೆಯ ಚೇತನವಾದರೂ ಬಾಲಸೂರ್ಯನಂತಹ ಪ್ರಖರ ಮತಿಯುಳ್ಳವ. ಆಗ ಬ್ರಾಹ್ಮಣರ ಮಕ್ಕಳಿಗೆ ವಿಶೇಷ ಶಿಕ್ಷಣದ ಸೌಲಭ್ಯವಿತ್ತು. ಅದರಲ್ಲಿಯೂ ಪುರಪ್ರಮುಖನಾದ ಮಾದಿರಾಜನ ಮಗನೆಂದರೆ ಕೇಳಬೇಕೆ ? ವಿಶೇಷ ಆಸಕ್ತಿಯಿಂದ ಪಾಠಗಳನ್ನು ಹೇಳಿಕೊಡುತ್ತಿದ್ದರು ಶಿಕ್ಷಕರು.

ಬರಹ ವಾಚನ ಗಣಿತ, ಶಬ್ದಾ
ರ್ಥರಸ ಭಾವೋಕ್ತಿ ಪ್ರವೀಣತೆ
ಭರತ ಛಂದೋವ್ಯಾಕರಣ ಸಂಗೀತ ಸಾಹಿತ್ಯ
ಹರ ರಹಸ್ಯಾಗಮ ಪುರಾಣೋ
ತ್ಕರ ಸಕಳ ವೇದಾದಿ ಕಲೆಗಳು
ಸ್ಮರಿಸಲೊಡನೆ ಮುಖೋದ್ಗತಂ ಬಸವಂಗದೇವೋಗಳ್ ॥

ಹೀಗೆ ಸಕಲ ಶಾಸ್ತ್ರಪಾರಂಗತನಾಗುವ ವಿದ್ಯೆ ಬಸವರಸನಿಗೆ ಲಭ್ಯವಾಯಿತು. ಸ್ವತಂತ್ರ ವಿಮರ್ಶಾಪ್ರಜ್ಞೆ ಬೇರೆ ಜನ್ಮತಃ ಮೂಡಿತ್ತು. ಪ್ರತಿಯೊಂದು ಆಚಾರ-ವಿಚಾರಗಳನ್ನೂ ಬಾಲಕ ಪ್ರಶ್ನಿಸುತ್ತಿದ್ದ. ಹೀಗೇಕೆ ಹೀಗೇಕೆ ? ಚಿಂತನೆ ಮಾಡುತ್ತ ಮಾಡುತ್ತ ಗಂಭೀರನಾಗಿ ಕುಳಿತುಬಿಡುತ್ತಿದ್ದ.

ಸಿಂಹಃ ಶಿಶುರಪಿ ನಿಪತತಿ ಮದಮಲಿನ ಕಪೋಲ ಭಿತ್ತಿಷು ಗಜೇಷು ।
ಪ್ರಕೃತಿರಿಯಂ ಸತ್ತ್ವವತಾಂ ನ ಖಲು ವಯಸ್ತೇಜಸೋ ಹೇತುಃ ॥

"ಸಿಂಹವು ಮರಿಯಾಗಿದ್ದರೂ ಮದವೇರಿದ ಆನೆಯ ಗಂಡಸ್ಥಲಕ್ಕೆ ಹಾರುವುದು. ತೇಜಸ್ಸಿಗೆ ವಯಸ್ಸೇನೂ ಕಾರಣವಲ್ಲ, ಸ್ವಭಾವ ಮಾತ್ರ" ಎಂಬುಕ್ತಿಯಂತೆ ಬಸವರಸನು ಅಸಾಮಾನ್ಯ ಪ್ರಶ್ನೆಗಳನ್ನು ಹಾಕುತ್ತಿದ್ದ. ವಿದ್ಯಾಭ್ಯಾಸ ಪಡೆಯಲು ಅಗ್ರಹಾರದ ಮಕ್ಕಳಷ್ಟೇ ಬರುತ್ತಿದ್ದುದು, ಅವನೆದುರು ಓಡಾಡುವ ತನ್ನದೇ ವಯಸ್ಸಿನ ಇನ್ನಿತರ ಜಾತಿಯ ಮಕ್ಕಳು ಬರದಿದ್ದುದು ಬಾಲಕನಿಗೆ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಬನ್ನಿ ನಿಮಗೆಲ್ಲ, ನಾ ಹೇಳಿಕೊಡುವೆ" ಎಂದು ಹೋದರೆ ಆ ಬಾಲಕರು ಹೆದರಿ "ನಮಗೇತಕ್ಕೆ ಅಯ್ಯಾ ಅದೆಲ್ಲ ...." ಎಂದು ಹಾವು ತುಳಿದವರಂತೆ ಬೆಚ್ಚಿ ಓಡುತ್ತಿದ್ದುದು ಬಸವರಸನನ್ನು ಗಂಭೀರ ಆಲೋಚನೆಗೆ ಈಡುಮಾಡುತ್ತಿತ್ತು.

ಒಂದು ದಿವಸ ಅಂಗಳದಲ್ಲಿ ಮರಳಿನ ಮೇಲೆ ಬರೆಯುತ್ತ ಬಾಲಕ ಬಸವರಸ ಕುಳಿತಿ

ದ್ದಾಗ, ಸಮಗಾರ ಕೇತ ಮೆಟ್ಟುಗಳನ್ನು ತಂದ. ಇವನದೇ ವಯಸ್ಸು ಅವನಿಗೂ—

"ಅಮ್ಮಯ್ಯ ಮೆಟ್ಟು ಹೊಲಿದು ತಂದಿದ್ದೇನೆ...." ಕೂಗಿದನವನು.

"ಬಸೂ...ಅವನ್ನು ಹಿತ್ತಲಲ್ಲಿ ಬಿಡಲು ಹೇಳೋ, ಆ ಮೇಲೆ ಸಗಣಿ ನೀರು ಹಾಕಿ ತೆಗೆದುಕೊಳ್ಳೋಣ. ಎಲ್ಲಿಯಾದರೂ ಮುಟ್ಟೀಯಾ ಜೋಕೆ ?"

ಬಾಲಕನ ಕುತೂಹಲ ಕೆರಳಿತು.

"ಏಕಮ್ಮಾ, ಮುಟ್ಟಬಾರದು ?"

"ಅವರು ಹೊಲೆಯರಪ್ಪ, ತುಂಬಾ ಕೀಳು..."

"ಮುಟ್ಟಿಸಿಕೊಂಡರೆ ಏನಾಗುತ್ತೆ..."

"ಮೈಲಿಗೆ ಆಗುತ್ತೆ..."

"ಹಾಗಾದರೆ ಅವನು ಹೊಲೆದುಕೊಟ್ಟ ಮೆಟ್ಟು ಮೆಟ್ಟದರೆ ಮೈಲಿಗೆಯಲ್ಲವೋ ?"

"ತಲೆಹರಟೆ, ಸುಮ್ನಿರು..."

"ಹೇಳಮ್ಮ, ನಾನು ಮುಟ್ಟಸ್ಕೋತೀನಿ, ಏನಾಗುತ್ತೆ ?"

"ಬೇಡ್ವೊ, ಮುಟ್ಟಿಸಿಕೊಂಡರೆ ದೇವರು ಸಿಟ್ಟಾಗ್ತಾನೆ..."

"ನನ್ನಂಗೇ ಇರೋ ಇನ್ನೊಬ್ಬ ಮನುಷ್ಯನನ್ನು ಮುಟ್ಟಿಸಿಕೊಂಡರೆ ದೇವರು ಸಿಟ್ಟಾಗೋದಾದರೆ ಅವನು ತುಂಬಾ ಕೆಟ್ಟವನಿರಬೇಕು. ಅಯ್ಯೋ ಅವನ್ನ ಒಳ್ಳೇವನು ಅಂತ ತಿಳ್ಕಿದ್ದೆ ನಾನು..."

"ಬಸವಾ...ಸಾಕಿನ್ನು ಮಾತು...ನಡೆ ನಡೆ..."

"ಅವರೇಕಮ್ಮ ಕೀಳು ? ನನ್ನಂಗೆ ಅವಂಗೂ ಕಿವಿ, ಮೂಗು, ಕಣ್ಣು, ದೇಹ ಇಲ್ಲವಾ ?"

"ಅವರು ಮಾಂಸ ತಿನ್ತಾರಪ್ಪ, ನಿನಗೆ ತಿಳಿಯೋಲ್ಲ..."

"ಮಾಂಸ ತಿನ್ನೋರೆಲ್ಲ ಕೆಟ್ಟವರಾದರೆ ಬೆಕ್ಕು ಇಲಿಗಳನ್ನು ತಿನ್ನುತ್ತಲ್ಲ ಅದನ್ನೇಕೆ ಮುಟ್ಟಸ್ಕೊತೀಯಾ. ಮುಟ್ಟಿಸಿಕೊಂಡರೆ ನನಗೂ ಬೈಯಲ್ಲ..."

"ನಿನ್ನ ತಲೆಹರಟೆ ಅತಿಯಾಯ್ತು. ಒದ್ಕೋ ನಡೆ..." ಮಾದಲಾಂಬಿಕೆ ತಲೆಗೆ ಪೆಟ್ಟು ಕೊಟ್ಟು ಕಳಿಸಿದಳೇನೋ ನಿಜ. ಆದರೆ ಬಸವರಸ ಗಂಭೀರನಾಗಿ, ಅಂತರ್ಮುಖಿಯಾಗಿ ಕುಳಿತು ಚಿಂತಿಸತೊಡಗಿದ್ದ. ಪುಟ್ಟ ಮೆದುಳಿನಲ್ಲಿ ಭಯಾನಕ ವಿಚಾರ ತರಂಗಗಳು ಏಳುತ್ತಿದ್ದವು.

(ಸಶೇಷ)

❋ ❋ ❋

ಹೊಟ್ಟೆಗೆ ಆಹಾರವನ್ನು ಕೊಟ್ಟರೆ ಯಾರು ವಶರಾಗಲಿಕ್ಕಿಲ್ಲ ಮೃದಂಗದ ಮುಖಕ್ಕೆ ರಸಾಯನ ಹಚ್ಚಿದರೆ ಅದು ತಾನಾಗಿಯೇ ಮಧುರ ಧ್ವನಿ ಗೈಯುವುದು —ಭರ್ತೃಹರಿ

ಜಲಿಯನ್ ವಾಲಾಬಾಗ್ ದುರಂತ

ಷಡಕ್ಷರಿ

ಏಪ್ರಿಲ್ ೧೩, ೧೯೧೯, ವೈಶಾಖಿ ಉತ್ಸವದ ಸಾಂಪ್ರದಾಯಿಕ ಸಡಗರ. ಮೇಲೆ ಕ್ರಾಂತಿಯ ಹುಮ್ಮಸ್ಸು, 'ಅಮೃತಸರ'ದ ವಾತಾವರಣ, ಏನೋ ಪ್ರವಿತ್ರ ನಿಗೂಢತೆಯಿಂದ ಆವರಿಸಿದೆ. ಸಣ್ಣ ಸಣ್ಣ ಮಕ್ಕಳೂ ಗುಣುಗುಣಿಸುತ್ತಿದ್ದಾರೆ :

"ಚಲೊ, ಚಲಿಯೇ ದೇಶ್ಕು ಯುದ್ಧ ಕರನ್, ಎ, ಹೋ, ಅಖಿರಿ
ನಚನ್ ತೆ ಫರ್ಮಾನ್ ಹೋಗಯೆ."
"ಬನ್ನಿ ನಮ್ಮನ್ನು ಸೇರಿ, ಸ್ವಾತಂತ್ರ್ಯ ಸಮರಕ್ಕೆ ಹೋಗೋಣ ;
ಕಾಲ ಕಳೆಯಲೇಕೆ, ಕಡೆಯ ಆಜ್ಞೆಯಾಯಿತು ! ಹೊರಡೋಣ !"

ಜನರು ತಂಡ ತಂಡವಾಗಿ, ಗಂಡಸರು, ಹೆಂಗಸರು, ಮಕ್ಕಳೆನ್ನದೆ, ಜಲಿಯನ್ ವಾಲಾಬಾಗ್ ಕಡೆ ಸಾಗುತ್ತಿದ್ದಾರೆ. ಸಂಜೆಯ ಸಭೆಗಾಗಿ, ಕಾತರ ಕಳವಳ ಹುಮ್ಮಸ್ಸು. ಹೆಚ್ಚಿನ ಜನಕ್ಕೆ ಅಂದಿನ ಸಭೆಯನ್ನು ನಿಷೇಧಿಸಲಾಗಿದೆ ಎಂಬುದೂ ತಿಳಿದಿಲ್ಲ. ತಿಳಿದ ಕೆಲವರೂ,

"ಬೀಳಲಿ ಮೈ ನೆತ್ತರು ಕಾರಿ
ಹೋದರೆ ಹೋಗಲಿ ತಲೆಹಾರಿ
ತಾಯ್ನಾಡಿನ ಮೇಲ್ಮೆಗೆ ಹೋರಿ
ಸ್ವಾತಂತ್ರ್ಯ ಸ್ವರ್ಗಕೆ ಏರಿ." (ಕುವೆಂಪು)

ಎಂದು ಸವಾಲೆಸೆದು ಬಾಗಿನಕಡೆ ಸಾಗುತ್ತಿದ್ದಾರೆ. ನಗರದ ಹೃದಯಸ್ಥಾನದಲ್ಲಿದ್ದ ಜಲಿಯನ್ ವಾಲಾಬಾಗ್, ಸುತ್ತಲೂ ಗೋಡೆಗಳಿಂದ ಆವೃತ್ತವಾಗಿ, ಒಂದು ಕಡೆ ಕಿಷ್ಕಿಂಧೆಯಂತ ಪ್ರವೇಶದ್ವಾರವನ್ನು ಹೊಂದಿತ್ತು. ಸಭೆಯು ಪ್ರಾರಂಭವಾಗುವ ವೇಳೆಗೆ ೨೫,೦೦೦ದಷ್ಟು ಜನರು ಸೇರಿದ್ದರು. ಸಭೆ ಶಾಂತವಾಗಿತ್ತು. ರೌಲೆಟ್ ಕಾಯ್ದೆಯನ್ನು ಪ್ರತಿಭಟಿಸಿ ಮೆರವಣಿಗೆ ಹೊರಟಿದ್ದ ಶಾಂತಿಯುತ ಪ್ರದರ್ಶನಕಾರರ ಮೇಲೆ–ಸರ್ಕಾರ ಗೋಲಿಬಾರ್ ಮಾಡಿದ್ದುದು ಮತ್ತು ಸ್ಥಳೀಯ ಜನಪ್ರಿಯ ಮುಖಂಡರಾದ, ಡಾ|| ಸತ್ಯಪಾಲ್ ಮತ್ತು ಡಾ|| ಕಿಚೆಲ್‌ರನ್ನು ಬಂಧಿಸಿ ಅಜ್ಞಾತ ಸ್ಥಳಕ್ಕೆ ರವಾನಿಸಿದ್ದುದು, ಜನತೆಯನ್ನು ಕೆರಳಿಸಿತ್ತು. ಈ ಸಂಬಂಧದಲ್ಲಿ ಸರ್ಕಾರವನ್ನು ಖಂಡಿಸಲಿಕ್ಕಾಗಿ, ಆ ಸಭೆ ಸೇರಿತ್ತು.

'ವಂದೇ ಮಾತರಂ' ಪ್ರಾರ್ಥನೆಯಿಂದ ಸಭೆ ಪ್ರಾರಂಭವಾಯಿತು. ಆದರೆ....ಅಷ್ಟರಲ್ಲಿ

ಪ್ರವೇಶ ದ್ವಾರದಲ್ಲಿ ಪೋಲೀಸರ ಬೂಟುಕಾಲಿನ ಸಪ್ಪಳವಾಯಿತು. ದಿಙ್ಮೂಢರಾದ ಜನತೆ, ಪರಿಸ್ಥಿತಿ ಏನೆಂದು ತಿಳಿದುಕೊಳ್ಳುವುದರಲ್ಲೇ ಗೋಲಿಬಾರ್‌ಗೆ ಆಜ್ಞೆಯಾಯಿತು. ಸುತ್ತಲೂ ಎತ್ತರವಾದ ಗೋಡೆಗಳು, ಒಂದೇ ಪ್ರವೇಶದ್ವಾರ, ಅಲ್ಲಿ ಯಮದೂತರು. ಬೆಂಕಿಯುಗುಳುವ ಬಂದೂಕುಗಳು. ಮಾರಣ ಹೋಮ ನಡೆಯಿತು. ಭಾರತದ ಇತಿಹಾಸದಲ್ಲಿ ರಕ್ತಾಕ್ಷರಗಳಿಂದ ಬರಿದಿಡಬೇಕಾದಂತ ದಿನವಾಗಿ ಅಂದಿನ ವೈಶಾಖಿ ಮಹೋತ್ಸವ ಪರಿವರ್ತನೆಗೊಂಡಿತು.

ಅಂದಿನ ಘಟನೆಯ ಬಗ್ಗೆ ಲಾಲಾಲಜಪತರಾಯ್ ಹೀಗೆ ಹೇಳುತ್ತಾರೆ: "1919ರ ಪಂಜಾಬ್ ದುರಂತವೆಂದರೆ ಇತಿಹಾಸ ಪ್ರಸಿದ್ಧವೂ, ಪ್ರಮುಖವೂ ಆದ ಪ್ರಕರಣ; ಪ್ರಪಂಚದ ಇತಿಹಾಸದ ಒಂದು ಅಧ್ಯಾಯ; ಮುಂದಿನ ತಲೆಮಾರು ತಲೆಮಾರುಗಳ ಗಂಡಸರೂ, ಹೆಂಗಸರೂ ಓದಿದಾಗಲೆಲ್ಲಾ ನವನವತೆಯಿಂದ ಕಂಡುಬರುವ ಅಧ್ಯಾಯ. ಸಾಮ್ರಾಜ್ಯಷಾಹಿಯು ಉನ್ಮತ್ತಾವಸ್ಥೆ ಮುಟ್ಟಿದಾಗ ಎಂತಹ ಕಿರಾತರ ಮಟ್ಟವನ್ನು ಮುಟ್ಟಬಹುದೆಂಬುದನ್ನರಿತು ಭಾವಿಸಲು ಇದು ನಮಗೆ ಸಹಾಯಕವಾಗಿದೆ।"

ಅಂದಿನ ಘಟನೆ ಕೇವಲ ಅಂದಿನ ಬೆಳವಣಿಗೆ ಮಾತ್ರವಾಗಿರಲಿಲ್ಲ. ಅದಕ್ಕೆ ದೀರ್ಘ ಹಿನ್ನೆಲೆಯೂ ಇತ್ತು. ಅಂದು ದೇಶದಲ್ಲಿ ಎಲ್ಲೆಲ್ಲೂ ಬೆಂಕಿ ಹತ್ತಿ ಉರಿಯುತ್ತಿತ್ತು. ಬ್ರಿಟೀಷರ ಗುಲಾಮಗಿರಿಯ ಬದುಕಿಗಿಂತಲೂ ಸ್ವಾತಂತ್ರ್ಯದೇವಿಯ ಪಾದಗಳಲ್ಲಿ ಹೋರಾಡುತ್ತಾ ಮಡಿಯುವುದು ಶ್ರೇಯಸ್ಕರವೆಂದು ಅಂದಿನ ಯುವಕರ ಭಾವನೆಯಾಗಿತ್ತು.

ದಾಸ್ಯ! ಸಹಿಸಲಸಾಧ್ಯವಾದುದೀ ದಾಸ್ಯ.
ನೊಂದು ಇಹವ ಬಿಡುತ್ತಿದ್ದೇನೆ.
ಅಮರ ಸ್ವರ್ಗಧಾಮ ಸೇರುತ್ತಿದ್ದೇನೆ.

ಇದು ಗಲ್ಲಿಗೇರ ಹೊರಟ ಪ್ರತಿಯೊಬ್ಬ ಕ್ರಾಂತಿಕಾರಿಯ ಅಂತಿಮ ನುಡಿಗಳಾಗಿದ್ದವು.

ಪಂಜಾಬ್ ಅಂದು ಕ್ರಾಂತಿಕಾರರ ತವರುಮನೆಯಾಗಿತ್ತು. ಪಂಜಾಬಿನ ಬಹುಪಾಲು ಯುವಕರು, ಮೊದಲ ಮಹಾಯುದ್ಧದಲ್ಲಿ ಭಾಗವಹಿಸಿ, ಆ ಅನುಭವದಿಂದ ಮರಳಿದ್ದರು. ಸಾಮ, ದಾನ, ಭೇದ, ದಂಡಗಳಿಂದ, ಗವರ್ನರ್, ಸರ್‌ಮೈಕೇಲ್ ಓಡ್ವಯರ್‌ನು, ಜನರನ್ನು ಸೈನ್ಯಕ್ಕೆ ಭರ್ತಿಮಾಡಿದ್ದ. ಆದರೆ ಯುದ್ಧಾನುಭವದ ಆ ತರುಣರೇ ಮುಂದೆ ಕ್ರಾಂತಿಯ ಕಿಡಿ ಹೊತ್ತಿಸಿದರು. ಪಂಜಾಬಿನ ಪ್ರತಿಯೊಬ್ಬ ಪ್ರಜೆಯೂ ಕ್ರಾಂತಿಕಾರಿಯಾಗಿದ್ದ., ಹಲವಾರು ಪಿತೂರಿ ಮೊಕದ್ದಮೆಗಳಲ್ಲಿ ವಿಚಾರಣೆಯಾಗಿ, ನೂರಾರು ಮಂದಿ ದೇಶಭಕ್ತರನ್ನು ಬ್ರಿಟಿಷರು ಗಲ್ಲಿಗೇರಿಸಿದರು. ಗಲ್ಲಿಗೇರಿದ ವೀರನೊಬ್ಬೊಬ್ಬನೂ ಪಂಜಾಬಿಗಳ ಮನೆ ಮನೆಯಲ್ಲಿ ವೀರನಾದ! ಮನೆ ಮನೆಯಲ್ಲಿ ವೀರಪೂಜೆ ಮೊದಲಾಯಿತು. ಯಾವುದೇ ಚಳವಳಿ_ಸತ್ಯಾಗ್ರಹ, ತನ್ನದೇ ಆದ ವಿಶಿಷ್ಟ

ರೂಪವನ್ನು ಪಂಜಾಬಿನಲ್ಲಿ ಪಡೆಯುತ್ತಿತ್ತು. ದೇಶದ ಬೇರೆಕಡೆ ಚಳವಳಿಯ ಕಾವು ತಗ್ಗಿದರೂ, ಪಂಜಾಬ್‌ನಲ್ಲಿ ಕಿಡಿ ಪ್ರಜ್ವಲಿಸುತ್ತಲೇ ಇತ್ತು. ಅಫ್ಘಾನಿಸ್ತಾನಕ್ಕೆ ಹತ್ತಿರದಲ್ಲಿದ್ದು, ಗಡಿ ಪ್ರದೇಶವಾಗಿದ್ದ ಪಂಜಾಬ್‌ನಲ್ಲಾಗುತ್ತಿದ್ದ ಬೆಳವಣಿಗೆಯಿಂದ ಬ್ರಿಟಿಷರು ಚಿಂತಿತರಾಗಿದ್ದರು.

ಈ ಸಮಯದಲ್ಲಿ ಪಕ್ಷಪಾತಪೂರಿತವಾಗಿದ್ದ ರೌಲೆಟ್ ಕಾಯ್ದೆ ಜಾರಿಗೆ ಬಂದಿತು. ಅದನ್ನು ಪ್ರತಿಭಟಿಸಲು ದೇಶದಾದ್ಯಂತ ಸತ್ಯಾಗ್ರಹ ಮೊದಲಾಯಿತು. ಪಂಜಾಬ್‌ನಲ್ಲಂತೂ ಅದು ತೀವ್ರ ರೂಪ ತಾಳಿತ್ತು. 'ಅಮೃತಸರ'ದಲ್ಲೂ ಇತರೆಡೆಯಂತೆ ಸತ್ಯಾಗ್ರಹ ನಡೆಯುತ್ತಿತ್ತು. ಸರ್ಕಾರ ಚಳವಳಿಯನ್ನು ಮಟ್ಟಹಾಕಲು, ಸ್ಥಳೀಯ ಜನಪ್ರಿಯ ಮುಖಂಡರುಗಳನ್ನು ಬಂಧಿಸಿ ಅಜ್ಞಾತ ಸ್ಥಳಕ್ಕೆ ಸಾಗಿಸಿತು, ಜನತೆ ಇದರಿಂದ ಕೆರಳಿತು. ಏಪ್ರಿಲ್ ೯, ರಾಮನವಮಿಯಂದು ಹಿಂದೂ-ಮುಸ್ಲಿಂರು ಜೊತೆ_ಜೊತೆಯಾಗಿ ಹಬ್ಬದ ಸಂಭ್ರಮದ ಜೊತೆಗೆ ಸತ್ಯಾಗ್ರಹವನ್ನೂ ಆಚರಿಸಿದರು. ಏಪ್ರಿಲ್ ೧೦ರಂದು ನಗರದ ಬೀದಿಗಳಲ್ಲಿ ಬೃಹತ್ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಮೆರವಣಿಗೆಯ ಮೇಲೆ ಗೋಲಿಬಾರ್ ಮಾಡಲಾಯಿತು. ಜನತೆ ತಾಳ್ಮೆ ತಪ್ಪಿ, ಅಮೃತಸರದ ಪುರಭವನ, ಪೋಸ್ಟ್ ಆಫೀಸುಗಳಿಗೆ ಬೆಂಕಿ ಇಟ್ಟಿತು. ಸಂಪರ್ಕ ಸಾಧನಗಳನ್ನು ಧ್ವಂಸಮಾಡಿತು. ಆಗ ಕೆಲವು ಯೂರೋಪಿಯನ್ನರಿಗೂ, ಇಬ್ಬರು ಇಂಗ್ಲಿಷ್ ಮಹಿಳೆಯರಿಗೂ ಗಾಯಗಳಾದವು. ಪರಿಸ್ಥಿತಿಯನ್ನು ಹತೋಟಿಯಲ್ಲಿಡುವ ನೆಪದಲ್ಲಿ, ನಗರದ ಆಡಳಿತವನ್ನು ಮಿಲಿಟರಿಯವರಿಗೆ ವಹಿಸಲಾಯಿತು.

ಜನರಲ್ ಡೈಯರ್ ಆಗ ಜಲಂಧರ ವಿಭಾಗದ ಮೇಲ್ವಿಚಾರಕನಾಗಿದ್ದ. ಆತ ಅಮೃತಸರಕ್ಕೆ ಏಪ್ರಿಲ್ ೧೧ರಂದು ಆಗಮಿಸಿ, ಅಧಿಕಾರವನ್ನು ವಹಿಸಿಕೊಂಡ.

ಏಪ್ರಿಲ್ ೧೩ರಂದು, 'ಜಲಿಯನ್ ವಾಲಾಬಾಗ್' ಮೈದಾನದಲ್ಲಿ ಸಭೆ ಸೇರುವ ವಿಚಾರ ತಿಳಿದು, ಡೈಯರ ಆ ಸಭೆಯನ್ನು ನಿಷೇಧಿಸಿದ. ಆದರೆ ಆ ಆಜ್ಞೆಯನ್ನು ಸರಿಯಾದ ರೀತಿಯಲ್ಲಿ ಪ್ರಚುರಪಡಿಸಲಿಲ್ಲ. ಬಹುಪಾಲು ಜನತೆಗೆ ಆ ನಿಷೇಧಾಜ್ಞೆ ಗೊತ್ತೇ ಇರಲಿಲ್ಲ. ಗೊತ್ತಿದ್ದ ಕೆಲವರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

ಸಭೆ ಸೇರಿರುವ ವಿಚಾರ ತಿಳಿದ ಕೂಡಲೇ, ಜನರಲ್ ಡೈಯರ್ ನೂರು ಜನ ಭಾರತೀಯ ಮತ್ತು ಐವತ್ತು ಯೂರೋಪಿಯನ್ ಸೈನಿಕರೊಡನೆ, ಆ ಸ್ಥಳವನ್ನು ತಲುಪಿದ. ಅಂದು ಸಭೆ ಶಾಂತಿಯುತವಾಗಿತ್ತು. ಹೆಂಗಸರು ಮಕ್ಕಳೂ ಬಹಳ ಮಂದಿ ಇದ್ದರು. ಆದರೆ ಡೈಯರ್ ಕೇವಲ ಮೂವತ್ತು ಸೆಕೆಂಡುಗಳಷ್ಟು ಕಾಲವೂ ಯೋಚನೆ ಮಾಡಲಿಲ್ಲ. ಜನರಿಗೆ ಚದುರುವಂತೆ ಆಜ್ಞೆಯನ್ನೂ ಸಹ ಮಾಡಲಿಲ್ಲ. ಸಿಪಾಯಿಗಳಿಗೆ ಗುಂಡಿನ ಮಳೆಗರೆಯಲು ಆಜ್ಞೆಮಾಡಿದ. ನೂರೈವತ್ತು ಮಂದಿ ಸೈನಿಕರು ೩೦೩ ಮಾಡೆಲ್ ನಂಬರಿನ ಬಂದೂಕಿನಿಂದ ೧೬೫೦ ಸುತ್ತು ಗುಂಡು ಹಾರಿಸಿದರು. ಗುಂಡಿನ ದಾಳಿಯಿಂದ

ತಪ್ಪಿಸಿಕೊಳ್ಳಲು ಜನತೆಗೆ ಅವಕಾಶವೇ ಸಿಗಲಿಲ್ಲ. ಸುತ್ತಲೂ ಎತ್ತರವಾದ ಗೋಡೆ. ಇದ್ದ ಒಂದೇ ಪ್ರವೇಶದ್ವಾರದಲ್ಲಿ ಯಮದೂತರು. ಸುತ್ತಲಿದ್ದ ಮನೆಗಳವರು, ತಮ್ಮ ತಮ್ಮ ಮನೆಗಳ ಮಾಡಿನ ಮೇಲಿನಿಂದ ಹಗ್ಗ-ಸರಪಳಿಗಳನ್ನು ಇಳಿಯಬಿಟ್ಟರು, ಜನರು, ತಪ್ಪಿಸಿಕೊಳ್ಳಲೆಂದು. ಕೆಲವರು ಮರಗಳನ್ನೇರಿದರು. ಆದರೆ ಸೈನಿಕರ ಗುಂಡುಗಳು ಅವರನ್ನೆ ನಿರ್ದೇಶಿಸಿ ಬೀಳತೊಡಗಿದವು. ಸೈನಿಕರ ಹತ್ತಿರವಿದ್ದ ಎಲ್ಲಾ ಗುಂಡುಗಳೂ ಮುಗಿದುಹೋದ ನಂತರವೇ ಡೈಯರ್‌ನಿಗೆ ತೃಪ್ತಿ ಸಿಕ್ಕಿತು.

ಸರ್ಕಾರಿ ವರದಿಗಳಂತೆ ೩೭೦ ಮಂದಿ ಸತ್ತು ೧,೧೩೭ ಮಂದಿ ಗಾಯಗೊಂಡರು. ಆದರೆ ನಿಜಸಂಖ್ಯೆ ಇದಕ್ಕಿಂತ ಮಿಗಿಲಾಗಿತ್ತು. ಸುತ್ತಲಿನ ಮನೆಗಳ-ಗೋಡೆಗಳ ಮೇಲೆಲ್ಲ ಗುಂಡಿನ ಗುರುತುಗಳು. ಮೈದಾನದ ತುಂಬೆಲ್ಲಾ ಶವಗಳು. ರಕ್ತದ ಕಾಲುವೆ.

ಅಮೃತಸರ ಮತ್ತು ಸುತ್ತಲಿನ ಪಟ್ಟಣಗಳಲ್ಲಿ 'ಮಾರ್ಷಲ್ ಲಾ'ವನ್ನು ಜಾರಿಗೆ ತರಲಾಯಿತು. ಸುದ್ದಿಗಳು ಹರಡದಂತೆ, ಸೆನ್ಸಾರ್‌ಷಿಪ್ ವಿಧಿಸಲಾಯಿತು. ಜನರು ಮನೆಯೊಳಗಿಂದ ಈಚೆ ಬಂದರೆ ಗುಂಡೇಟು ಎಂಬ ಸೂತ್ರವನ್ನು ಅನುಸರಿಸಲಾಯಿತು. ಅಗತ್ಯ ಕೆಲಸವಿದ್ದರೆ, ಚತುಷ್ಪಾದಿಯಂತೆ ತೆವಳಿಕೊಂಡು ಬರಬೇಕು. ತೆವಳಿಕೊಂಡು ಹೋಗಬೇಕು ಎಂದು ವಿಧಿಸಲಾಯಿತು.

ಸುದ್ದಿ ತಡವಾಗಿಯಾದರೂ ದೇಶದ ಎಲ್ಲೆಡೆ ತಲುಪಿ, ದೇಶದಾದ್ಯಂತ ಚಳವಳಿಗೆ ಮೊದಲಾಯಿತು. ರವೀಂದ್ರನಾಥ ಟಾಗೋರರು ತಮ್ಮ ನೈಟ್‌ಹುಡ್ ಪದವಿಯನ್ನು ತ್ಯಜಿಸಿ, ಪ್ರತಿಭಟನೆ ವ್ಯಕ್ತಪಡಿಸಿದರು. ಜನತೆಯ ಒತ್ತಾಯದ ಮೇರೆಗೆ ಸರ್ಕಾರ ನೇಮಿಸಿದ್ದ ಹಂಟರ್ ಸಮಿತಿಯು, ಘಟನೆಗಳನ್ನು ಆದಷ್ಟು ಸರಳಗೊಳಿಸಿ ತಿಪ್ಪೆ ಸಾರಿಸಲು ಯತ್ನಿಸಿತು. "ಡೈಯರ್ ನಿಷ್ಠೆಯಿಂದ, ತಪ್ಪಾಗಿ ತಿಳಿದುಕೊಂಡು, ಈ ಕರ್ತವ್ಯವನ್ನು ನಿರ್ವಹಿಸಿದ" ಎಂದು ಸಮಿತಿ ಅಭಿಪ್ರಾಯಪಟ್ಟಿತು.

ಇಂಗ್ಲೆಂಡಿನ ಲಾರ್ಡ್ಸ್ ಸಭೆಯಲ್ಲಿ ಜನರಲ್ ಡೈಯರನ ಕಾರ್ಯವನ್ನು ಮುಕ್ತಕಂಠದಿಂದ ಹೊಗಳಲಾಯಿತು. ಆತನಿಗೆ ಆತ ತೋರಿದ ರಾಜಭಕ್ತಿಗಾಗಿ, ಒಂದು ಖಡ್ಗ, ೩,೦೦೦ ಪೌಂಡ್ ಹಣವನ್ನು ಬಹುಮಾನವಾಗಿ ನೀಡಲಾಯಿತು.

"ಪಂಜಾಬ್‌ನಲ್ಲಿ ಮತ್ತು ಹೊರಗಡೆ ಮತ್ತೆಂದೂ ಪ್ರತಿಭಟನೆಯ ಸೊಲ್ಲೂ ಹೇಳದಿರಲಿ ಎಂದು ಗುಂಡಿಕ್ಕಲು ಆಜ್ಞೆ ಮಾಡಿದೆ" ಎಂದು ಜನರಲ್ ಡೈಯರ್ ಜಂಭದಿಂದ ಹೇಳಿಕೆ ಕೊಟ್ಟ."

ರಾಷ್ಟ್ರೀಯ ಕಾಂಗ್ರೆಸ್ ನೇಮಿಸಿದ್ದ ಸಮಿತಿಯು, "ಜನರಲ್ ಡೈಯರನು ಈ ಮಾರಣ ಹೋಮಕ್ಕೆ ಪೂರ್ಣ ಕಾರಣಕರ್ತನಾಗಿದ್ದಾನೆ. ಈ ಅಪರಾಧಿಗೆ ಶಿಕ್ಷೆ ವಿಧಿಸಿ" ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿತು. ಆದರೆ ಸರ್ಕಾರ ಈ ವರದಿಗೆ ಯಾವುದೇ ಬೆಲೆ

(೫೭ನೇ ಪುಟ ನೋಡಿ)

ದಾಂಪತ್ಯ ಧರ್ಮ

ಸಂಗ್ರಹ: ದ್ವಾರಕನಾಥ, ಹೆಚ್. ಆರ್.

ಶರಣ ಹರ್ಡೇಕರ್ ಮಂಜಪ್ಪನವರ ಕೆಲವು ವಿಚಾರಗಳು ವಿವಾಹ ಧರ್ಮವನ್ನು ಕುರಿತು

[ಶರಣ ಹರ್ಡೇಕರ್ ಮಂಜಪ್ಪನವರು ಕರ್ನಾಟಕ ಗಾಂಧಿಯೆಂದು ಹೆಸರಾಗಿರುವ ಮಹಿಮಾನ್ವಿತರು. ಅವರು ಸ್ವಾತಂತ್ರ್ಯ ಹೋರಾಟಗಾರರು, ದಾಸೋಹಂ ಭಾವಿಗಳು, ಕ್ರಾಂತಿಪುರುಷರು. ತಮ್ಮ ವಿಚಾರ ಮತ್ತು ಕೃತಿಗಳಲ್ಲಿ ಅವರು ರಾಷ್ಟ್ರಧರ್ಮವನ್ನು ರೂಪಿಸಿದರು, ಜನತೆಗೆ ಮಾರ್ಗದರ್ಶನ ಮಾಡಿದರು. ಅಂತಹ ಕೆಲವು ವಿಚಾರಗಳನ್ನು "ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ್ ಮಂಜಪ್ಪ" ಎಂಬ ಕೃತಿಯಿಂದ ಶ್ರೀ ದ್ವಾರಕನಾಥರು ಸಂಗ್ರಹಿಸಿರುವುದನ್ನು ಇಲ್ಲಿ ಪ್ರಕಟಿಸಲಾಗಿದೆ. ಸಂಪಾದಕರು]

ಈ ಜಗತ್ತಿನ ಅಸಂಖ್ಯ ಪ್ರಾಣಿಗಳಲ್ಲಿ ಮನುಷ್ಯನೂ ಒಂದು ವಿಧವಾದ ಪ್ರಾಣಿಯು. ಆನೆ, ಚಿಗರೆ, ಕುರಿ ಮೊದಲಾದ ಅನೇಕ ಪ್ರಾಣಿಗಳು ಹೇಗೆ ಹಿಂಡು ಕಟ್ಟಿಕೊಂಡಿರುತ್ತವೆಯೋ ಹಾಗೆಯೇ ಮನುಷ್ಯರೂ ಸಮಾಜ ಕಟ್ಟಿಕೊಂಡಿರುವರು. ಮನುಷ್ಯನು ಒಂಟಿಗನಾಗಿಯೇ ಜೀವಿಸುವವನಲ್ಲ. ಅಂತೆಯೇ ಒಂಟಿಗನಾಗಿ ಜೀವಿಸುವವನು ದೇವನಿರಬೇಕು ; ಇಲ್ಲವೇ ದೆವ್ವನಾಗಿರಬೇಕೆಂದು ಒಬ್ಬ ಪಂಡಿತನು ಹೇಳಿದ್ದಾನೆ.

ಮನುಷ್ಯನು ಸಮಾಜಪ್ರಿಯ ಪ್ರಾಣಿಯೆಂದೇ ತಿಳಿಯುವುದು ವಿಹಿತವಾಗಿದೆ. ಸಮಾಜಕ್ಕೆ ಕುಟುಂಬವೇ ಮೂಲ. ಅನೇಕ ಕುಟುಂಬಗಳು ಕೂಡಿದಾಗಲೇ ಒಂದು ಸಮಾಜವಾಗುತ್ತದೆ. ಕುಟುಂಬವೆಂಬ ಗಿಡಕ್ಕೆ ದಂಪತಿಗಳೇ ಬೀಜ. ದಂಪತಿಗಳಿಂದಲೇ ಕುಟುಂಬವಾಗಿ ಆ ಕುಟುಂಬಗಳಿಂದಲೇ ಸಮಾಜವಾಗುತ್ತದೆ. ಬೀಜವೆ ನೊಳೆತು ಸಸಿಯಾಗಿ ಬೆಳೆದು ಗಿಡವಾಗಿ, ಆಮೇಲೆ ಘನವಾದ ಮರವಾಗುವುದಿಲ್ಲವೆ ?

ದಂಪತಿಗಳೆಂದರೆ ಗಂಡ ಮತ್ತು ಹೆಂಡತಿ—ಇವರಿಬ್ಬರು ತಮ್ಮತಮ್ಮಲ್ಲಿ ಪ್ರೀತಿ-ವಿಶ್ವಾಸಗಳುಳ್ಳವರಾಗಿರಬೇಕು. ಅಂದರೇನೇ ಅವರು ಸುಖದಿಂದ ಕಾಲಕಳೆಯುವರು, ಮಕ್ಕಳನ್ನು ಹೆರುವರು ; ಕುಟುಂಬವು ಸುಖಶಾಂತಿಗಳಿಂದಿರುವುದು. ಅಂತಹ ಕುಟುಂಬಗಳಿಂದಲೇ ಸಮಾಜವೂ ದೇಶವೂ ಒಳ್ಳೆಯ ಸ್ಥಿತಿಗೆ ಬರುತ್ತವೆ. ಬೀಜವು ಒಳ್ಳೆಯದಿದ್ದರಲ್ಲವೇ ಮೊಳೆತು, ಸಸಿ ಬಲಿತು ಗಿಡವಾಗಿ ಬೆಳೆದು ಮರವಾಗಿ ಹೂವು ಕಾಯಿ, ಹಣ್ಣುಗಳನ್ನು

ಕೊಡುವುದು ?

ಗಂಡ ಮತ್ತು ಹೆಂಡತಿ ಇವರಿಬ್ಬರು ಒಬ್ಬರಲ್ಲೊಬ್ಬರು ಪ್ರೀತಿ ವಿಶ್ವಾಸಗಳುಳ್ಳವರಾಗಿರಬೇಕಾದರೆ ಅವರಲ್ಲಿ ಮಾನವತ್ವದ ಶೀಲ, ಗುಣ, ಸ್ವಭಾವಗಳಿರಬೇಕು. ಯಾರ ಗುಣ, ರೂಪ, ಲಕ್ಷಣಗಳು ಹೇಗಿದ್ದರೇನು ? ಎಂದು ಅವುಗಳನ್ನೆಲ್ಲಾ ಉಪೇಕ್ಷಿಸಲಿಕ್ಕಾಗುವುದಿಲ್ಲ. ನಾಲ್ಕಾರು ದಿವಸ ಯಾವುದಾದರೊಂದು ಪ್ರವಾಸಕ್ಕೆ ಹೋಗಬೇಕಾದರೇನೇ ಸಂಗಡಿಗರು ಒಳ್ಳೆಯವರಿರಬೇಕೆಂದು ಹೇಳುತ್ತೇವಲ್ಲವೇ ? ಕಳ್ಳರು, ಸುಳ್ಳರು, ಮೋಸಗಾರರು, ಜಗಳಗಂಟರು, ರೋಗಿಗಳು ಸಂಗಡ ಬರುತ್ತೇವೆಂದರೆ ಕರೆದುಕೊಂಡು ಹೋಗುವೆವೋ ? ಇಲ್ಲವೇ ಇಲ್ಲ. ಎಂದಮೇಲೆ ನಾಲ್ವತ್ತು ಅರವತ್ತು ವರುಷ ಕೂಡಿಕೊಂಡು ಈ ಸಂಸಾರಯಾತ್ರೆಯನ್ನು ನಡೆಯಿಸಬೇಕಾದ ದಂಪತಿಗಳಲ್ಲಿ ಗಂಡನಾಗಲಿ ಅಥವಾ ಹೆಂಡತಿಯಾಗಲಿ ಯಾರು ಹೇಗಿದ್ದರೇನೆಂದು ಉಪೇಕ್ಷಿಸಲಿಕ್ಕಾಗುವುದೇ ?

ಮನುಷ್ಯರೇನು ಪಶುಪಕ್ಷಿಗಳಂತೆ ಕೂಟಕಾರ್ಯದ ಮಟ್ಟಿಗೆ ಕೂಡಿ ಆಮೇಲೆ ಅಗಲಿ ಹೋಗುವರೆ ? ಮನುಷ್ಯನು ಕಾಡುಸ್ಥಿತಿಯಲ್ಲಿದ್ದಾಗ ಮಾತ್ರ ಹಾಗೆ ನಡೆದಿರಬಹುದು. ಏಕೆಂದರೆ, ಲಗ್ನವೇ ಇಲ್ಲದಿದ್ದಂತಹ ಕಾಲವೂ ಒಮ್ಮೆ ಇದ್ದಿತೆಂದು ತೋರುತ್ತದೆ. ಮಹಾಭಾರತದ ಆದಿಪರ್ವ ೧೨೨ನೆಯ ಅಧ್ಯಾಯದಲ್ಲಿ ಪಾಂಡುರಾಯನು ಕುಂತಿಗೆ ಹೀಗೆ ಹೇಳಿದನೆಂದು ಬರೆದಿದೆ : "ಉದ್ದಾಲಕನೆಂಬ ಋಷಿಗೆ, ಶ್ವೇತಕೇತು ಎಂಬ ಒಬ್ಬ ಮಗನಿದ್ದನು. ಒಂದು ದಿನ ಒಬ್ಬನು ಆತನ ತಾಯಿಯನ್ನು ಕರೆದುಕೊಂಡು ಹೋಗಲು ಮಗನು ಬಹು ಸಿಟ್ಟಾದನು. ಆಗ ಋಷಿಯು ಹೀಗೆ ಹೇಳಿದನು : 'ಮಗನೆ, ನೀನು ಹೀಗೆ ಕೋಪಿಸಬೇಡ. ಇದು ಸನಾತನಧರ್ಮ. ಎಲ್ಲಾ ಜಾತಿ ಸ್ತ್ರೀಯರಿಗೂ ಸಂಪೂರ್ಣ ಸ್ವಾತಂತ್ರ್ಯವಿದೆ. ಪಶುಗಳಂತೆ ಮನುಷ್ಯರು ಕೂಡ ಯಥೇಚ್ಛವಾಗಿ ಸಂಪರ್ಕ ಮಾಡುತ್ತಾರೆ.' ತಂದೆಯ ಈ ಅಭಿಪ್ರಾಯವು ಮಗನಿಗೆ ಯುಕ್ತವಾಗಿ ತೋರಲಿಲ್ಲ. ಆದುದರಿಂದ ಆತನು ವಿವಾಹಪದ್ಧತಿಯನ್ನು ಉಂಟುಮಾಡಿದನು."

ಮನುಷ್ಯ ಪ್ರಾಣಿಯ ಚರಿತ್ರೆಯಲ್ಲಿ ವಿವಾಹಪದ್ಧತಿಯೇ ಇಲ್ಲದಿದ್ದ ಕಾಲವೂ ಒಮ್ಮೆ ಕಳೆದುಹೋಗಿದೆಯೆಂದು ಮೇಲಿನ ಸಂಗತಿಯಿಂದ ಗೊತ್ತಾಗುವುದಿಲ್ಲವೇ? ಆಮೇಲೆ ವಿಷಯೋಪಭೋಗದ ಕ್ರಮಕ್ಕಾಗಿಯೇ ವಿವಾಹವು ಏರ್ಪಟ್ಟಿತು. ಅನಂತರ ಸಾವಿರಾರು ವರುಷಗಳಿಂದಲೂ ಅಸಂಖ್ಯರ ಅನುಭವಗಳ ಮೇಲಿಂದ ವಿವಾಹಪದ್ಧತಿಗಳಲ್ಲಿ ಸುಧಾರಣೆಗಳಾಗುತ್ತಲೇ ಬಂದಿವೆ. ಈಗಲೂ ಸುಧಾರಣೆಗಳಾಗಲೇಬೇಕು. ಇನ್ನು ಮುಂದೆಯೂ ಸುಧಾರಣೆಯಾಗುತ್ತಲೇ ಇರುವುದು.

ಈ ವಿವಾಹಪದ್ಧತಿಯೇ ದಂಪತಿಗಳ ಸುಖದುಃಖಗಳಿಗೆ ಬಹುಮಟ್ಟಿಗೆ ಕಾರಣವಾಗಿದೆ. ಸಮಾಜ ಮತ್ತು ರಾಷ್ಟ್ರಗಳ ಉನ್ನತಿಗಳಾದರೋ ದಂಪತಿಗಳ ಉನ್ನತಿಯ ಮೇಲೆಯೇ ಇವೆ. ಆದಕಾರಣ ಯಾವ ಜನಾಂಗದ ವಿವಾಹದ ಪದ್ಧತಿಯು ಎಷ್ಟು ನಿರ್ದೋಷವಾದು

ದಾಗಿರುತ್ತದೆಯೋ ಅಷ್ಟು ಜನಾಂಗವು ಒಳ್ಳೆಯ ಸ್ಥಿತಿಗೆ ಬರಲು ಸಹಾಯವಾಗುತ್ತದೆ.

ವಿವಾಹಪದ್ಧತಿಗೆ ಅದರ ಉದ್ದೇಶವೇ ಮೂಲವಾಗಿದೆ. ವಿವಾಹದ ಉದ್ದೇಶವು ಎಷ್ಟು ಪವಿತ್ರವೂ ವ್ಯಾಪಕವೂ ಆದುದಾಗಿರುತ್ತದೆಯೋ ಅಷ್ಟಕ್ಕೆ ತಕ್ಕಂತಹ ಪದ್ಧತಿಯೇ ಏರ್ಪಡುತ್ತದೆ. ಸಂಭೋಗಾಪೇಕ್ಷೆಯನ್ನು ಕ್ರಮಗೊಳಿಸುವುದೇ ವಿವಾಹದ ಉದ್ದೇಶವೆಂದು ತಿಳಿದರೆ ಗಂಡ ಹೆಂಡತಿಯರು ಪರಸ್ಪರ ಸಂಭೋಗದ ಉಪಕರಣಗಳಾಗಿಯೇ ಪರಿಣಮಿಸುವುದು ಸ್ವಾಭಾವಿಕ. ಎಂದಮೇಲೆ ಇಂತಹ ಎರಡು ಪ್ರಾಣಿಗಳನ್ನು ಜೊತೆಗೊಳಿಸುವುದೇ ವಿವಾಹದ ಪದ್ಧತಿಯಾಗುವುದಿಲ್ಲವೇ ? ಆದ ಕಾರಣ ವಿವಾಹದಲ್ಲಿ ಕೇವಲ ಇಂಥ ಕ್ಷುದ್ರ ಉದ್ದೇಶ ಮತ್ತು ಪದ್ಧತಿಗಳಿರುವುದು ವಿಹಿತವಲ್ಲ.

ಮನುಷ್ಯಪ್ರಾಣಿಯೆಂದರೆ ಅದೇನು ಕಾಮವಿಕಾರಗಳ ಮಾಂಸದ ಮುದ್ದೆಯೆ ? ಅಲ್ಲವೇ ಅಲ್ಲ ; ಕಾಮವಿಕಾರಶಮನದ ಸಂತೋಷಕ್ಕಿಂತಲೂ ಹೆಚ್ಚಿನದಾದ, ಬೌದ್ಧಿಕ ಮತ್ತು ಆತ್ಮೀಯ ಆನಂದಗಳನ್ನನುಭವಿಸುವ ಸಲಕರಣೆ ಮತ್ತು ಸಾಮರ್ಥ್ಯಗಳನ್ನು ಮನುಷ್ಯಪ್ರಾಣಿಯು ಮಾತ್ರವೇ ಹೊಂದಿದೆ. ಅಂತೆಯೇ ಬೌದ್ಧಿಕ ಮತ್ತು ಆತ್ಮೀಯ ಕಾರ್ಯಗಳಲ್ಲಿಯೇ ಮನ ಮಗ್ನವಾದಾಗ ಮನುಷ್ಯನಿಗೆ ಕಾಮವಿಕಾರಗಳ ಕಲ್ಪನೆಯು ಕೂಡ ಆಗುವುದಶಕ್ಯವಿಲ್ಲ. ಎಂದಮೇಲೆ ಮನುಷ್ಯನು ತನ್ನಲ್ಲಿರುವ ಬೌದ್ಧಿಕ ಮತ್ತು ಆತ್ಮೀಯ ಶಕ್ತಿಗಳನ್ನು ಹೆಚ್ಚಿಸಿಕೊಂಡು ಅವುಗಳಿಂದ ಉಂಟಾಗುವ ಆನಂದವನ್ನು ಅನುಭವಿಸಬೇಕಲ್ಲವೆ ? ಹಾಗೆ ಮಾಡದೆ ಕೇವಲ ವಿಷಯೋಪಭೋಗವೊಂದನ್ನೇ ಉದ್ದೇಶವಾಗಿಟ್ಟುಕೊಂಡರೆ ಪಶುಪಕ್ಷಿಗಳಿಗಿಂತ ಮನುಷ್ಯನ ಜೀವಿತವು ಹೆಚ್ಚು ಆನಂದಕರವಾಗಿ ಹೇಗೆತಾನೆ ಪರಿಣಮಿಸುವುದು ? ಆದಕಾರಣ ವಿವಾಹವು ದಂಪತಿಗಳ ಮಾನಸಿಕ, ಬೌದ್ಧಿಕ ಮತ್ತು ಆತ್ಮಶಕ್ತಿಗಳ ಅಭಿವೃದ್ಧಿಗೆ ಸಹಾಯಮಾಡುವ ಪವಿತ್ರ ಕಾರ್ಯವಾಗಿದೆಯೆಂದೇ ತಿಳಿಯಬೇಕು. ಕಣ್ಣಿಗೆ ಕನ್ನಡಕವನ್ನು ಹಾಕಿಕೊಳ್ಳುವುದು ನೋಡುವ ಶಕ್ತಿಯು ಹೆಚ್ಚಬೇಕೆಂದೇ ವಿನಾ ಕಡಿಮೆಯಾಗಬೇಕೆಂದಲ್ಲವಷ್ಟೆ. ಅದರಂತೆಯೇ ವಿವಾಹದ ಉದ್ದೇಶವು ತಮ್ಮಲ್ಲಿರ ತಕ್ಕ ಮಾನಸಿಕ, ಬೌದ್ಧಿಕ ಮತ್ತು ಆತ್ಮಶಕ್ತಿಗಳನ್ನು ಹೆಚ್ಚಿಸಿಕೊಳ್ಳಲು ಗಂಡನಿಗೆ ಹೆಂಡತಿಯು, ಹೆಂಡತಿಗೆ ಗಂಡನು ಸಹಾಯವಾಗಬೇಕೆಂದೇ ವಿನಾ ಪ್ರತಿಬಂಧಕವಾಗಬೇಕೆಂದಲ್ಲ. ಸಹಾಯವಾದರೆ ಲಗ್ನ ; ಪ್ರತಿಬಂಧಕವಾದರೆ ವಿಘ್ನ.

ಇಬ್ಬರಲ್ಲಿ ಪ್ರೇಮ ವಿಶ್ವಾಸಗಳು ನೆಲೆಸಬೇಕು. ಮಾನಸಿಕ ಯಾವ ಮುಚ್ಚುಮರೆಗಳೂ ಇಲ್ಲದಂತಹ ನಿರ್ವಂಚನೆಯು ಅವರಲ್ಲುಂಟಾಗಬೇಕು. ದೇಹ ಭಿನ್ನವಾಗಿದ್ದರೂ ಮನಸ್ಸು ಒಂದಾಗಬೇಕು. ಹಾಗೆ ಮನ-ಮನಗಳನ್ನು ಕೂಡಿದರೆ, ಭಾವ-ಭಾವದಲ್ಲಿ ಬೆರೆಯುತ್ತದೆ. ಆಗ ಒಬ್ಬರು ಇನ್ನೊಬ್ಬರಿಗೆ ಇಚ್ಛಾಮಾತ್ರದಲ್ಲಿಯೇ ನೆರವಾಗುತ್ತಾರೆ. ಈ ವಿಧದ ಸಂಬಂಧವು ಗುರು-ಶಿಷ್ಯರಲ್ಲಿ, ತಂದೆ-ಮಕ್ಕಳಲ್ಲಿ, ಅಣ್ಣ-ತಮ್ಮಂದಿರಲ್ಲಿ, ಮಿತ್ರರಲ್ಲಿ ಕೂಡ ಉಂಟಾಗಬಹುದು. ಅಂತಹ ಆತ್ಮೀಯ ಸಂಬಂಧವು ಆ ಉಭಯ ವ್ಯಕಿಗಳ ಮಾನಸಿಕ,

ಬೌದ್ಧಿಕ ಮತ್ತು ಆತ್ಮಶಕ್ತಿಗಳ ಅಭಿವೃದ್ಧಿಗೆ ಕಾರಣವಾಗುತ್ತದೆ.

ದಂಪತಿಗಳಲ್ಲಾದರೋ ಈ ಪ್ರಕಾರ ಆತ್ಮೀಯ ಸಂಬಂಧವಿದ್ದು ವಿಷಯವಾಸನೆಯ ಶಮನವು ಒಂದು ಅಂತಹ ಸಂಬಂಧದ್ಯೋತಕ ಕೃತಿಯಾಗಿರಬೇಕೇ ವಿನಾ ಅದಕ್ಕಾಗಿಯೇ ದಾಂಪತ್ಯವು ಏರ್ಪಡಬಾರದು. ಇದೇ ವಿವಾಹದ ಶ್ರೇಷ್ಠಕರವಾದ ಉದ್ದೇಶವು. ಇಂತಹ ಪರಮ ಪವಿತ್ರವಾದ ಉದ್ದೇಶದಿಂದಲೇ ವಿವಾಹ ಪದ್ಧತಿಯು ಏರ್ಪಡಬೇಕು. ಹಾಗಾದರೆ ಈಗಿನ ವಿವಾಹಪದ್ಧತಿಯಲ್ಲಿಯ ಅನೇಕ ದೋಷಗಳು ದೂರಾಗುತ್ತವೆ. ವಿಷಯವಾಸನೆಯ ಶಮನೋಪಕರಣಗಳ ಜೊತೆಗೂಳಿಸುವ ಸಮಾರಂಭವೇ ವಿವಾಹ ಸಮಾರಂಭವೆಂಬ ತಪ್ಪುಕಲ್ಪನೆ ನಿವಾರಣೆಯಾಗಬೇಕು. ಸ್ವಾಮಿ ರಾಮತೀರ್ಥರು ಹೇಳಿರುವಂತೆ ವಿವಾಹವು ಆತ್ಮೋನ್ನತಿಗೆ ಸಹಾಯವಾಗುವ ಉಭಯ ಪವಿತ್ರ ವ್ಯಕ್ತಿಗಳ ಸಂಬಂಧ ಸಮಾರಂಭವೆಂದೇ ಜನರು ತಿಳಿಯಬೇಕು.

ವಿವಾಹ ಪದ್ಧತಿ

ವಿವಾಹವು ವಿಷಯವಾಸನೆಯ ಶಮನಕ್ಕಾಗಿಯೇ ಏರ್ಪಟ್ಟದೆಯೆಂದು ವಧೂವರರು ತಿಳಿಯಬಾರದು. ತಾಯಿ-ತಂದೆಗಳಾಗಲಿ ಅಥವಾ ಗುರುಹಿರಿಯರಾಗಲಿ ವಿವಾಹವನ್ನು ಅದಕ್ಕಾಗಿಯೇ ಮಾಡುತ್ತಿದ್ದೇವೆಂತಲೂ ಗ್ರಹಿಸಬಾರದು. ವಧೂವರರ ಮಾನಸಿಕ ಬೌದ್ಧಿಕ ಮತ್ತು ಆತ್ಮೋನ್ನತಿಗಳಿಗಾಗಿಯೇ ವಿವಾಹಸಮಾರಂಭವನ್ನು ಜರುಗಿಸತಕ್ಕದ್ದೆಂದು ಸಕಲರೂ ಭಾವಿಸಬೇಕು. ಹಾಗೆ ತಿಳಿದು ವಿವಾಹವನ್ನು ಜರುಗಿಸಿದ್ದಾದರೆ ಆ ವಧೂವರರ ವಿಷಯವಾಸನೆಯ ಶಮನವೂ ತಾನಾಗಿಯೇ ಸಾಧ್ಯವಾಗುತ್ತದೆಂದು ಕಳೆದ ಪ್ರಕರಣದಲ್ಲಿ ವಿವರಿಸಿದ್ದಾಗಿದೆಯಷ್ಟೆ.

ನೆರಳಿಗಾಗಿಯೇ ಒಂದು ಗಿಡವನ್ನು ಹಚ್ಚುವುದು ಬೇರೆ. ಹಣ್ಣಿಗಾಗಿಯೇ ಹಚ್ಚುವ ಗಿಡ ಬೇರೆ, ನಮಗೆ ನೆರಳೇ ಬೇಕಾಗಿದ್ದರೆ ಬೇವಿನ ಗಿಡವನ್ನೊ ಅಥವಾ ಆಲದ ಮರವನ್ನೊ ಬೆಳೆಸುತ್ತೇವೆ. ಹಣ್ಣೇ ಬೇಕಾಗಿದ್ದರೆ ಮಾವಿನ ಸಸಿಯನ್ನೋ ಅಥವಾ ನೇರಲ ಮರವನ್ನೋ ಬೆಳೆಸುತ್ತೇವೆ. ಇವು ನಾನು ಹಣ್ಣನ್ನು ಮಾತ್ರವೇ ಕೊಡುತ್ತೇನಲ್ಲದೆ ನೆರಳನ್ನೇನೊ ಕೊಡುವುದಿಲ್ಲವೆಂದು ಹೇಳುತ್ತವೆಯೇ ? ಇಲ್ಲವೇ ಇಲ್ಲ. ಹಣ್ಣಿನ ಜೊತೆಗೆ ನೆರಳೂ ದೊರೆಯುತ್ತದಷ್ಟೆ. ಆದರೆ ನೆರಳಿಗಾಗಿಯೇ ಹಚ್ಚಿದ ಬೇವಿನ ಮರದ ಹಣ್ಣು ನಮಗೇನು ತಿನ್ನಲಿಕ್ಕೆ ಬರುವುದೇ ? ಅದರಿಂದ ನೆರಳೊಂದೇ ನಮಗೆ ದೊರೆಯುವುದು.

ನಮ್ಮ ಉದ್ದೇಶದಂತೆ ಹೇಗೆ ಬೇರೆ ಬೇರೆ ಗಿಡಗಳನ್ನು ಹಚ್ಚಿ ಅವುಗಳಿಂದಾಗುವ ಬೇರೆ ಬೇರೆ ಪ್ರಯೋಜನಗಳನ್ನು ಹೊಂದುತ್ತಿದ್ದೇವೆಯೋ ಹಾಗೆಯೇ ವಿವಾಹದ ಉದ್ದೇಶದಲ್ಲಿಯೂ ಬೇರೆ ಬೇರೆ ಇರುವುದರಿಂದ ಜನರು ಬೇರೆ ಬೇರೆ ಸ್ಥಿತಿಗಳನ್ನು ಹೊಂದುತ್ತಿದ್ದಾರೆ. ವಿಷಯೋಪಭೋಗಕ್ಕಾಗಿಯೇ ಲಗ್ನವಾಗತಕ್ಕದೆಂಬ ಉದ್ದೇಶವುಳ್ಳವರು ನೆರಳನ್ನೇ

ಅಪೇಕ್ಷಿಸಿ ಬೇವಿನ ಮರವನ್ನು ಬೆಳೆಸಿದಂತೆಯೇ ಸರಿ. ಅವರಿಗೆ ವಿಷಯೋಪಭೋಗವೇನೊ ದೊರೆಯುವುದು. ಆದರೆ ಮಾನಸಿಕ, ಬೌದ್ಧಿಕ ಮತ್ತು ಆತ್ಮೋನ್ನತಿಯ ಹಿತಕರ ಫಲಗಳೇನೂ ದೊರೆಯುವುದಿಲ್ಲ.

ಆತ್ಮೋನ್ನತಿಗಾಗಿಯೇ ವಿವಾಹವಾಗತಕ್ಕದ್ದೆಂಬ ಉದ್ದೇಶವುಳ್ಳವರು ಫಲಕ್ಕಾಗಿಯೇ ಮಾವಿನ ಗಿಡವನ್ನು ಹಚ್ಚಿ ಬೆಳೆಯಿಸಿದವರಂತೆಯೇ ಸರಿ. ಅಂತಹ ದಂಪತಿಗಳು ಮಾವಿನ ಹೂವು, ಕಾಯಿ ಮತ್ತು ಹಣ್ಣುಗಳನ್ನು ಹೊಂದಿ ಸುಖಿಸುವವರಂತೆ ಮಾನಸಿಕ, ಬೌದ್ಧಿಕ, ಮತ್ತು ಆತ್ಮಾನಂದಗಳನ್ನು ಪಡೆಯುವರಲ್ಲದೆ ಮಾವಿನಗಿಡದ ನೆರಳಿನಿಂದ ತಾಪವನ್ನು ನಿವಾರಣೆಮಾಡಿಕೊಳ್ಳುವವರಂತೆ ವಿಷಯವಾಸನೆಯನ್ನು ಶಮನಮಾಡಿಕೊಳ್ಳುವರು.

ಯಾವಾತನು ಯಾವ ಗಿಡವನ್ನು ಹಚ್ಚುತ್ತಾನೆಯೋ ಅದರ ಮೇಲಿಂದ ಆತನ ಉದ್ದೇಶವನ್ನು ತಿಳಿದುಕೊಳ್ಳಬಹುದಲ್ಲವೆ? ಅದೇ ಪ್ರಕಾರ ವಿವಾಹಗಳ ಪದ್ಧತಿಯ ಮೇಲಿಂದಲೇ ವಿವಾಹವಾಗುವವರ ಮತ್ತು ವಿವಾಹ ಮಾಡುವವರ ಉದ್ದೇಶಗಳನ್ನು ಕಂಡುಕೊಳ್ಳಬಹುದು ಈ ವರೆಗಿನ ಅನುಭವದ ಮೇಲಿಂದ ವಿವಾಹಗಳ ಎಂಟು ಪದ್ಧತಿಗಳುಂಟಾಗಿವೆಯೆಂಬುದು ಹಿಂದೂ ಧರ್ಮಶಾಸ್ತ್ರದ ಮೇಲಿಂದ ಗೊತ್ತಾಗುತ್ತದೆ. ಆ ಎಂಟು ಪ್ರಕಾರಗಳ ಮುಖ್ಯವಾದ ರೀತಿ ನೀತಿಗಳು ಹೀಗಿವೆ.

ಸ್ಮೃತಿಸಮ್ಮತ ವಿವಾಹಗಳು

೧. ಬ್ರಾಹ್ಮ ವಿವಾಹ: ವಿದ್ಯೆ ಮತ್ತು ಸದಾಚಾರಗಳಿಂದ ಕೂಡಿದವನಾಗಿಯೂ ಕನ್ಯೆಯನ್ನು ಯಾಚಿಸಿದವನಾಗಿಯೂ ಇರತಕ್ಕ ವರನಿಗೆ ಅಲಂಕಾರಯುಕ್ತಳಾದ ಕನ್ಯೆಯನ್ನು ಆದರದಿಂದ ದಾನವಾಗಿ ಕೊಡುವುದು.

೨. ದೈವ ವಿವಾಹ: ಜ್ಯೋತಿಷ್ಟೋಮಾದಿ ಯಜ್ಞಗಳು ನಡೆದಾಗ ಋತ್ವಿಕ್ಕರ್ಮ ಮಾಡುತ್ತಿರುವವರಿಗೆ ಅಲಂಕಾರಯುಕ್ತ,ಕನ್ಯೆಯನ್ನು ದಾನವಾಗಿ ಕೊಡುವುದು.

೩. ಆರ್ಷ ವಿವಾಹ: ವರನಿಂದ ಧರ್ಮಕ್ಕಾಗಿ ಎಂದರೆ ಯಾಗಸಿದ್ಧಿಗಾಗಿ ಕನ್ಯೆಗೆ ಕೊಡಲಿಕ್ಕೋಸ್ಕರ ಒಂದು ಅಥವಾ ಎರಡು ಗೋಮಿಥುನ (ಒಂದು ಆಕಳು ಒಂದು ಎತ್ತು) ಗಳನ್ನು ತೆಗೆದುಕೊಂಡು ಕನ್ಯಾದಾನ ಮಾಡುವುದು.

೪. ಪ್ರಾಜಾಪತ್ಯ ವಿವಾಹ: ವಧೂವರರೀರ್ವರು ಧರ್ಮಾಚರಣೆಗಳನ್ನು ಆಚರಿಸಬೇಕೆಂದು ಕನ್ಯಾದಾನದ ಪೂರ್ವದಲ್ಲಿ ನಿಯಮ ಮಾಡಿ ಆಮೇಲೆ ಕನ್ಯಾದಾನ ಮಾಡುವುದು.

೫. ಆಸುರ ವಿವಾಹ: ಕನ್ಯೆಯ ಜಾತಿಯವರಿಗೆ ಮತ್ತು ಕನ್ಯೆಗೆ ಶಕ್ತಿಗನುಸರಿಸಿ ಸ್ವಸಂತೋಷದಿಂದ ದ್ರವ್ಯವನ್ನು ಕೊಟ್ಟು ಕನ್ಯೆಯನ್ನು ವಿವಾಹವಾಗುವುದು.

೬. ಗಾಂಧರ್ವ ವಿವಾಹ: ಕನ್ಯೆ ಮತ್ತು ವರ ಇವರಿಬ್ಬರೂ ಪರಸ್ಪರ ಪ್ರೇಮದಿಂದ

ವಿವಾಹವಾಗುವುದು.

೭. ರಾಕ್ಷಸ ವಿವಾಹ: ಕನ್ಯೆಯನ್ನು ಬಲಾತ್ಕಾರದಿಂದ ಹಿಡಿದು ತಂದು ಲಗ್ನವಾಗುವುದು.

೮. ಪೈಶಾಚಿಕ ವಿವಾಹ: ಮಲಗಿದ ಅಥವಾ ಮದ್ಯಾದಿ ಮಾದಕ ಪದಾರ್ಥ ಸೇವಿಸಿದ ಸ್ತ್ರೀಯಳ ಸಂಭೋಗ.

ಮನುಸ್ಮೃತಿಯ ಮೂರನೆಯ ಅಧ್ಯಾಯದಲ್ಲಿ ಈ ಪ್ರಕಾರ ವಿವಾಹದ ಎಂಟು ಪ್ರಕಾರಗಳು ವಿವರಿಸಲ್ಪಟ್ಟಿವೆ. ಈ ಎಂಟು ರೀತಿಯಲ್ಲಿ ಮೊದಲಿನ ಆರು ಪ್ರಕಾರಗಳು ಬ್ರಾಹ್ಮಣರಿಗೂ, ಆಸುರೀ ಮೊದಲಾದ ಕಡೆಯ ನಾಲ್ಕು ರೀತಿಗಳು ಕ್ಷತ್ರಿಯರಿಗೂ, ವೈಶ್ಯ ಮತ್ತು ಶೂದ್ರರಿಗೆ, ಆಸುರಿ, ಗಾಂಧರ್ವ, ಮಧ್ಯಮ ಮತ್ತು ರಾಕ್ಷಸ, ಪೈಶಾಚ ಕನಿಷ್ಠ ವಿವಾಹ ಪದ್ಧತಿಗಳೆಂದು ಸ್ಮೃತಿಕಾರರ ಅಭಿಪ್ರಾಯ.

ಸಾವಿರಾರು ವರುಷಗಳಿಂದ ಹಿಂದುಗಳಲ್ಲಿದ್ದ ಈ ವಿವಾಹ ಪದ್ಧತಿಗೂ ಈಗಿನ ಪದ್ಧತಿಗೂ ಮಹದಂತರವಿದೆ. ಏಕೆಂದರೆ ಆಗ ವಿವಾಹದ ಉದ್ದೇಶವೇ ಬೇರೆಯಾಗಿದ್ದಿತು. ಈಗ ಸುಧಾರಿಸಿದ ಹಿಂದುಗಳ ವಿವಾಹದ ಉದ್ದೇಶವೇ ಬೇರೆಯಾಗುತ್ತಾ ಇದೆ. ಇಂಗ್ಲಿಷರ ಪ್ರಭುತ್ವದಿಂದಲೂ ಪಾಶ್ಚಾತ್ಯ ಶಿಕ್ಷಣದಿಂದಲೂ ಕಳೆದ ೫೦-೬೦ ವರ್ಷಗಳಲ್ಲಿ ಹಿಂದು ಜನಾಂಗದ ವಿಚಾರಸರಣಿಯೇ ಬೇರೆಯಾಗಿದೆ. ಅಂತೆಯೇ ಈಗ ನಾನತರದ ವಿವಾಹ ಪದ್ಧತಿಗಳುಂಟಾಗಿವೆ.

ಈ ಸ್ಮೃತಿಕಾರರ ಅಭಿಪ್ರಾಯದಲ್ಲಿ ಕನ್ಯೆಯು ದಾನವಾಗಿ ಕೊಡಲ್ಪಡತಕ್ಕಂತಹ ಒಂದು ವಸ್ತುವಾಗಿದ್ದಂತೆ ತೋರುತ್ತದೆ. ಅಂತೆಯೇ ಉತ್ತಮ ಪದ್ಧತಿಯೆಂದು ತಿಳಿಯಲ್ಪಡುವ ಮೊದಲಿನ ನಾಲ್ಕು ರೀತಿಗಳಲ್ಲಿಯೂ ಕನ್ಯೆಯನ್ನು ದಾನವಾಗಿ ಕೊಡಬೇಕೆಂದೇ ಹೇಳಿದೆ. ಆ ಕನ್ಯೆಗೇನೊ ವಿವಾಹದ ವಿಷಯದಲ್ಲಿ ಸ್ವಾತಂತ್ರ್ಯವಿಲ್ಲ. ಯಾವ ವಿದ್ಯಾಭ್ಯಾಸದ ಅಗತ್ಯವೂ ಇಲ್ಲ. ತಾಯಿ ತಂದೆಗಳು ಯಾವ ವರನಿಗೆ ದಾನ ಮಾಡುತ್ತಾರೆಯೋ ಆತನಲ್ಲಿ ಅವಳಿದ್ದುಕೊಂಡು ಸಂಸಾರ ಯಾತ್ರೆಯನ್ನು ಸಾಗಿಸಬೇಕು. ಆ ಕನ್ಯೆಯ ಮುಂದಣ ಎಲ್ಲ ಹಿತಗಳ ಹೊಣೆಗಾರಿಕೆಯನ್ನು ತಾಯಿತಂದೆಗಳೆ ಆಲೋಚಿಸುವವರೇ ವಿನಾ ಕನ್ಯೆಯೇನೂ ಯೋಚಿಸಬೇಕಾದುದಿಲ್ಲ.

ಇದೇ ಪದ್ಧತಿಯೇ ಹಿಂದು ಸಮಾಜದ ಜನಸಾಮಾನ್ಯರಲ್ಲಿ ಈಗಲೂ ಇದೆ. ಆದರೆ ಸುಶಿಕ್ಷಿತರಲ್ಲಿ ಮಾತ್ರ ಈ ಪದ್ಧತಿಯು ಉಳಿದಿಲ್ಲ. ಕನ್ಯೆಯೇ ವಿವಾಹದ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲಾರಂಭಿಸಿದ್ದಾಳೆ. ತನಗೆ ಬೇಕಾದ ವರನನ್ನು ಆರಿಸಿಕೊಳ್ಳುವ ಇಚ್ಛೆಯು ಹೆಚ್ಚುತ್ತಲಿದೆ. ಕನ್ನೆಯ ಅಭಿಪ್ರಾಯವನ್ನು ಕೇಳಿಯೇ ವಿವಾಹ ಮಾಡಿಕೊಡುವ ರೂಢಿಯು ಪ್ರಾರಂಭವಾಗುತ್ತಲಿದೆ. ಕನ್ಯೆಯು ಕೂಡ ವಿದ್ಯೆ ಮತ್ತು ಕಲೆಗಳನ್ನು ಕಲಿತಿರಬೇಕೆಂಬ ಅಭಿಪ್ರಾಯವು ಜನರಲ್ಲಿ ಹೆಚ್ಚಾಗಿಯೇ ಪ್ರಸಾರವಾಗುತ್ತಲಿದೆ.

ಸ್ಮೃತಿಕಾಲದ ವಿವಾಹ ಪದ್ಧತಿಗಳನ್ನು ನೋಡಿದರೆ ವಿಷಯೋಪಭೋಗದ ಉಪಕರಣಗಳ ಜೊತೆಗೊಳಿಸುವುದೇ ವಿವಾಹದ ಮುಖ್ಯೋದ್ದೇಶವಿದ್ದಂತೆ ತೋರುತ್ತದೆ. ಅಂತೆಯೇ ತನ್ನ ವಿವಾಹದ ವಿಷಯದಲ್ಲಿ ಕನ್ಯೆಗೆ ಎಳ್ಳಷ್ಟಾದರೂ ಯೋಚಿಸುವ ಅವಕಾಶವನ್ನೇ ಇಟ್ಟಿರಲಿಲ್ಲ. ಆಗಿನ ಉದ್ದೇಶವು ಈಗ ಬೇರೆಯಾಗುತ್ತಾ ನಡೆದಿದೆ. ದಂಪತಿಗಳ ಎಲ್ಲ ತರಹದ ಉನ್ನತಿಗಳಿಗೂ ಪರಸ್ಪರರು ಸಹಾಯಕರಾಗಬೇಕೆಂಬ ವಿಚಾರವು ಈಗೀಗ ಹೆಚ್ಚುತ್ತಿದೆ. ಅಂತೆಯೇ ಈಗ ಹಿಂದಿನ, ಹೊಸತರದ ಮತ್ತು ಇವೆರಡು ಕೂಡಿದ ಅಂತು ಮೂರು ಪ್ರಕಾರದ ವಿವಾಹ ಪದ್ಧತಿಗಳು ಆಚರಣೆಯಲ್ಲಿವೆ.

(ಮುಂದುವರೆಯುವುದು)

※ ※ ※

(೫೦ನೇ ಪುಟದಿಂದ ಮುಂದುವರೆದುದು.)

ಕೊಡಲಿಲ್ಲ. ಸರ್ಕಾರ ಈ ಘಟನೆಯನ್ನು ಉಪಾಯವಾಗಿ ತೊಳೆದುಕೊಳ್ಳಲು ಪ್ರಯತ್ನಿಸಿತು. ಇದರಿಂದ ಗಾಂಧೀಜಿ ಮುಂತಾದವರಿಗೆ ತುಂಬಾ ಆಘಾತವಾಯಿತು. ಅದುವರೆಗೆ ಸರಕಾರದ ಜೊತೆ ಸಹಕಾರದಿಂದಿರಬೇಕೆಂದು ಹೇಳುತ್ತಿದ್ದ, ಗಾಂಧೀ, ಆ ನಂತರ ಅಸಹಕಾರ ಚಳವಳಿಯ ನಾಯಕರಾದರು. 'ಜಲಿಯನ್ ವಾಲಾಬಾಗ್' ದುರಂತದ ಸ್ಫೂರ್ತಿಯಿಂದಲೇ ಮುಂದೆ ಕ್ರಾಂತಿಕಾರಿ ಚಳವಳಿಗೆ ಬಲ ಬಂದಿತು.

ಅಂದು ಬಲಿದಾನ ಹೊಂದಿದವರ ಧ್ವನಿ ಇಂದೂ ಕೇಳುತ್ತಿದೆ,

ಏಳಿರೈ ಸೋದರಿರ ನಿಮಗಾಗಿ ಮಡಿದೆಮ್ಮ
ಮರೆಯದಿರಿ, ನಿಮ್ಮಣ್ಣ ತಮ್ಮದಿರನು,
ನಿಮ್ಮಂತೆ ನಾವಿದ್ದು ಉಸಿರೆಳೆದು ನಲಿದುಲಿದು
ಒಲಿದೊಲಿಸಿ ಬಾಳಿದೆವು; ಮೊನ್ನೆ ಮೊನ್ನೆ.
ಸ್ವಾತಂತ್ರ್ಯ ಸಾಧನೆಗೆ ಸಂಗ್ರಾಮ ದೇವತೆಗೆ
ರಕ್ತ ತರ್ಪಣವಿತ್ತು, ಎದೆಯ ಹರಿದು,
ಹೊರಳಿದೆವು ನೆಲಕೆ. ಓ ಉರುಳಿ ಬಿದ್ದೆವು ನೆಲಕೆ
ಕೈಯ ಕತ್ತಿಯನೆಸೆದು ನಿಮ್ಮ ಕೈಗೆ,
ಮತ್ತೆ ಬಾವುಟವೆಸೆದು ನಿಮ್ಮ ರಕ್ಷೆಯವಶಕೆ,
ಹಿಡಿದೆತ್ತಿ ಮುಂಬರಿವಿರೆಂದು ನಂಬಿ।

—(ಕುವೆಂಪು)

ಅವರ ನಂಬಿಕೆಯನ್ನು ಹುಸಿಗೊಳಿಸಬಾರದೆಂಬ ಪ್ರಜ್ಞೆಯೇ, ಅವರಿಗೆ ನಾವು ಸಲ್ಲಿಸಬಹುದಾದ ಶ್ರದ್ಧಾಂಜಲಿ.

ಜೈ ಹಿಂದ್.

೧. ಅರ್ಪಣೆ

ಶ್ರೀಮಾತೆ ಎನ್ನ ಮನ ಮಂದಿರಕೆ ದಯಮಾಡು
ಭಕ್ತಳಿದೊ ನಿನಗಾಗಿ ಹಂಬಲಿಸುತಿಹಳು ॥ಪ॥

ದುಷ್ಟ ನಿಗ್ರಹಕಂದು ಪರಮಾತ್ಮ ಬಂದಂತೆ
ಅಜ್ಞಾನವೆಂಬಸುರ ಮರ್ದನಕೆ ವೈದೋರು ॥ಅ.ಪ॥

ನೀನಿಂದು ಬರುವಾಗ ಕೊಂಬು ಕಹಳೆಗಳಿಲ್ಲ.
ನಾ ನುಡಿವ ಶಿವಮಂತ್ರ ಜಯ ಘೋಷವು ।
ನಿಮಗೆ ಕುಳ್ಳಿರೆ ನೀಡೆ ದಿವ್ಯಪೀಠಗಳಿಲ್ಲ
ಎನ್ನಂತರಂಗವೇ ರತ್ನಸಿಂಹಾಸನಾ ।
ನಿಮ್ಮ ಪಾದವ ತೊಳೆಯೆ ಶುದ್ಧ ಜಲ ದೊರೆತಿಲ್ಲ
ಎನ್ನ ಆನಂದ ಹನಿ ಸುರಿಯುತಿಹೆನು ।
ಪೂಜಿಸಲು ಬಗೆಬಗೆಯ ಹೂಗಳನು ತಂದಿಲ್ಲ
ಎನ್ನ ಹೃತ್ಕಮಲವೇ ಸೌಗಂಧಪುಷ್ಪ !
ಶೃಂಗರಿಸೆ ಎನ್ನಲ್ಲಿ ಮುತ್ತು ರತ್ನಗಳಿಲ್ಲ
ನಾಗ್ಗೈವ ಕರ್ಮಗಳೆ ವಸನ ಆಭರಣ ।
ನೈವೇದ್ಯ ನೀಡುವರೆ ಭಕ್ಷ್ಯಬೋಜ್ಯಗಳಿಲ್ಲ
ಎನ್ನ ಶರಣಾಗತಿಯೆ ನಿಮಗೆ ಮೃಷ್ಟಾನ್ನ ।
ಜ್ಯೋತಿಯನು ಬೆಳಗುವರೆ ಎಲ್ಲಿಂದ ತರಲಿನಾ ?
ಎನ್ನ ಕಣ್ಗಳ ಬೆಳಕೆ ಮಂಗಳಾರತಿಯೂ ।
ಗುರು ಬಸವ ಶರಣೆನುತ ಪೂರೈಸಿ
ಜನ್ಮ ಸಾರ್ಥಕವಾಗೆ ಸೆರಗೊಡ್ಡಿ ಬೇಡುವೆನು ।
ಶ್ರೀ ಸಚ್ಚಿದಾನಂದ ಸುಪ್ರೀತೆ ನೀಡೆನಗೆ
ದಿವ್ಯಾನುಗ್ರಹವೆಂಬ ಪುಣ್ಯಪ್ರಸಾದ ॥

೨. ಮಂಗಲಗೀತೆ

ಜಯ ಜಯತು ಶ್ರೀಮಾತೆ ಜಯ ಜಯತು ಜಗಜ್ಜನನಿ
ಜಯ ಜಯತು ಅಕ್ಕ ಮಹಾದೇವಿ ತನುಜೆ ॥
ಜಯತು ಮಾನಿನಿ ಗುರುವೆ ವಿಶ್ವ ಜನವಂದಿತೆ

ಜಯತು ಪರಿಶಿವ ಜಾತೆ ಭಕ್ತ ಜನ ಸಂಪ್ರೀತೆ ।
ಜಯತು ಜ್ಞಾನದ ಸಿಂಧು ಜಯತು ದೀನರ ಬಂಧು
ಜಯತು ಜಯ ಗುರು ಬಸವ ಶರಣೆ ಶ್ರೀಮಾತಾ ।
ಜಯತು ಧರ್ಮದ ಜ್ಯೋತಿ ಪರಮ ತೇಜದ ಮೂರ್ತಿ
ಜಯತು ಭಾರತೀಯ ಸಂಪ್ರೇಮ ಪುತ್ರಿ ।
ಜಯತು ವೇದದ ಸಾರ ಗುರುಮುಕುಟ ಮಣಿಹಾರ ।
ಜಯತು ಜಗದೋದ್ಧಾರ ಜಯತು ಶ್ರೀಮಾತಾ ।
ಜಯತು ಮಂಗಳ ಮೂರ್ತಿ ಜಯತು ಪಾವನಕೀರ್ತಿ
ಜಯತು ಜಯ ಸಚ್ಚಿದಾನಂದ ಸುಪ್ರೀತೆ.

೩. ಅನುಗ್ರಹ

"ಹೆಪ್ಪಿಟ್ಟ ಹಾಲೆ"ಮಗೆ ಕೆನೆಮೊಸರು ಮುಂದೆ
ಶುದ್ದ ನವನೀತಂ ಪಡೆಯಬೇಕದರಿಂದೆ
ಎಮ್ಮ ಜೀವನವೆಂಬ ಕೆನೆ ಮೊಸರಿನಲ್ಲಿ
ಭಕ್ತಿ ಎಂಬುವ ಬೆಣ್ಣೆ ಗೋಚರಿಸಲಿ
ಮಥಿಸುವರೆ ನಿಮ್ಮನುಗ್ರಹವು ಬೇಕೆಮಗೆ
ನೀಡು ನೀ ದಯದಿಂದ ಪೂಜ್ಯ ಮಾತಾಜಿ
ಸಂಸಾರ ಸಾಗರದ ಬಿರುಸಿನಲೆಗಳ ಹೊಡೆತ
ದಿಂದ ತತ್ತರಿಸುವೀ ಕೋಟಿ ನರರಿಂಗೆ
ದಿವ್ಯವಾಣಿಯ ನಾವೆ ರಕ್ಷಣೆಯ ತೋರಿಹಿರಿ
ಇನ್ನು ಭಯವೇಕೆಮಗೆ ಪೂಜ್ಯ ಮಾತಾಜಿ
ಭಕ್ತಿ ಸಂತಸದಿಂದ ಅಡಿಗೆರಗಿ ಬೇಡುವೆನು
ಪ್ರೇಮದಿಂ ನೀಡು ನೀ ದಿವ್ಯ ಚೇತನವನ್ನು
ನಿಮ್ಮನುಗ್ರಹವೆಮಗೆ ರಕ್ಷೆಯಾಗಿರಲಿ
ನಮ್ಮಾತ್ಮದಲಿ ನಿಮ್ಮ ಜ್ಯೋತಿ ಬೆಳಗುತಲಿರಲಿ
ಎನ್ನ ಮನದಲಿ ಮೂಡುತಿರುವ ಈ ಭಾವನೆ
ನಿಮ್ಮ ಪದ ಕಮಲಗಳಿಗೆಂದೆಂದು ಅರ್ಪಣೆ
ನಿಮ್ಮ ಕಿರುಕಂದನಿಂದರ್ಪಿಸುವ ಈ ಕುಸುಮ
ನಿಮ್ಮ ಮನ ಮುಡಿಯನೇರಲು ಧನ್ಯ ಮಮ ಜನುಮ.

೪. "ದರ್ಶನ ಭಾಗ್ಯ"

ಬನ್ನಿ ಬನ್ನಿ ನೋಡ ಬನ್ನಿ ಮಾತೆ ಮಹಾದೇವಿಯ
ಭಾರತದಿ ಬೆಳಗುತಿರುವ ಯೋಗಿರತ್ನವ ॥ ಪ ॥

ಬನ್ನಿ ಬನ್ನಿ ಕೇಳ ಬನ್ನಿ ಬಸವ ವಾಣಿಯ
ಬನ್ನಿ ಬನ್ನಿ ಕೊಳ್ಳಬನ್ನಿ ಜ್ಞಾನ ಧಾನ್ಯವ ॥ ಅ.ಪ ॥

ಧ್ಯಾನ ಮಗ್ನರಾಗಿ ಕುಳಿತು ಆತ್ಮಾನಂದ ಪಡೆಯುತಿರುವ
ಭವ್ಯದಿವ್ಯ ತೇಜಮೂರ್ತಿ ಮಹಾದೇವಿಯಾ ।
ತನ್ನತನವನೆಲ್ಲ ಬಿಟ್ಟು ಧರ್ಮಕಾಗಿ ಪಣವ ತೊಟ್ಟು
ಜನತೆಗಾಗಿ ಹೃದಯ ಮಿಡಿವ ಜಗನ್ಮಾತೆಯಾ ॥ ೧ ॥

ದೇವಶಿವನ ಕರುಣೆಯಿಂದ ವಾಗ್ದೇವಿ ಸಿದ್ಧಿಯಿಂದ
ವಿಶ್ವ ಜನರ ಮನದಿ ದಿವ್ಯ ಚೇತನವ ತುಂಬುವ ।
ಪಾಪಕೂಪದಲ್ಲಿ ಬಿದ್ದು ನರಳುತಿರುವ ಮನುಜರ
ಅಮೃತವಾಣಿ ಸೇಚನದಿ ತೊಳೆವ ದೇವ ಗಂಗೆಯ ॥ ೨ ॥

ನವ್ಯತೆಯ ಸೋಂಕಿನಿಂದ ಬಳಲುತಿರುವ ಎಳೆಯರಿಗೆ
ಜ್ಞಾನ ತುತ್ತ ನೀಡಿ ಪೊರೆವ ಮಾತೆ ಮಹಾದೇವಿಯಾ ।
ಗುರುಬಸವ ಕುವರಿಯಾಗಿ ಆತ್ಮಬಲದಿ ತ್ಯಾಗಿಯಾಗಿ
ಕೋಟಿ ಜನರ ಮುಕ್ತಿಗಾಗಿ ತಾನೆ ಆದಿಶಕ್ತಿಯಾದ ॥ ೩ ॥

ಚಿತ್ರದುರ್ಗದಲ್ಲಿ ಜನಿಸಿ ದಕ್ಷಿಣಕ್ಕೆ ಹರಿದು ಬಂದ
ಪುಣ್ಯಗಂಗೆ ಪರಮ ಪೂಜ್ಯೆ ಜಗನ್ಮಾತೆಯಾ ।
ಮಂಗಳೂರ ಜನತೆಗಾಗಿ ತನ್ನ ದಿವ್ಯ ಪ್ರಭೆಯ ಬೀರಿ
ಮನದ ಅಂಧಕಾರ ನೀಗಿ ವಿಪುಲ ಕರುಣೆ ತೋರಿದ ॥ ೪ ॥

ಎಮ್ಮ ಹೃದಯ ಮಿಡಿಯುತಿರಲು ನಿಮ್ಮನಗಲಬೇಕು ಮುಂದೆ
ನಿಮ್ಮ ಅಭಯ ಹಸ್ತವಿರಲಿ ಎಮ್ಮ ಬೆಂಗಾವಲಿಗೆ
ಇದೋ ಎನ್ನ ನಮನವಿಂದು ನಿಮ್ಮ ಚರಣ ಕಮಲಗಳಿಗೆ
ದೀನ ಬಂಧು ಕರುಣೆ ತೋರಿ ನೀಡಿ ಜ್ಞಾನ ಅಮೃತ ಬಿಂದು. ॥ ೫ ॥

ಕೆ. ಎಸ್. ಶಂಕರಿ ಅಮ್ಮ, ಮಂಗಳೂರು

'ಬಸವ ಭಾರತಿ' ವಸತಿ ಸಹಿತ ವಿದ್ಯಾಲಯಕ್ಕೆ

ಮಕ್ಕಳನ್ನು ಸೇರಿಸಲು ಬಯಸುವ ಪಾಲಕರಿಗೆ ಸೂಚನೆ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಆಶ್ರಯದಲ್ಲಿ, "ಬಸವ ಗಂಗೋತ್ರಿ" ನಿವೇಶನದಲ್ಲಿ ಇದೇ ಮೇ ೨೨ರಿಂದ ೫ನೇ ತರಗತಿಯಿಂದ ಶಿಕ್ಷಣವನ್ನು ಆರಂಭಿಸಲಾಗುತ್ತಿದೆ.

೧. ರಾಜಧಾನಿಯೂ, ಸುಪ್ರಸಿದ್ಧ ಶಿಕ್ಷಣ ಕೇಂದ್ರವೂ ಆಗಿರುವ ಬೆಂಗಳೂರು

ನಗರಕ್ಕೆ ಅತ್ಯಂತ ಸನಿಹದಲ್ಲಿರುವುದಲ್ಲದೇ ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ ಕಾರಣ ವಾಹನ ಸೌಕರ್ಯ ತುಂಬ ಚೆನ್ನಾಗಿದೆ. ಬೆಂಗಳೂರಿನಿಂದ ಸತತವಾಗಿ ಸಿಟಿ ಬಸ್‌ಗಳ ಓಡಾಟವಿದೆ.

೩. ವಿದ್ಯಾರ್ಜನೆ ಮಾಡಬಯಸುವ ಮಕ್ಕಳು ನಗರದ ಸದ್ದುಗದ್ದಲಗಳಿಂದ ದೂರವಿರುವರು. ಆದರೆ ರಾಜಧಾನಿಯ ಸಂಪರ್ಕದಲ್ಲಿದ್ದು ಸಾಂಸ್ಕೃತಿಕ ಶಿಕ್ಷಣ ಪಡೆಯುವರು.

೪. ಉತ್ತಮ ಆಟದ ಬಯಲು, ಸ್ವಚ್ಛ ಹಿತಕರ ಹವೆ, "ಬಸವ ಗಂಗಾ" ನದಿಯ ತೀರಗಳು ವಿಶೇಷ ಆಕರ್ಷಣೆ.

೫. ಸ್ಪರ್ಧಾತ್ಮಕವಾಗಿ ಮಕ್ಕಳು ಮುಂದುವರಿಯಲೋಸುಗ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣವಿದ್ದರೂ, ಕನ್ನಡದ ಕಡ್ಡಾಯ ಅಧ್ಯಯನ, ಸಂಸ್ಕೃತದ ಐಚ್ಛಿಕ ಅಧ್ಯಯನವನ್ನು ಮಕ್ಕಳಿಗೆ ಒದಗಿಸಲಾಗುವುದು.

೬. ಮಕ್ಕಳು ಎಳೆಯ ವಯಸ್ಸಿನಿಂದಲೇ ಪ್ರೌಢ ಮಟ್ಟದ ಶಿಕ್ಷಣ ಸಜ್ಜನರ ಸಂಗ ಆದರ್ಶಗಳ ಚೌಕಟ್ಟಿನಲ್ಲಿ ಬೆಳೆಯುವ ಭಾಗ್ಯವಿಶೇಷ ಹೊಂದಿರುವರು.

೭. ಬುದ್ಧಿವಂತ ಮತ್ತು ಒಳ್ಳೆಯ ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರವೇಶ ಪರೀಕ್ಷೆ ಇಟ್ಟು ಆರಿಸಲಾಗುವುದು. ಪಾಲಕರ ವಿಶೇಷ ಅಪೇಕ್ಷೆಯ ಮೇರೆಗೆ ಸಾಮಾನ್ಯ ಅಂಕಗಳನ್ನು ಪಡೆದ ಮಕ್ಕಳನ್ನು ತೆಗೆದುಕೊಂಡರೂ ಅವರಿಗೆ ವಿಶೇಷ ತರಬೇತಿಯ ಯೋಜನೆ ಕಲ್ಪಿಸಲಾಗುವುದು.

ಇಂಥ ಆದರ್ಶ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಲಿಚ್ಛಿಸುವ ತಾಯಿ ತಂದೆಯರು ಈಗಿನಿಂದಲೇ ವ್ಯವಹಾರ ಆರಂಭಿಸುವ ಮನೀಷೆ ತಾಳಬೇಕಲ್ಲದೆ ಪ್ರವೇಶ ಪರೀಕ್ಷೆಗಳಿಗಾಗಿ ಬೇಸಿಗೆ ರಜದಲ್ಲಿ ಮಕ್ಕಳನ್ನು ಸಿದ್ಧಗೊಳಿಸಬೇಕು. ೭ನೇಯ ಸ್ಟಾಂಡರ್ಡ್ ಮುಗಿಸುತ್ತಿರುವ ಮಕ್ಕಳ ತಾಯಿ ತಂದೆಯರು ವಿಶೇಷ ಗಮನವನ್ನು ಇತ್ತ ಕಡೆಗೆ ಹರಿಸಲೇಬೇಕು. ಮತ್ತು ಮಾರ್ಚಿ ೧೦ರ ನಂತರ ಪ್ರಾಸ್ಪೆಕ್ಟಸ್ ಪಡೆಯಲು ೩ ರೂ.ಗಳನ್ನು ಕಳಿಸಿ, ವಿಶೇಷ ವಿವರಗಳನ್ನು ಪಡೆಯುವದೇ ಅಲ್ಲದೆ ಲಗತ್ತಿಸಿದ ಅರ್ಜಿ ಪತ್ರಗಳನ್ನು ಏಪ್ರಿಲ್ ೩೦ರ ಒಳಗೆ ತುಂಬಿ ಕಳಿಸಬೇಕು.

ತಡವಾಗಿ ಬಂದ ಅರ್ಜಿಗಳನ್ನು ಗಮನಿಸುವುದಿಲ್ಲ.

ಬಸವ ಮಂಟಪ	ಕರೆಸ್ಪಾಂಡೆಂಟ್
೨೪. ಎರಡನೆ ಬ್ಲಾಕ್, ಕಾರ್ಡ್ ರಸ್ತೆ	ಬಸವ ಭಾರತಿ ವಿದ್ಯಾಲಯ
ರಾಜಾಜಿನಗರ, ಬೆಂಗಳೂರು-೫೬೦೦೧೦	

ಮಾತು ಜ್ಯೋತಿರ್ಲಿಂಗ

ಸಂಗ್ರಹ : ಷಡಕ್ಷರಿ

ಎಲ್ಲಿ ಮಾನವನ ಆತ್ಮಗಳ ಪರೀಕ್ಷೆ ನಡೆಯುತ್ತಿದೆಯೋ, ಪರಿಷ್ಕರಿಸಲ್ಪಡುತ್ತಿದೆಯೋ, ಅಲ್ಲಿ ಪರಮಾತ್ಮ ತನ್ನ ಮಂದಿರಕ್ಕಾಗಿ ಕಂಬಗಳನ್ನು ತಯಾರಿಸುತ್ತಿದ್ದಾನೆ ಎಂದು ತಿಳಿದುಕೊಳ್ಳಿ.

ಫಿಲಿಪ್ಸ್‌ಬ್ರೂಕ್ಸ್

ನಡತೆಯೊಂದು ಶಕ್ತಿ ; ಒಂದು ಪ್ರಭಾವ. ಮಿತ್ರರನ್ನುಂಟುಮಾಡುತ್ತದೆ. ಸಹಾಯಕರನ್ನೂ, ಸಂರಕ್ಷಕರನ್ನೂ ನಿರ್ಮಿಸುತ್ತದೆ. ಧನ, ಮಾನ, ಸುಖದ ನಿಶ್ಚಿತ ದಾರಿಯನ್ನು ತೆರೆದುಕೊಡುತ್ತದೆ.

ಜೆ. ಹಾವೆಜ್

ನಿನ್ನ ವೃತ್ತಿ ಯಾವುದೋ ಅದರಲ್ಲಿಯೇ ತೊಡಗು. ನಿನ್ನ ಬುದ್ಧಿ-ವಿವೇಕ ತೋರುವ ಮಾರ್ಗ ಬಿಡಬೇಡ. ಪ್ರಕೃತಿ ನಿನ್ನನ್ನು ಹೇಗೆ ಮಾಡಲು ಬಯಸುತ್ತದೆಯೋ ಹಾಗೆಯೇ ಆಗು. ನಿನಗೆ ಗೆಲುವಾಗುವದು, ಇದರ ಹೊರತಾಗಿ ಮಾಡಲು ಬಯಸಿದರೆ, ನೀನು ಯಾರಿಗೂ ಎಲ್ಲಿಯೂ ಇಲ್ಲದೆ ಹೋಗುವೆ.

ಸಿಡ್ನಿಸ್ಮಿತ್

ಪ್ರತಿಯೊಬ್ಬರ ನಡತೆ ಚೊಕ್ಕಟವಾಗಿರಬೇಕು. ಅದಿಲ್ಲದೆ ಧರ್ಮ, ಉಪದೇಶ, ಕವಿತೆ, ಚಿತ್ರ, ನಾಟಕ, ಇವಾವುದಕ್ಕೂ ಸ್ಥಾನವೂ ಇಲ್ಲ. ಮಾನವೂ ಇಲ್ಲ.

ಜೆ. ಜಿ. ಹಾಲಂಡ್

ಮಹಾತ್ಮರಾಗಿರಿ, ಅಂದರೆ ನಿಮ್ಮ ನೆರವಿನಿಂದ ಅನೇಕರು ಮಹಾತ್ಮರಾಗುವರು.

ಲಾವೆಲ್

ನಮಗೆ ಆನಂದವನ್ನುಂಟುಮಾಡುವ ಪರಿಶ್ರಮವು ನಮ್ಮ ವ್ಯಾಧಿಗಳನ್ನು ದೂರ ಮಾಡಬಲ್ಲುದು. ಅದು ವೇದನೆಗಳಿಗೆ ಅಮೃತವಿದ್ದಂತೆ.

ಶೇಕ್ಸ್ ಫಿಯರ್

ತನ್ನ ಸಿದ್ಧಾಂತಕ್ಕಾಗಿ ಸ್ವಾರ್ಥದ ಬಲಿದಾನ ಮಾಡುವುದೇ ಉತ್ತಮರ ಲಕ್ಷಣ.

ಲಾವೆಲ್

ಕರ್ತವ್ಯವೆಂದರೆ ಇತರರು ಮಾಡಬೇಕೆಂದು ಯಾವುದನ್ನು ನಾವು ಅಪೇಕ್ಷಿಸುತ್ತೇವೆಯೋ ಆ ಕೆಲಸ.

ಅಸ್ಕರ್ ವೈಲ್ಡ್

ಸಿನಿಮಾಮಯ ಜಗತ....?	ಶಿವಮಯ ಜಗತ....?
1. ಮನರಂಜನೆ	ಶಿವರಂಜನೆ
2. ಮಿಥ್ಯಂ ಭವಂ ಬಂಧನಂ	ಸತ್ಯಂ ಶಿವಂ ಸುಂದರಂ
3. ಕತ್ತಲಲ್ಲಿ ಬಣ್ಣ ಬಣ್ಣಗಳ ಚೆಲುವು	ಬೆಳಕಿನಲ್ಲಿ ಮುಕ್ಕಣ್ಣನ ಒಲವು
4. ಕಡಿವಾಣವಿಲ್ಲದ ಕುದುರೆಗಳಿಗೆ	ಕಡಿವಾಣವಿದ್ದ ಕುದುರೆಗಳಿಗೆ
ಬಾಳಿನರಥ ಕಟ್ಟಿ ಭವಪಥದಲ್ಲಿ	ಬಾಳಿನ ರಥಕಟ್ಟಿ ಶಿವಪಥ ಪಯಣ
ಪಯಣ_ಗುರಿ_ಪತನ	ಗುರಿ_ಉತ್ಥಾನ
5. ವಿಷಯ ವಾಸನೆಯ ಉನ್ಮಾದತೆ	ಶಿವಾನುಭವದ ದೇವೋನ್ಮಾದ
6. ಗುರು_ಗುರಿಯಿಲ್ಲದ ಹಗರಣ	ಗುರು_ಗುರಿಯಿದ್ದ ಹರಗಣ
7. ಹಣ ಕೊಟ್ಟು ಹೋಗಬೇಕು	ತಮಸೋಮಾ ಜ್ಯೋತಿರ್ಗಮಯ
ಕತ್ತಲೆಗೆ	ಮೃತ್ಯೋರ್ಮಾ ಅಮೃತಂಗಮಯ
ಜ್ಯೋತಿಯಿಂದ ಕತ್ತಲೆಗೆ	ಅಸತೋಮಾ ಸತ್‌ಗಮಯ
8. ಇಂದ್ರಿಯಗಳು ಕೆರಳುತ್ತವೆ	ಇಂದ್ರಿಯಗಳು ಅರಳುತ್ತವೆ
ಭಾವ (ದಲ್ಲಿ) ದುರ್ಭಾವ	ಭಾವ (ದಲ್ಲಿ) ನಿರ್ಭಾವ_ಶಿವಭಾವ
9. ಕಣ್ಣು ಚಂಚಲ_ನಟ_ನಟಿಯರ	ಕಣ್ಣು ಶಿವಲಿಂಗ_ಶರಣ ಸಂತರ
ಅಂಗ ಪ್ರದರ್ಶನ	ದಿವ್ಯದರ್ಶನ
10. ಕಿವಿಗೆ ಸಂಗೀತ	ಕಿವಿಗೆ ಮಂತ್ರಗೀತ
11. ಬಾಳೆಲ್ಲ ಹಾಳು	ಬಾಳೆಲ್ಲಾ ಬಂಗಾರ
ಭವಸಾಗರದಲ್ಲಿ ಮುಳುಗಿದರೆ	ಶಿವ ಸಾಗರದಲ್ಲಿ ಮುಳುಗಿದರೆ
ದುಃಖ, ತೇಲಿದರೆ ಆಯಾಸ	ಶಾಂತಿ, ತೇಲಿದರೆ ಆನಂದ
12. ಶ್ರವಣ_ಸ್ಮರಣ_ಮರಣ	ಶ್ರವಣ_ಮನನ_ನಿಧಿಧ್ಯಾಸ
13. ನೋಟ_ಬೇಟಗಳ ಪಾಠ	ಶ್ರವಣ_ಮನನ_ನಿಧಿಧ್ಯಾಸ
ತರುಣ_ತರುಣಿಯರೊಡನೆ ಚೆಲ್ಲಾಟ	ಭವ್ಯಮಾಟ_ದಿವ್ಯಕೂಟಗಳ ಪಾಠ
14. ಬಾಳಿಗೆ ಭವರೋಗ	ಬಾಳಿಗೆ ಶಿವಯೋಗ

—ಸದ್ಗುರು

೧೫೦ ರೂ ಸಲ್ಲಿಸಿ, ಮಂಗಳೂರಿನಲ್ಲಿ ಆದ ಕಲ್ಯಾಣ ಕಿರಣದ ಆಜೀವ ಸದಸ್ಯರು

1. ಎಂ. ಉಮೇಶರಾವ್
2. ಶ್ರೀಮತಿ ಇಂದಿರಾ "ಪಾಲ್ಕಿ ಹೌಸ್."
3. ರಾಜೇಗೌಡ, ಲೆಕ್ಚರರ್, ಪಾಲಿಟೆಕ್ನಿಕ್.
4. ದಯಾನಂದ ಶೆಣೈ, ಕದ್ರಿಗುಡ್ಡ.
5. ಶ್ರೀಮತಿ ಭಾನುಮತಿ ರಾವ್. ಈಶ್ವರಾನಂದ ಮಹಿಳ ಸೇವಾಶ್ರಮ.
6. ಶ್ರೀಮತಿ ರಾಧಾಬಾಯಿ ಶೆಣೈ, ಗಾಂಧಿನಗರ
7. ಶ್ರೀಮತಿ ಸುಧಾಕಾಮತ್, ಪಾಂಡೇಶ್ವರ್.
8. ಸಿ. ಜಿ. ಕಾಮತ್, ಮುನಿಸಿಪಲ್ ಕೌನ್ಸಿಲರ್.
9. ಎ. ಸೀತಾರಾಮ ಶೆಟ್ಟಿ, ಸರಸ್ವತಿ ನಿಲಯ.
10. ಶ್ರೀಮತಿ ಸುಂದರಿ ಎಸ್. ಚಂದ್ರಶೇಖರ್.
11. ಶ್ರೀಮತಿ ನಿರ್ಮಲ ಬಾಳಿಗ.
12. ಶ್ರೀಮತಿ ರಾಧ ಆರ್. ಕೊಟ್ಯಾನ.
13. ಜಿ. ಸುಬ್ಬರಾಯ, ರಾಯನ್ಸ್ ಕೋಲ್ಡ್ ಹೌಸ್.
14. ರುಕ್ಮಯ್ಯ, ಡೈಮಂಡ್ ಆಟೋಮೊಬೈಲ್ಸ್.
15. ಮಧುಸೂದನ್ ಡಿ. ಕುಷೆ. ಪಿ. ವಿ. ಎಸ್.
16. ಎ. ಡಿ. ನಾಯಕ್, ಮೊಸಾಯಿಕ್ ಇಂಡಸ್ಟ್ರೀಸ್.
17. ಹೆಚ್. ಬಾಬು ಶೆಟ್ಟಿ, ಗೋರಿಗುಡ್ಡ.
18. ಗಂಗಾಧರ್ ಸಹನ್.
19. ಎಂ. ಎಸ್. ಕಾಮತ್.
20. ಸುಕುಮಾರ್ ಕಿಣಿ, ಬಿಸ್ತಿಪಡಪು, ಉಲ್ಲಾಳ.
21. ಜಿ. ಅನಂತ ನಾಯಕ್, ಸ್ಟಾಂಡರ್ಡ್ ಬೇಕರಿ.
22. ಎಂ. ಆನಂದ, ಹನುಮಾನ್ ಟಿಂಬರ್ಸ್.
23. ಶ್ರೀಮತಿ ಪ್ರೇಮಲತ ಎಸ್. ಬಸ್ರೂರ್,

24. ಶ್ರೀಮತಿ ನಾರಾಯಣಿ ರಾವ್.
25. ದೇವರಾಜ ಪೈ, ಶಾಂತಿನಗರ್.
26. ಶ್ರೀಮತಿ ಬಿ. ರಾಧ ವಿ. ಬಾಳಿಗ.
27. ಸಂಕಪ್ಪ, ಕಂಕನಾಡಿ.
28. ವಿನೋದರಾಜ್, ಕಂಕನಾಡಿ.
29. ಶ್ರೀಮತಿ ಮೋಹಿನಿ ಆಚಾರ್ಯ, ಸರಸ್ವತಿ ನಿಲಯ.
30. ಕುಮಾರ ಅರುಣಕುಮಾರ ದಾಸ್.
31. ಶ್ರೀಮತಿ ಪ್ರೇಮಲತಾದೇವಿ.
32. ಶ್ರೀಮತಿ ಲಕ್ಷ್ಮೀದೇವಿ ಗೋವಿಂದ ಪೈ.
33. ಶ್ರೀಮತಿ ಸ್ವರಸ್ವತಿ ಮಂಜುನಾಥ ಕಾಮತ.

ಭಕ್ತಿಗೀತೆ

ಓಂ ನಮಃಶಿವಾಯೆಂಬ ನಾಮದ ಬೀಜವ
ನಾಲಿಗೆ ತುದಿಯಲ್ಲಿ ಬಿತ್ತಿರೋ || ಪಲ್ಲವಿ ||


ಹೃದಯ ಹೊಲವ ಮಾಡಿ ಮನದ ನೇಗಿಲಗೂಡಿ
ಶ್ವಾಸಕೋಶವೆಂಬ ಎರಡೆತ್ತುಗಳ ಹೂಡಿ
ಜ್ಞಾನೋದಯವೆಂಬ ಹಗ್ಗ ಕಣ್ಣಿಯ ಮಾಡಿ
ನಿರ್ಮಲವೆಂಬ ಕುಂಟೆ ಹೊಡೆಯಿರಯ್ಯ. || ೧ ||

ಮದಮತ್ಸರವೆಂಬ ಮರಗಳ ಕಡಿಯುತ
ಕಾಮಕ್ರೋಧವೆಂಬ ಕಳೆಯನೆ ಕಿತ್ತು
ಪಂಚೇಂದ್ರಿಯಗಳ ಮಂಚಿಕೆಯನೆ ಹೂಡಿ
ಚಂಚಲವೆಂಬ ಪಕ್ಷಿ ಹೊಡೆಯಿರಯ್ಯ. ||೨||

ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತ್ತಿದೆ
ಸ್ವಾಮಿ ಶ್ರೀ ಕೂಡಲ ಸಂಗನ ನೆನೆದರೆ
ಹುಟ್ಟು ಸಾವು ಎಂಬುದಿಲ್ಲವಯ್ಯ. ||೩||


ಸಂಗ್ರಹ : ಮಾತಾಜಿ

ಶ್ರೀ ಬಸವಣ್ಣನವರಸು



೧೩-೩-೧೯೭೮ ರಂದು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ೩೪ನೆಯ ಹುಟ್ಟುಹಬ್ಬ ಸಮಾರಂಭದ ಚಿತ್ರ ಭಾಷಣ ಮಾಡುತ್ತಿರುವವರು ಸಭಾಧ್ಯಕ್ಷತೆ ವಹಿಸಿದ್ದ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ಬ್ಲೇಸಿಯಸ್ ಡಿಸೋಜಾ, ಅವರ ಪಕ್ಕದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಶಾಸಕ ಶ್ರೀ ಹೆಚ್. ಗಂಗಾಧರನ್.

Licence to post without pre-payment No. WPP-25



ತಿರುಮಕೂಡಲು ನರಸೀಪುರದಲ್ಲಿ, ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಪಾದ ಪೂಜೆ ಮಾಡುತ್ತಿರುವ ಸದ್ಭಕ್ತ ದಂಪತಿಗಳಾದ ಶ್ರೀ ಮತ್ತು ಶ್ರೀಮತಿ ಕುಮಾರಸ್ವಾಮಿಗಳವರು.

Correspond to :

Phone : Basava Mantap : 82335 Phone : Basava Gangotri : 3 4

Basava Mantapa

No. 24, Chord Road, 2nd Block
Rajajinagar, Bangalore-560010

Cover Printed by Bhaskar Printers, B-63